ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಹೈ ಸ್ಕೋರಿಂಗ್ ಪಂದ್ಯದ 14ನೇ ಓವರಿನ ಕೊನೆಯ ಎಸೆತದಲ್ಲಿ ವಿಲ್ ಜಾಕ್ಸ್ ಔಟಾಗಿದ್ದು ನಮ್ಮ ತಂಡಕ್ಕೆ ದೊಡ್ಡ ಹೊಡೆತ ಎನಿಸಿತು ಎಂದು ಇಂಗ್ಲೆಂಡ್ ತಂಡದ ಜೇಕಬ್ ಬೆಥೆಲ್ ಅಭಿಪ್ರಾಯಪಟ್ಟಿದ್ದಾರೆ...

07 ಮಾರ್ಚ್ 2026 ಶನಿವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 351 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ರುಚಿಯು ರಾಜಕೀಯಕ್ಕೆ ಆರೋಗ್ಯದ ಬೆಲೆ ತೆರಬೇಕಾ » 2



ಸಿದ್ದು ಬಜೆಟ್ : ರಾಜ್ಯದ ಜನರಿಗೆ ಬರೆ » 3



ಮಕ್ಕಳಿಗೆ ಜಾಲತಾಣ ಬಳಕೆ ನಿಷೇಧ » 4

# 4.48 ಲಕ್ಷ ಕೋ.ರೂ. ಗಾತ್ರದ ಬಜೆಟ್ ಮಂಡನೆ

## ಗ್ಯಾರಂಟಿ ಯೋಜನೆಗಳಿಗೆ 50,686 ಕೋ.ರೂ ಮೀಸಲು | ರಾಜ್ಯದ ಜನರ ಮೇಲೆ 1.32 ಲಕ್ಷ ಕೋ.ರೂ. ಸಾಲದ ಹೊರೆ



• ಪ್ರಜೋದಯ ವರದಿ

**ಬೆಂಗಳೂರು** : ಮುಖ್ಯಮಂತ್ರಿ, ಹಣಕಾಸು ಸಚಿವರೂ ಆಗಿರುವ ಸಿದ್ದರಾಮಯ್ಯ ಅವರು ಶುಕ್ರವಾರ ತಮ್ಮ 17ನೇ ದಾಖಲೆಯ 4,48,004 ಕೋ. ರೂ. ಗಾತ್ರದ ಬಜೆಟ್ ಮಂಡನೆ ಮಾಡಿದರು.

ಆಯವ್ಯಯದ ಒಟ್ಟು ಮೊತ್ತದಲ್ಲಿ 4 ಗ್ಯಾರಂಟಿ ಯೋಜನೆಗಳಿಗೆ 50,686 ಕೋ.ರೂ. ಅನುದಾನ ಮೀಸಲಿಟ್ಟಿದ್ದಾರೆ. ಈ ಪೈಕಿ ಯುವ ನಿಧಿಯ ಹಂಚಿಕೆ ತೋರಿಸಿಲ್ಲ. ಉಳಿದ ನಾಲ್ಕು ಗ್ಯಾರಂಟಿಗಳ ಪೈಕಿ ಗೃಹಲಕ್ಷ್ಮಿಗೆ 28,608 ಕೋ.ರೂ., ಗೃಹ ಜ್ಯೋತಿ 10,578 ಕೋ.ರೂ., ಅನ್ನ ಭಾಗ್ಯ 6,200 ಕೋ.ರೂ., ಶಕ್ತಿ ಯೋಜನೆಗೆ 5,300 ಕೋ.ರೂ. ಅನುದಾನ ನೀಡಲಾಗಿದೆ. ಒಟ್ಟು ಬಜೆಟ್‌ನ ಶೇ.11. 37 ಪಾಲು ಗ್ಯಾರಂಟಿ ಯೋಜನೆಗಳಿಗೆ ಮೀಸಲಿಡಲಾಗಿದೆ. ಇತರೆ ವಲಯಗಳಿಗೆ 1,72,757 ಕೋ. ರೂ. ಅನುದಾನ ಮೀಸಲಿಡಲಾಗಿದೆ.

ನಮ್ಮ ಸರ್ಕಾರ ಬದ್ಧತೆಯಿಂದ ಕಾರ್ಯನಿರ್ವಹಿಸುತ್ತಿದೆ. ಈ ಆಯವ್ಯಯವು ನಾಡಿನ ರೈತರ, ದಮನಿತರ, ಕಾರ್ಮಿಕರ, ಮಹಿಳೆಯರ, ಅಶಕ್ತರ, ಅಲ್ಪಸಂಖ್ಯಾತರ, ವಿದ್ಯಾರ್ಥಿ-ಯುವಜನರ, ವ್ಯಾಪಾರ ಮತ್ತು ಕೈಗಾರಿಕೋದ್ಯಮಗಳಲ್ಲಿ ತೊಡಗಿಸಿಕೊಂಡವರ ಕನಸುಗಳು ಮತ್ತು ಆತ್ಮವಿಶ್ವಾಸವನ್ನು ಪ್ರತಿಧ್ವನಿಸುವ ಜೀವಂತ ದಾಖಲೆಯಾಗಿದೆ. ನಾವು ರೂಪಿಸುವ ಯೋಜನೆಗಳು ಏಳಿಗೆಯನ್ನು ಬಯಸುತ್ತವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

**1.32 ಲಕ್ಷ ಕೋ.ರೂ. ಸಾಲ**

ಮುಖ್ಯಮಂತ್ರಿ ಸಿದ್ದರಾಮಯ್ಯ ದಾಖಲೆಯ 17ನೇ ಬಾರಿಗೆ ರಾಜ್ಯ ಬಜೆಟ್ ಮಂಡಿಸಿದ್ದು, ಬಜೆಟ್ ಗಾತ್ರ 4.48 ಲಕ್ಷ ಕೋಟಿಯಾಗಿದೆ. ಆದರೆ, ಈ ಬಾರಿ 1.32 ಲಕ್ಷ ಕೋಟಿ ಸಾಲ ಮಾಡುವುದಾಗಿ ಅವರು ಹೇಳಿದ್ದಾರೆ. ಹೀಗಾಗಿ, ಮತ್ತಷ್ಟು ಸಾಲದ ಭಾರ ರಾಜ್ಯದ ಜನರ ಮೇಲೆ ಬಿದ್ದಿದೆ.

12 ಹೊಸ ಪೊಲೀಸ್ ಠಾಣೆ

ರಾಜ್ಯದಲ್ಲಿ 12 ನೂತನ ಪೊಲೀಸ್ ಠಾಣೆ ಸ್ಥಾಪನೆಗೆ ರಾಜ್ಯ ಸರ್ಕಾರ ಮುಂದಾಗಿದೆ.ಹೊಸ ಠಾಣೆಗಳಿಗೆ ಸುಸಜ್ಜಿತ ಕಟ್ಟಡ ಮತ್ತು ಆಧುನಿಕ ಉಪಕರಣಗಳನ್ನು ಒದಗಿಸಲು ಅನುದಾನ ಮೀಸಲಿಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ

» ಎರಡನೇ ಪುಟದಲ್ಲಿ

### ಕ್ಷೇತ್ರವಾರು ಅನುದಾನ (ಕೋ.ರೂ.ಗಳಲ್ಲಿ)

**ಶಿಕ್ಷಣ** : 47,224
**ಮಹಿಳಾ-ಮಕ್ಕಳ ಕಲ್ಯಾಣ**: 34,929
**ಇಂಧನ**: 29,947
**ಗ್ರಾಮೀಣಾಭಿವೃದ್ಧಿ** 26,559
**ಲೋಕೋಪಯೋಗಿ-ಸಾರಿಗೆ**: 23,100
**ನೀರಾವರಿ**: 22,436
**ನಗರಾಭಿವೃದ್ಧಿ-ವಸತಿ**: 22,203
**ಕಂದಾಯ**: 19,843
**ಸಮಾಜ ಕಲ್ಯಾಣ**: 18,612
**ಆರೋಗ್ಯ-ಕುಟುಂಬ ಕಲ್ಯಾಣ**: 17,817
**ಒಳಾಡಳಿತ (ಗೃಹ)**: 11,424
**ಕೃಷಿ ಮತ್ತು ತೋಟಗಾರಿಕೆ**: 8,373
**ಆಹಾರ ಇಲಾಖೆ** 7,942
**ಪಶುಸಂಗೋಪನೆ-ಮೀನುಗಾರಿಕೆ**: 4,084

### ಬಜೆಟ್-2026ರ ಮುಖ್ಯಾಂಶಗಳು

- ಕರ್ನಾಟಕದ ಸಮಗ್ರ ಅಭಿವೃದ್ಧಿಗೆ 11ಜಿ ಮಾದರಿ ಆರ್ಥಿಕತೆ ಘೋಷಣೆ
- ಗ್ರಾಮ ಪಂಚಾಯಿತಿಗಳಿಗೆ ಮಹತ್ಮಾ ಗಾಂಧಿ ಹೆಸರು
- ಅನ್ನಭಾಗ್ಯ ಯೋಜನೆಯಡಿ 5 ಕೆ.ಜಿ. ಅಕ್ಕಿ ಜೊತೆ ಇಂದಿರಾ ಕಿಟ್ ವಿತರಣೆ
- 800 ಕರ್ನಾಟಕ ಪಬ್ಲಿಕ್ ಸ್ಕೂಲ್, ಸರ್ಕಾರಿ ಶಾಲೆಗಳು ಆರಂಭ
- ಎಲ್ಲಾ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ಪುನರಾರಂಭ
- 4.90 ಲಕ್ಷ ಮನೆ ನಿರ್ಮಾಣ ಕಾರ್ಯ ಪೂರ್ಣಗೊಳಿಸಲು ನಿರ್ಧಾರ
- 38 ಲಕ್ಷ ರೈತರಿಗೆ ಸಾಲ ನೀಡಲು 30,000 ಕೋ.ರೂ. ಮೀಸಲು
- ಪಶುಗಳ ರೋಗ ಪತ್ತೆಗಾಗಿ ಸಿಟಿ ಸ್ಕ್ಯಾನಿಂಗ್ ಕೇಂದ್ರ ಸ್ಥಾಪನೆ
- ರಾಜ್ಯಾದ್ಯಂತ 1,250 ಎಲೆಕ್ಟ್ರಿಕ್ ವಾಹನ ಚಾರ್ಜಿಂಗ್ ಪಾಯಿಂಟ್

### ಘೋಷಿಸಲಾದ ಹೊಸ ಕಾರ್ಯಕ್ರಮ

- ವಸುಧಾಮೃತ : ಪರಿಸರ ಸ್ನೇಹಿ ಮತ್ತು ಸುಸ್ಥಿರ ಕೃಷಿ ಪದ್ಧತಿಗಳನ್ನು ಉತ್ತೇಜಿಸಲು ಮುಂದಿನ 3 ವರ್ಷಗಳಲ್ಲಿ ಜಾರಿಯಾಗಲಿದೆ.
- ಸಸ್ಯ ಸಂಜೀವಿನಿ ಯೋಜನೆ: ಪರಿಸರ ಸ್ನೇಹಿ ಜೈವಿಕ ಪೀಡನಾಶಕ, ಜೈವಿಕ ಕೀಟನಾಶಕಗಳ ಜೊತೆ ಇತರೆ ಸುರಕ್ಷಿತ ನಿರ್ವಹಣಾ ಕ್ರಮಗಳಿಗಾಗಿ ಈ ಯೋಜನೆಯನ್ನು ಮುಂದಿನ ಮೂರು ವರ್ಷಗಳಲ್ಲಿ ಜಾರಿ ಮಾಡುವ ಉದ್ದೇಶವಿದೆ.
- ಫಲಧಾರೆ : ಜಾನುವಾರುಗಳ ಸಂತಾನೋತ್ಪತ್ತಿ ಸಮಸ್ಯೆ ನಿವಾರಣೆಗೆ 5 ಕೋ. ರೂ. ವೆಚ್ಚದಲ್ಲಿ 1000 ಗ್ರಾಮ ಪಂಚಾಯಿತಿಗಳಲ್ಲಿ ಫಲಧಾರೆ ಹೆಸರಿನಲ್ಲಿ ಶಿಬಿರ ನಡೆಸಲಾಗುವುದು.
- ಉನ್ನತ ಶಿಕ್ಷಣ ಪರಿವರ್ತನೆ ಯೋಜನೆ: 40 ಸರ್ಕಾರಿ ಪ್ರಥಮ ದರ್ಜೆ ಕಾಲೇಜು, 11 ಪಾಲಿಟೆಕ್ನಿಕ್ ಕಾಲೇಜುಗಳನ್ನು ಮಾದರಿ ಸಂಸ್ಥೆಗಳಾಗಿ ಅಭಿವೃದ್ಧಿ ಮಾಡುವ ಉದ್ದೇಶದಿಂದ 2,500 ಕೋ. ರೂ. ವೆಚ್ಚದಲ್ಲಿ ಈ ಯೋಜನೆ ಜಾರಿಗೊಳಿಸಲಾಗುವುದು.
- ಗೃಹಾಧಾರಿತ ಉಪಶಮನ ಆರೈಕೆ: ಮನೆಗಳಲ್ಲೇ ಚಿಕಿತ್ಸಾ ಸೇವೆ, ದೀರ್ಘಕಾಲೀನ, ಮಾರಣಾಂತಿಕ ಕಾಯಿಲೆಗಳಿರುವ ರೋಗಿಗಳಿಗೆ ಈ ಯೋಜನೆಯಡಿ ಆರೈಕೆ ಮಾಡಲಾಗುವುದು
- ಸೌರ ಕೃಷಿ ಯೋಜನೆ: ಈ ಯೋಜನೆಯಡಿ ಕೆಪಿಟಿಸಿಎಲ್ ಉಪಕೇಂದ್ರಗಳಲ್ಲಿ ಸೌರ ವಿದ್ಯುತ್, ಅಂದಾಜು 10,500 ಕೋ. ರೂ. ವೆಚ್ಚದಲ್ಲಿ 300 ಮೆಗಾವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಸ್ಥಾವರಗಳ ಆರಂಭ.

# ಜಿಲ್ಲೆಗಿಲ್ಲ ವಿಶೇಷ ಆದ್ಯತೆ: ನೀರಾವರಿ ಯೋಜನೆಗಷ್ಟೇ ಅನುಮೋದನೆ

• ಪ್ರಜೋದಯ ವರದಿ

**ಹಾಸನ** : ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಮಂಡಿಸಿದ ಬಜೆಟ್‌ನಲ್ಲಿ ಜಿಲ್ಲೆಗೆ ಯಾವುದೇ ಹೊಸ ಯೋಜನೆ, ವಿಶೇಷ ಪ್ಯಾಕೇಜ್, ಹೆಚ್ಚುವರಿ ಅನುದಾನ ಸಿಕ್ಕಿಲ್ಲ. ಆದರೆ, ಜಿಲ್ಲೆಯ 10 ನೀರಾವರಿ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದೆ.

ಈ ಹಿಂದೆ ಹಾಸನ ನಗರಸಭೆಯನ್ನು ಪಾಲಿಕೆಯಾಗಿ ಮೇಲ್ದರ್ಜೆಗೇರಿಸಿದ ಸಂದರ್ಭದಲ್ಲಿ 200 ಕೋ. ರೂ. ವಿಶೇಷ ಅನುದಾನ ನೀಡುವುದಾಗಿ ಘೋಷಣೆ ಮಾಡಿದ್ದ ಆಶ್ವಾಸನೆಯನ್ನೇ ಈ ಬಾರಿಯೂ ಪುನಃ ಪ್ರಸ್ತಾಪ ಮಾಡಿ, ಮಹಾತ್ಮ ಗಾಂಧಿ ನಗರ ವಿಕಾಸ್ ಯೋಜನೆ 2.0 ರಡಿ 2026-27ನೇ ಸಾಲಿನಲ್ಲಿ 200 ಕೋ. ರೂ. ಒದಗಿಸಲಾಗುವುದೆಂದು ಹೇಳಿದ್ದಾರೆ.

ಜಲಸಂಪನ್ಮೂಲ ಇಲಾಖೆಯಿಂದ ಚನ್ನರಾಯಪಟ್ಟಣ ತಾಲ್ಲೂಕಿನ 18 ಕೆರೆಗಳನ್ನು ಕುಡಿಯುವ ನೀರಿನ ಉದ್ದೇಶಕ್ಕಾಗಿ ತುಂಬಿಸುವ ಯೋಜನೆ ಹಾಗು ಅರಸೀಕೆರೆ ತಾಲ್ಲೂಕಿನಲ್ಲಿ ಎತ್ತಿನಹೊಳೆ ಗುರುತ್ವಾಕರ್ಷಣೆ ಕಾಲುವೆಯಿಂದ 9 ಕೆರೆಗಳ ಸುಧಾರಣೆ ಕಾಮಗಾರಿಗಳು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಅದೇ ರೀತಿ ಸಣ್ಣ ನೀರಾವರಿ ಇಲಾಖೆಯಿಂದ 4 ಚೆಕ್ ಡ್ಯಾಂ, 2 ಕೆರೆ, 1 ನಾಲೆ ಆಧುನೀಕರಣಕ್ಕೆ ಅನುಮೋದನೆ ಸಿಕ್ಕಿದೆ. ಲೋಕೋಪಯೋಗಿ ಇಲಾಖೆಯಿಂದಲೂ ರಸ್ತೆ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದೆ.

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಮೊದಲನೇ ಹಂತದ ಏತ ನೀರಾವರಿ ಕಾಮಗಾರಿಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡಲಾ ಗಿದೆ. 2ನೇ ಹಂತದಲ್ಲಿ ಬಾಕಿ ಇರುವ 18.73 ಕಿ.ಮೀ ಉದ್ದದ ಕಾಲುವೆ ಕಾಮಗಾರಿಗಳನ್ನು ಶೀಘ್ರವೇ ಪೂರ್ಣಗೊಳಿಸಲಾಗುವುದು. ಹೆಚ್ಚುವರಿಯಾಗಿ ನೀರನ್ನು ಸಂಗ್ರಹಿಸಿ ಸದ್ಬಳಕೆ ಮಾಡಿಕೊಳ್ಳಲು ಕೊರಟಗೆರೆ ತಾಲ್ಲೂಕಿನ ವಡೇರಹಳ್ಳಿ ಸಮೀಪ 1.2 ಟಿ.ಎಂ.ಸಿ ಸಾಮರ್ಥ್ಯದ ಸಮತೋಲನಾ ಜಲಾಶಯವನ್ನು ನಿರ್ಮಿಸಲಾಗುವುದೆಂದು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ.

**ಕಾಡಾನೆ ಸಮಸ್ಯೆಗಿಲ್ಲ ಪರಿಹಾರ**

ಮಲೆನಾಡು ಮತ್ತು ಅರೆಮಲೆನಾಡು ಭಾಗದಲ್ಲಿ ಕಾಡುತ್ತಿರುವ ಕಾಡಾನೆ-ಮಾನವ ಸಂಘರ್ಷ ತಡೆಗೆ ಆನೆ ಕಾರಿಡಾರ್ ಘೋಷಣೆ ನಿರೀಕ್ಷಿಸಲಾಗಿತ್ತು. ಕಾಡಾನೆ ಸಮಸ್ಯೆ ನಿವಾರಣೆಗೆ ಈ ಬಜೆಟ್‌ನಲ್ಲೂ ನಿರ್ದಿಷ್ಟ ಅನುದಾನ ಮೀಸಲಿಟ್ಟಿಲ್ಲ. ಮಾನವ-ವನ್ಯ ಪ್ರಾಣಿ ಸಂಘರ್ಷ ನಿವಾರಣೆಯು ಅತೀ ಮುಖ್ಯವಾದ ಕಾರ್ಯವಾಗಿರುವುದರಿಂದ ಕಳೆದ 3 ವರ್ಷಗಳಲ್ಲಿ, 1,044 ಕೋ. ರೂ. ವೆಚ್ಚ ಮಾಡಲಾಗಿದೆ. ಹೊಸದಾಗಿ ಮೂರು ಆನೆ ಕಾರ್ಯಪಡೆ ರಚನೆ ಮಾಡಿ 358 ಹುದ್ದೆಗಳ ಸೃಜಿಸಲಾಗಿದೆ . ರೈಲ್ವೆ ಬ್ಯಾರಿಕೇಡ್, ಕಂದಕ, ಸೋಲಾರ್ ಫೆನ್ಸಿಂಗ್ ಇತರೆ ರಕ್ಷಣಾ ಕಾರ್ಯ ಮಾಡಲಾಗಿದೆ ಎಂದು ಹೇಳಿದ್ದಾರೆ.

ಮಾನವ-ವನ್ಯಜೀವಿ ಸಂಘರ್ಷ ನಿವಾರಣಾ ಕಾರ್ಯತಂತ್ರ ಯೋಜನೆಯನ್ನು ಅನುಷ್ಠಾನಗೊಳಿಸಲು ಮುಂದಿನ 5 ವರ್ಷದಲ್ಲಿ 1,500 ಕೋ.ರೂ.ಗಳ ವೆಚ್ಚದಲ್ಲಿ ವಿವಿಧ ಕ್ರಮಗಳನ್ನು ಕೈಗೊಳ್ಳಲಾಗುವುದು. ಅದಕ್ಕಾಗಿ ಪ್ರಸಕ್ತ ಸಾಲಿನಲ್ಲಿ 269 ಕೋ. ರೂ.ಗಳನ್ನು ಮೀಸಲಿರಿಸಲಾಗಿದೆ ಎಂದಷ್ಟೇ ಹೇಳಿದ್ದಾರೆ. ಅದರಲ್ಲಿ ಜಿಲ್ಲೆಗೆ ಎಷ್ಟು ಅನುದಾನ ಲಭ್ಯವಾಗುತ್ತದೆ ಎಂದು ಸ್ಪಷ್ಟವಾಗಿ ತಿಳಿಸಿಲ್ಲ. ರೈಲ್ವೆ ಬ್ಯಾರಿಕೇಡ್, ಆನೆ ಧಾಮ ಯಾವುದನ್ನೂ ಪ್ರಸ್ತಾಪ ಮಾಡಿಲ್ಲ.

**ತೆಂಗು ಬೆಳೆ ಕಡೆಗಣನೆ**

ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆ ತೆಂಗು ಕೀಟ ಬಾಧೆಯಿಂದ ನಲುಗುತ್ತಿದ್ದರೂ ಬೆಳೆ ಸಂರಕ್ಷಣೆಗೆ ಸರ್ಕಾರ ವಿಶೇಷ ಕಾಳಜಿ ತೋರಿಲ್ಲ. ಕೇವಲ ತೆಂಗು ಬೆಳೆಯ ಕಪ್ಪು ತಲೆ ಹುಳು ಹಾಗು ಬಿಳಿ ನೊಣಗಳ ನಿಯಂತ್ರಣಕ್ಕಾಗಿ ವಿಶ್ವವಿದ್ಯಾಲಯ ಗಳು ಹಾಗು ಕೃಷಿ ವಿಜ್ಞಾನ ಕೇಂದ್ರಗಳ ಸಹಯೋಗದೊಂದಿಗೆ ಸಮುದಾಯ ಆಧಾರಿತ ರೋಗ ಕೀಟ ನಿಯಂತ್ರಣ ಕ್ರಮಗಳನ್ನು 10 ಕೋ. ರೂ. ವೆಚ್ಚದಲ್ಲಿ ಕೈಗೊಳ್ಳಲಾ ಗುವುದೆಂದು ತಿಳಿಸಲಾಗಿದೆ. ಈ 10 ಕೋ.ರೂ. ತೆಂಗಿಗೆ ಮಾತ್ರವಲ್ಲದೇ ಅಡಿಕೆ ಬೆಳೆಯನ್ನೂ ಒಳಗೊಂಡಿದೆ.

- ಮಹಾನಗರ ಪಾಲಿಕೆಗೆ 200 ಕೋಟಿ ಘೋಷಣೆ ಪುನರಾರ್ವತನೆ
- ಕಾಡಾನೆ-ಮಾನವ ಸಂಘರ್ಷಕ್ಕಿಲ್ಲ ಮುಕ್ತಿ

**(ಸಣ್ಣ ನೀರಾವರಿ ಯೋಜನೆಗೆ ಅನುಮೋದನೆ)**

★ ಅರಸೀಕೆರೆ ತಾಲ್ಲೂಕಿನ ಜಾವಗಲ್ ಭಾಗದಲ್ಲಿ ಎರಡು ಕಡೆ ಚೆಕ್ ಡ್ಯಾಂ
★ ಹಾಸನ ತಾಲ್ಲೂಕಿನ ಸಾಲಗಾಮೆಯಲ್ಲಿ ಚೆಕ್ ಡ್ಯಾಂ ಜೊತೆಗೆ ಸೇತುವೆ
★ ಸಕಲೇಶಪುರ ತಾಲ್ಲೂಕಿನ ರಾವುತನಹಳ್ಳಿ ಏತ ನೀರಾವರಿ ನಾಲೆ ಆಧುನೀಕರಣ
★ ಸಕಲೇಶಪುರ ತಾಲ್ಲೂಕಿನ ಐಗೂರು ಕೆರೆ ಅಭಿವೃದ್ಧಿ
★ ಅರಕಲಗೂಡು ತಾಲ್ಲೂಕಿನ ಕೆಂಚನಕಟ್ಟೆಯಲ್ಲಿ ಚೆಕ್ ಡ್ಯಾಂ
★ ಚನ್ನರಾಯಪಟ್ಟಣ ತಾಲ್ಲೂಕು ಬಾಗೂರು ಕೆರೆ ಅಭಿವೃದ್ಧಿ ಕಾಮಗಾರಿ

**(ಜಲಸಂಪನ್ಮೂಲ ಇಲಾಖೆಯ ಆಡಳಿತಾತ್ಮಕ ಅನುಮೋದನೆ)**

★ ಚನ್ನರಾಯಪಟ್ಟಣ ತಾಲ್ಲೂಕಿನ 18 ಕೆರೆಗಳ ಭರ್ತಿಗೆ ಕ್ರಮ
★ ಅರಸೀಕೆರೆ ತಾಲ್ಲೂಕಿನಲ್ಲಿ ಎತ್ತಿನಹೊಳೆ ಗುರುತ್ವ ಕಾಲುವೆ ಅಡಿಯಲ್ಲಿ 9 ಕೆರೆಗಳ ಸುಧಾರಣೆ
★ ಹೇಮಾವತಿ ನದಿಯಿಂದ ನಾಗಮಂಗಲ, ಚನ್ನರಾಯಪಟ್ಟಣ ತಾಲ್ಲೂಕುಗಳ ಕೆರೆಗಳ ಭರ್ತಿಗೆ ಕ್ರಮ
★ ಹೇಮಾವತಿ ಎಡದಂಡೆ ಕಾಲುವೆ ಪುನರ್ ನಿರ್ಮಾಣ


**ಮುಕ್ತಾಯಗೊಳಿಸಲು ಉದ್ದೇಶಿಸಿರುವ ಯೋಜನೆ**

ಜಲಸಂಪನ್ಮೂಲ ಇಲಾಖೆಯಿಂದ 2026-27ನೇ ಸಾಲಿನಲ್ಲಿ ಅರಕಲಗೂಡು ತಾಲ್ಲೂಕು ಮಲ್ಲಿಪಟ್ಟಣ ಯೋಜನೆಯನ್ನು ಮುಕ್ತಾಯಗೊಳಿಸಲು ಉದ್ದೇಶಿಸಲಾಗಿದೆ. ದುದ್ದ ಮತ್ತು ಶಾಂತಿಗ್ರಾಮ ಕುಡಿಯುವ ನೀರಿನ ಯೋಜನೆ, ಚನ್ನರಾಯಪಟ್ಟಣದ ಅಮಾನಿಕೆರೆ ಕುಡಿಯುವ ನೀರಿನ ಯೋಜನೆ, ದುದ್ದ ಮತ್ತು ಜಾವಗಲ್ ಹೋಬಳಿಯ 45 ಕೆರೆ ತುಂಬಿಸುವ ಯೋಜನೆ ಹಾಗು ಚನ್ನರಾಯಪಟ್ಟಣ ತಾಲ್ಲೂಕಿನ 124 ಕೆರೆ ತುಂಬಿಸುವ ಯೋಜನೆ ಪೂರ್ಣಗೊಳಿಸುವುದಾಗಿ ಬಜೆಟ್‌ನಲ್ಲಿ ತಿಳಿಸಲಾಗಿದೆ. ವಿಮಾನ ನಿಲ್ದಾಣ, ಕೈಗಾರಿಕೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಹೇಮಾವತಿ ಅಣೆಕಟ್ಟೆ ಬಳಿ ಬೃಂದಾವನ ನಿರ್ಮಾಣದ ನಿರೀಕ್ಷೆ ಈ ಬಾರಿಯೂ ಹುಸಿಯಾಗಿದೆ.

ಲೋಕೋಪಯೋಗಿ ಇಲಾಖೆ ಯಡಿ 2026-27ನೇ ಸಾಲಿನ ಆಯ ವ್ಯಯ ಕಂಡಿಕೆಯಲ್ಲಿ ಮಡಿಕೇರಿ-ದೋಣಿಗಲ್ (ಎನ್‌ಹೆಚ್-75) (ಮಾದಾಪುರ, ಸೋಮವಾರಪೇಟೆ, ಶನಿವಾರಸಂತೆ, ಕೊಡ್ಲಿಪೇಟೆ ಮಾರ್ಗ) -95 ಕಿ.ಮೀ ಕಾಮಗಾರಿ, ಶ್ರೀರಂಗಪಟ್ಟಣ (ಪಾಂಡವಪುರ ರೈಲ್ವೆ ನಿಲ್ದಾಣ)-ಬಿ.ಎಂ. ರೋಡ್ ಜಂಕ್ಷನ್ ಚನ್ನರಾಯಪಟ್ಟಣ (ಕೆ.ಆರ್.ಪೇಟೆ ಮಾರ್ಗ)-63 ಕಿ.ಮೀ. ಕಾಮಗಾರಿ ಮಾಡುವುದಾಗಿ ಸರ್ಕಾರ ಹೇಳಿದೆ. ಹಾಗೆಯೇ ಕೇಂದ್ರ ಸರ್ಕಾರ ಹಾಗು ರಾಜ್ಯ ಸರ್ಕಾರದ 50:50 ಅನುಪಾತ ಆಧಾರದ ಮೇಲೆ ನಡೆಯುತ್ತಿರುವ ಬೇಲೂರು-ಹಾಸನ, ಚಿಕ್ಕಮಗಳೂರು-ಬೇಲೂರು ರೈಲ್ವೆ ಕಾಮಗಾರಿಗಳಿಗೆ ಭೂಸ್ವಾಧೀನ ಸಂಪೂರ್ಣಗೊಳಿಸಲು ಹಣ ನೀಡುವ ಬಗ್ಗೆ ಪ್ರಸ್ತಾಪ ಮಾಡಲಾಗಿದೆ ಎಂದು ತಿಳಿಸಲಾಗಿದೆ.

## ಬಜೆಟ್: ಜಿಲ್ಲೆಯ ಜನಪ್ರತಿನಿಧಿಗಳ ಪ್ರತಿಕ್ರಿಯೆ

### ದಾಖಲೆಯ ಆಯವ್ಯಯ : ಫಲಿತಾಂಶ ಶೂನ್ಯ



**ಹಾಸನ** : ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ 17ನೇ ಬಜೆಟ್‌ನಲ್ಲಿ ಜನರ ನಿರೀಕ್ಷೆಗಳನ್ನು ಈಡೇರಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಅರಕಲಗೂಡು ಶಾಸಕ ಎ.ಮಂಜು ಅವರು ಪ್ರತಿಕ್ರಿಯಿಸಿದ್ದಾರೆ.

ಬಜೆಟ್‌ನಲ್ಲಿ ಹೊಸ ಯೋಜನೆಗಳನ್ನು ಘೋಷಿಸಿಲ್ಲ. ಕಳೆದ ವರ್ಷ ಮಂಡಿಸಿದ ಬಜೆಟ್ ಅನ್ನೇ ಬಹುತೇಕ ಕಟ್ ಅಂಡ್ ಪೇಸ್ಟ್ ಮಾಡಲಾಗಿದೆ. ಅರಕಲಗೂಡು ಕ್ಷೇತ್ರಕ್ಕೆ ನಿರೀಕ್ಷೆಗೆ ತಕ್ಕಂತೆ ಪ್ರಮುಖ ಯೋಜನೆಗಳು ದೊರೆತಿಲ್ಲ. ಕಳೆದ ಬಾರಿಯ ಬಜೆಟ್‌ನಲ್ಲಿ ಘೋಷಿಸಿದ ಯೋಜನೆಗಳನ್ನೇ ಪುನರಾವರ್ತನೆ ಮಾಡಲಾಗಿದೆ ಎಂದರು.

ಜನರು ಸರ್ಕಾರದಿಂದ ಹೊಸ ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯ ನಿರೀಕ್ಷಿಸಿದ್ದರು. ಆದರೆ, ಈ ಬಜೆಟ್ ಜನರ ನಿರೀಕ್ಷೆಗಳನ್ನು ಸುಳ್ಳಾಗಿಸಿದೆ. ಈ ವೇಳೆ ಕ್ರಿಕೆಟ್ ಉದಾಹರಣೆ ನೀಡಿದ ಅವರು, ಒಂದು ತಂಡದಲ್ಲಿ ಬ್ಯಾಟ್ಸ್‌ಮನ್ ದಾಖಲೆ ರನ್ ಗಳಿಸಿದರೆ ಅದರ ಪರಿಣಾಮವಾಗಿ ತಂಡದ ಫಲಿತಾಂಶ ಬದಲಾಗಬೇಕು. ಆದರೆ, ಮುಖ್ಯಮಂತ್ರಿ ಅವರು ದಾಖಲೆಯ ಬಜೆಟ್ ಮಂಡಿಸಿದರೂ ಅದರ ಫಲಿತಾಂಶ ಮಾತ್ರ ಶೂನ್ಯವೆಂದು ವ್ಯಂಗ್ಯವಾಡಿದರು.

### ಶ್ರವಣಬೆಳಗೊಳಕ್ಕೆ ಆಸ್ಪತ್ರೆ ಮಂಜೂರಾಗಿಲ್ಲ



ಶ್ರವಣಬೆಳಗೊಳ ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮಾತನಾಡಿ, ಕಳೆದ ವರ್ಷ ಮಂಡಿಸಿದ ಬಜೆಟ್‌ನ ಶೇ.60 ರಷ್ಟು ಅಂಶಗಳು ಈ ಬಾರಿಯೂ ಪುನರಾವರ್ತನೆಯಾಗಿವೆ. ಬಜೆಟ್ ಬಗ್ಗೆ ಜಿಲ್ಲೆಯ ಜನರಲ್ಲಿ ಸಾಕಷ್ಟು ನಿರೀಕ್ಷೆಗಳಿದ್ದವು. ಆದರೆ ಆ ನಿರೀಕ್ಷೆ ಈಡೇರಿಸಲು ಆಯವ್ಯಯ ವಿಫಲವಾಗಿದೆ ಎಂದು ಹೇಳಿದರು.

ರಾಜ್ಯದ ಸಾಲದ ಹೊರೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಜನೋಪಯೋಗಿ ಹಾಗು ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಸಮರ್ಪಕ ಅನುದಾನ ಮೀಸಲಿಡಲಾಗಿಲ್ಲ. ಅದರಿಂದ ಅಭಿವೃದ್ಧಿ ಕಾರ್ಯಗಳಿಗೆ ಅಡಚಣೆ ಉಂಟಾಗುವ ಸಾಧ್ಯತೆ ಇದೆ. ಶ್ರವಣಬೆಳಗೊಳಕ್ಕೆ ತಾಯಿ-ಮಗು ಆಸ್ಪತ್ರೆಗೆ ಮನವಿ ಮಾಡಿದ್ದೆ. ಆ ಬಗ್ಗೆ ಪ್ರಸ್ತಾಪ ಮಾಡದಿರುವುದು ಬೇಸರ ತರಿಸಿದೆ. ತಾಲ್ಲೂಕಿನ ದಿಡಗ, ಅಮಾನಿಕೆರೆ ಅಭಿವೃದ್ಧಿ ಹಾಗು ಶ್ರೀರಂಗಪಟ್ಟಣ ರಸ್ತೆ ನಿರ್ಮಾಣ ಸಂಬಂಧ ಹಿಂದೆಯೇ ಘೋಷಣೆ ಮಾಡಲಾಗಿತ್ತು. ಈ ಬಾರಿಯೂ ಅದನ್ನೇ ಹೇಳಲಾಗಿದೆ. ಬಜೆಟ್ ಬಳಿಕವಾದರೂ ಮುಖ್ಯಮಂತ್ರಿ ತಾರತಮ್ಯವಿಲ್ಲದೆ ತಮ್ಮ ಕ್ಷೇತ್ರದ ಬೇಡಿಕೆ ಪರಿಗಣಿಸಿ ಅಗತ್ಯ ಅನುದಾನ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು.

### ಪ್ರಾಧಿಕಾರ ರಚನೆ ಭರವಸೆ ಹುಸಿ



ಜಿಲ್ಲೆಯ ಮಲೆನಾಡು ಭಾಗವಾದ ಬೇಲೂರು, ಅರೇಹಳ್ಳಿ, ಸಕಲೇಶಪುರ ಹಾಗು ಆಲೂರು ವ್ಯಾಪ್ತಿಯಲ್ಲಿ ಕಾಡಾನೆ-ಮಾನವ ಸಂಘರ್ಷ ಮಿತಿ ಮೀರಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಮನವಿ ಸಲ್ಲಿಸಲಾಗಿತ್ತಾದರೂ ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲವೆಂದು ಬೇಲೂರು ಶಾಸಕ ಹೆಚ್.ಕೆ.ಸುರೇಶ್ ಅವರು ಹೇಳಿದ್ದಾರೆ.

ಬೇಲೂರು ಚನ್ನಕೇಶಸ್ವಾಮಿ ದೇವಾಲಯ ಅಭಿವೃದ್ಧಿಗೆ ಪ್ರಾಧಿಕಾರ ರಚಿಸಬೇಕೆಂದು ಮನವಿ ಮಾಡಲಾಗಿತ್ತಾದರೂ ಕಿವಿಗೊಟ್ಟಿಲ್ಲ. ಈ ಬಜೆಟ್ ಜನರ ನಿರೀಕ್ಷೆಗಳನ್ನು ಈಡೇರಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಬಜೆಟ್ ಕುರಿತು ಜನರಲ್ಲಿ ಸಾಕಷ್ಟು ನಿರೀಕ್ಷೆಗಳಿದ್ದವು. ಕೃಷಿಕರು, ಬಡವರು, ರೈತರು, ಯುವಕರು ಸೇರಿ ವಿವಿಧ ವರ್ಗಗಳ ಜನರಿಗೆ ಉಪಯುಕ್ತವಾಗುವ ಹೊಸ ಯೋಜನೆಗಳನ್ನು ಸರ್ಕಾರ ಜಾರಿಗೊಳಿಸಲಿದೆ ಎಂಬ ಭರವಸೆ ಇತ್ತೆಂದು ಅಸಮಾಧಾನ ವ್ಯಕ್ತಪಡಿಸಿದರು.

### ಹಾಸನವನ್ನು ಕಡೆಗಣಿಸಿದ ಬಜೆಟ್



ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಲವು ಬಾರಿ ನಗರಕ್ಕೆ ಭೇಟಿ ನೀಡಿದಾಗ ಅಭಿವೃದ್ಧಿಯಲ್ಲಿ ರಾಜಕೀಯ ಮಾಡುವುದಿಲ್ಲ ಎಂದಿದ್ದರು. ಆದರೆ, ಜಿಲ್ಲಾ ಕೇಂದ್ರ ಅಭಿವೃದ್ಧಿಯನ್ನು ಸಂಪೂರ್ಣ ಕಡೆಗಣಿಸಿರುವುದು ದ್ವೇಷ ರಾಜಕಾರಣವೇ ಆಗಿದೆ ಎಂದು ಆರೋಪಿಸಿದರು.

ಮಹಾನಗರ ಪಾಲಿಕೆಗೆ ಅನುದಾನ ನೀಡುವ ಭರವಸೆಯನ್ನು ಕಳೆದ ವರ್ಷ ನೀಡಿದ್ದರು. ಈ ಬಾರಿಯೂ ಘೋಷಣೆ ಮಾಡಿದ್ದಾರೆ. ಆದರೆ, ಕೊಡುವ ಗ್ಯಾರಂಟಿ ಇಲ್ಲ. ಕಾಮಗಾರಿ ಆರಂಭಗೊಂಡು ವಿಳಂಬ ಆಗಿರುವ ವಿಮಾನ ನಿಲ್ದಾಣದ ಹೆಸರು ಹೇಳಿಲ್ಲ. ರಸ್ತೆ ಅಭಿವೃದ್ಧಿಗೆ ಅನುದಾನ ನೀಡಿಲ್ಲ. ಹಾಸನಾಂಬ ಜಾತ್ರಾ ಮಹೋತ್ಸವಕ್ಕೆ ವಿಶೇಷ ಅನುದಾನ ನೀಡಬೇಕೆಂಬ ಬೇಡಿಕೆಗೆ ಮನ್ನಣೆ ನೀಡಿಲ್ಲ. ಗೊರೂರಿನ ಹೇಮಾವತಿ ಜಲಾಶಯ ವ್ಯಾಪ್ತಿಯಲ್ಲಿ ಬೃಂದಾವನ ಮಾದರಿ ಉದ್ಯಾನವನ ನಿರ್ಮಾಣ ಬೇಡಿಕೆಯನ್ನು ಪರಿಶೀಲನೆ ಮಾಡುವುದಾಗಿ ಸ್ವತಃ ಮುಖ್ಯಮಂತ್ರಿಯೇ ಪ್ರಸ್ತಾಪ ಮಾಡಿದ್ದರು. ಆದರೆ, ಅದರ ಬಗ್ಗೆ ಚಕಾರ ಎತ್ತಿಲ್ಲವೆಂದರು.

# ಯುಪಿಎಸ್‌ಸಿ ಪರೀಕ್ಷೆ: ಜಿಲ್ಲೆಯ ಇಬ್ಬರು ಆಯ್ಕೆ

• ಪ್ರಜೋದಯ ವರದಿ



**ಹಾಸನ:** ಜಿಲ್ಲೆಯ ಇಬ್ಬರು ಯುವಕರು ಯುಪಿಎಸ್ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದು ಕೀರ್ತಿ ತಂದಿದ್ದಾರೆ.

ಸಕಲೇಶಪುರ ತಾಲ್ಲೂಕಿನ ಗುರ್ಜನಹಳ್ಳಿ ಗ್ರಾಮದ ಜಿ.ಎಸ್.ಮನೋಜ್ 389ನೇ ರ್‍ಯಾಂಕ್ ಪಡೆದು ಭಾರತೀಯ ಪೊಲೀಸ್ ಸೇವೆ (ಐಪಿಎಸ್)ಗೆ ಆಯ್ಕೆಯಾಗಿದ್ದಾರೆ. ಕೃಷಿ ಕುಟುಂಬದ ಮನೋಜ್ ಅವರು ಇಂಜಿನಿಯರಿಂಗ್ ಮುಗಿಸಿ ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದರು.

ತಂದೆ ಶೇಖರ್ ಕೃಷಿಕರಾಗಿದ್ದು, ತಾಯಿ ನಿಧನರಾಗಿದ್ದಾರೆ. ಗ್ರಾಮೀಣ ಹಿನ್ನಲೆಯಿಂದ ಬಂದ ಮನೋಜ್ ತಮ್ಮ ಪರಿಶ್ರಮ ಮತ್ತು ದೃಢ ಸಂಕಲ್ಪದ ಮೂಲಕ ಸಾಧನೆ ಮಾಡಿದ್ದಾರೆ. 1 ರಿಂದ 3ನೇ ತರಗತಿ ವರೆಗೆ ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣದ ಮಲ್ನಾಡ್ ಶಾಲೆ, 4 ಮತ್ತು 5ನೇ ತರಗತಿಯನ್ನು ಸಕಲೇಶಪುರ ಪಟ್ಟಣದ ಸಂತ ಜೋಸೆಫರ ಶಾಲೆಯಲ್ಲಿ ಪೂರ್ಣಗೊಳಿಸಿದರು. 6ನೇ ತರಗತಿಯಿಂದ ಪಿಯುಸಿವರೆಗೆ ಮಾವಿನಕೆರೆಯ ಜವಾಹರ್ ನವೋದಯ ವಿದ್ಯಾಲಯದಲ್ಲಿ ಶಿಕ್ಷಣ ಪಡೆದರು. ನಂತರ ಇಂಜಿನೀಯರಿಂಗ್ ಪದವಿ ಪೂರ್ಣಗೊಳಿಸಿ ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ನಡೆಸಿ ಇದೀಗ ಉತ್ತಮ ರ್‍ಯಾಂಕ್‌ನೊಂದಿಗೆ ಐಪಿಎಸ್ ಸೇವೆಗೆ ಆಯ್ಕೆಯಾಗಿದ್ದಾರೆ.

ಮನೋಜ್ ಅವರ ಸಾಧನೆಗೆ ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ, ಮುಖಂಡರು, ಸಾರ್ವಜನಿಕರು, ಸ್ನೇಹಿತರು ಹಾಗು ಶಿಕ್ಷಣ ಸಂಸ್ಥೆಗಳ ಶಿಕ್ಷಕರು ಅಭಿನಂದನೆ ಸಲ್ಲಿಸಿದ್ದಾರೆ.

**ಡಾ.ಎಂ.ಎ.ಯತೀಶ್‌ಗೆ 732ನೇ ರ್‍ಯಾಂಕ್**



ಬೇಲೂರು ಪುರಸಭೆ ಬಿಲ್ ಕಲೆಕ್ಟರ್ ಆನಂದ್ ಅವರ ಪುತ್ರ ಡಾ.ಎಂ.ಎ.ಯತೀಶ್ ಯುಪಿಎಸ್‌ಸಿ ಪರೀಕ್ಷೆಯಲ್ಲಿ 732ನೇ ರ್‍ಯಾಂಕ್ ಪಡೆದಿದ್ದಾರೆ.

ವೈದ್ಯಕೀಯ ವಿದ್ಯಾಭ್ಯಾಸ ಪೂರ್ಣಗೊಳಿಸಿರುವ ಅವರು ಲೋಕಸೇವಾ ಆಯೋಗ ಪರೀಕ್ಷೆಗೆ ತಯಾರಿ ಕೈಗೊಂಡಿದ್ದರು. ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಬಿ.ಶಿವರಾಜ್ ಹಾಗು ಕುಟುಂಬಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.

# ಅನುಮಾನಾಸ್ಪದ ಸ್ಥಿತಿಯಲ್ಲಿ ಶವ ಪತ್ತೆ: ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಕಾರಿನಲ್ಲಿ ವ್ಯಕ್ತಿಯ ಮೃತದೇಹ ಪತ್ತೆಯಾಗಿದ್ದು, ಕೆಲಸ ಮಾಡುತ್ತಿದ್ದ ಬಾರ್ ಅಂಡ್ ರೆಸ್ಟೋರೆಂಟ್‌ನ ಸಿಸಿಟಿವಿ ಕ್ಯಾಮರಾ ಪರಿಶೀಲಿಸಿ ತನಿಖೆ ನಡೆಸಬೇಕೆಂದು ಆಗ್ರಹಿಸಿ ಗ್ರಾಮಸ್ಥರು ಶವದೊಂದಿಗೆ ಪ್ರತಿಭಟನೆ ನಡೆಸಿದ ಘಟನೆ ತಾಲ್ಲೂಕಿನ ರಾಯಪುರ ಸಮೀಪದ ಬಾರ್‌ವೊಂದರ ಮುಂದೆ ಶುಕ್ರವಾರ ನಡೆದಿದೆ.

ಬಾರ್‌ನಲ್ಲಿ ಕೆಲಸ ಮಾಡಿಕೊಂಡಿದ್ದ ವೀರಾಪುರ ಗ್ರಾಮದ ದೊರೆಸ್ವಾಮಿ (42) ಎಂಬುವವರು ಗುರುವಾರ ಮೃತಪಟ್ಟಿದ್ದರು. ಹಿಮ್ಸ್‌ನಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ದೊರೆಸ್ವಾಮಿ ಸಾವಿಗೆ ನಿಖರ ಕಾರಣ ಏನೆಂದು ತಿಳಿಯಲು ಶುಕ್ರವಾರ ಸಂಬಂಧಿಕರು ಹಾಗು ಗ್ರಾಮಸ್ಥರು ಬಾರ್‌ಗೆ ಭೇಟಿ ನೀಡಿದಾಗ ಮಾಲೀಕರು ಸ್ಪಂದಿಸಲಿಲ್ಲ ಎನ್ನಲಾಗಿದೆ. ಈ ಹಿನ್ನಲೆಯಲ್ಲಿ ಆಕ್ರೋಶಗೊಂಡ ಜನರು ರಸ್ತೆ ತಡೆದು ಪ್ರತಿಭಟಿಸಿದರು. ದಿಢೀರ್ ಪ್ರತಿಭಟನೆಯಿಂದ ಕೆಲಕಾಲ ವಾಹನ ಸಂಚಾರದಲ್ಲಿ ವ್ಯತ್ಯಯವಾಯಿತು. ಮೃತರಿಗೆ ಹೆಂಡತಿ, ಮೂವರು ಮಕ್ಕಳಿದ್ದಾರೆ.

**ಸಾವಿನ ಕುರಿತು ಅನುಮಾನ**

ದೊರೆಸ್ವಾಮಿ ಅವರದ್ದು ಆಕಸ್ಮಿಕ ಸಾವಲ್ಲ, ದುರುದ್ದೇಶದಿಂದ ಕೊಲೆ ಮಾಡಿ ಶವವನ್ನು ಕಾರಿನಲ್ಲಿಡಲಾಗಿದೆ.



ಪ್ರಕರಣದ ಸಮಗ್ರ ತನಿಖೆ ನಡೆಸಬೇಕು. ಬಾರ್‌ನ ಒಳಗೆ ಹಾಗು ಆವರಣದ ಸಿಸಿಟಿವಿ ಕ್ಯಾಮರಾ ಪರಿಶೀಲಿಸಿದರೆ ಸತ್ಯ ತಿಳಿಯುತ್ತದೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆ ತೀವ್ರಗೊಳ್ಳುತ್ತಿದ್ದಂತೆ ಗ್ರಾಮಾಂತರ ಠಾಣೆ ಪೊಲೀಸರು ದೌಡಾಯಿಸಿ ಪರಿಸ್ಥಿತಿ ನಿಯಂತ್ರಣಕ್ಕೆ ಹರಸಾಹಸಪಟ್ಟರು. ಈ ವೇಳೆ ಪೊಲೀಸರು ಮತ್ತು ಗ್ರಾಮಸ್ಥರ ನಡುವೆ ವಾಗ್ವಾದ ಸಹ ನಡೆಯಿತು.

ಮೃತ ದೊರೆಸ್ವಾಮಿ ಸಂಬಂಧಿ ಸರೋಜ ಮತ್ತು ರಜಿನಿ ಅವರು ಮಾತನಾಡಿ, ದೊರೆಸ್ವಾಮಿ ಬಳಿ 3 ಲಕ್ಷ ರೂ. ಹಣವಿತ್ತು. ಅವರನ್ನು ಕೊಂದು ಹಣ ದೋಚಿದ್ದಾರೆ. ಈ ಬಗ್ಗೆ ತನಿಖೆ ನಡೆಸಬೇಕೆಂದು ಆಗ್ರಹಿಸಿದರು. ಪೊಲೀಸರ ಸಂಧಾನದ ಬಳಿಕ ಪ್ರತಿಭಟನೆ ವಾಪಾಸ್ ಪಡೆಯಲಾಯಿತು.

**ವೀರಾಪುರ ಅರಣ್ಯದಲ್ಲಿ ಶವ ಪತ್ತೆ?**

ದೊರೆಸ್ವಾಮಿ ಅವರ ಮೃತದೇಹ ವೀರಾಪುರ ಅರಣ್ಯ ಪ್ರದೇಶದಲ್ಲಿ ಪತ್ತೆಯಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸುಟ್ಟ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಆತ್ಮಹತ್ಯೆ ಎಂದು ಶಂಕಿಸಲಾಗಿದೆ. ವಿಷಯ ತಿಳಿಯುತ್ತಿದ್ದಂತೆ ಪೊಲೀಸರು ಭೇಟಿ ನೀಡಿ ಮರಣೋತ್ತರ ಪರೀಕ್ಷೆ ನಡೆಸಿ ನಂತರ ಕುಟುಂಬಸ್ಥರಿಗೆ ಶವ ಹಸ್ತಾಂತರಿಸಿದ್ದರು. ಆದರೆ, ಶುಕ್ರವಾರ ಗ್ರಾಮಸ್ಥರು ದಿಢೀರ್ ಪ್ರತಿಭಟನೆ ನಡೆಸಿದ್ದು ಸತ್ಯಾಸತ್ಯತೆ ತಿಳಿದು ಬರಬೇಕಿದೆ.

# ಸಮೀಕ್ಷೆ ಆಧರಿಸಿ ಟಿಕೆಟ್ ನಿರ್ಧಾರ : ಪ್ರೀತಮ್ ಗೌಡ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮುಂಬರುವ ಪಂಚಾಯಿತಿ ಚುನಾವಣೆಗಳಲ್ಲಿ ಯಾವ ಕ್ಷೇತ್ರಗಳಲ್ಲಿ ಬಿಜೆಪಿ ಅಥವಾ ಜೆಡಿಎಸ್ ಗೆಲುವು ಸಾಧಿಸಬಹುದೆಂಬುದನ್ನು ಸಮೀಕ್ಷೆಗಳಿಂದ ಅರಿತು ಟಿಕೆಟ್ ಹಂಚಿಕೆ ಮಾಡಲಾಗುತ್ತದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಜೆ. ಗೌಡ ಅವರು ಹೇಳಿದರು.

ತಾಲ್ಲೂಕಿನ ಶ್ರವಣಬೆಳಗೊಳದಲ್ಲಿ ಶುಕ್ರವಾರ ನಡೆದ ಹೋಬಳಿ ಮಟ್ಟದ ಸಂಘಟನಾ ಪರ್ವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು , ಕೇವಲ ಪ್ರಾಬಲ್ಯದ ಆಧಾರದಲ್ಲಿ ಟಿಕೆಟ್ ಹಂಚಿಕೆ ಮಾಡುವುದಿಲ್ಲ. ಮುಂಬರುವ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಬಿಜೆಪಿಜೆಡಿಎಸ್ ಮೈತ್ರಿಗೆ ಸಂಬಂಧಿಸಿ ಕಾರ್ಯಕರ್ತರ ಅಭಿಪ್ರಾಯವನ್ನು ಪಕ್ಷದ ರಾಜ್ಯಾಧ್ಯಕ್ಷರು ಹಾಗು ಕೋರ್ ಕಮಿಟಿ ಗಮನಕ್ಕೆ ತರಲಾಗುವುದು. ಅಲ್ಲಿ ವ್ಯಕ್ತವಾಗುವ ಅಭಿಪ್ರಾಯವನ್ನು ದೆಹಲಿಗೆ ಕಳುಹಿಸಲಾಗುತ್ತದೆ. ಅಂತಿಮವಾಗಿ ರಾಷ್ಟ್ರೀಯ ಅಧ್ಯಕ್ಷರು, ಪ್ರಧಾನಿ ನರೇಂದ್ರ ಮೋದಿ ಹಾಗು ಕೇಂದ್ರ ಗೃಹ ಸಚಿವ ಅಮಿತ್ ಶಾ ಅಂತಿಮ ನಿರ್ಧಾರ ಕೈಗೊಳ್ಳುತ್ತಾರೆಂದರು.



ರಾಜ್ಯದಲ್ಲಿ ಬಿಜೆಪಿಯನ್ನು ಪುನಃ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸಲಾಗುತ್ತಿದೆ. ಕಾರ್ಯಕರ್ತರಿಗೆ ಶಕ್ತಿ ತುಂಬುವುದೇ ಬಿಜೆಪಿ ಮುಖ್ಯ ಗುರಿ. ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಲು ರಾಜ್ಯಾಧ್ಯಕ್ಷರು ನಿರ್ಧಾರ ಕೈಗೊಂಡಿದ್ದಾರೆ. ಈ ಹಿನ್ನಲೆಯಲ್ಲಿ ಎಲ್ಲಾ ರಾಜ್ಯ ಪ್ರಧಾನ ಕಾರ್ಯದರ್ಶಿಗಳಿಗೆ ರಾಜ್ಯಾದ್ಯಂತ ಪ್ರವಾಸ ನಡೆಸುವಂತೆ ಸೂಚಿಸಲಾಗಿದೆ. ಹಲವು ಜಿಲ್ಲೆಗಳಲ್ಲಿ ವಿಧಾನಸಭಾ ಕ್ಷೇತ್ರವಾರು ಸಂಘಟನೆಗೆ ಒತ್ತು ನೀಡಲಾಗಿದೆ. ಕಾರ್ಯಕರ್ತರ ಸಭೆ ನಡೆಸಿ ಪಕ್ಷ ಬಲಪಡಿಸುವ ಕೆಲಸ ನಡೆಯುತ್ತಿದೆ. ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯಿತಿ ಹಾಗು ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಅತಿ ಹೆಚ್ಚು ಬಿಜೆಪಿ ಪಕ್ಷದ ಸದಸ್ಯರು ಆಯ್ಕೆ ಮಾಡುವ ನಿಟ್ಟಿನಲ್ಲಿ ಪಕ್ಷ ಸಂಘಟನೆ ಮಾಡೋಣ ಎಂದು ಕಾರ್ಯಕರ್ತರಿಗೆ ಸೂಚಿಸಿದರು ಎಂದರು.

# ಮಹಾನಗರ ಪಾಲಿಕೆಗೆ ಅನುದಾನ ಸ್ವಾಗತಾರ್ಹ



**ಹಾಸನ** : ಮಹಾನಗರ ಪಾಲಿಕೆಗೆ 200 ಕೋ.ರೂ. ಅನುದಾನ ನೀಡಿರುವುದು ಸ್ವಾಗತಾರ್ಹ. ಜಿಲ್ಲೆಯ ಅಭಿವೃದ್ಧಿಗೆ ಇನ್ನಷ್ಟು ಅನುದಾನ ನೀಡಬಹುದಿತ್ತು ಎಂದು ಜಿಲ್ಲಾ ಚೇಂಬರ್ ಆಫ್ ಕಾಮರ್ಸ್ ಉಪಾಧ್ಯಕ್ಷ ಹೆಚ್.ಎ. ಕಿರಣ್ ಹೇಳಿದ್ದಾರೆ.

ಮೂಲಸೌಕರ್ಯ ಅಭಿವೃದ್ಧಿಗಾಗಿ ರಸ್ತೆ ಮತ್ತು ಸೇತುವೆಗಳ ನಿರ್ಮಾಣಕ್ಕೆ ರಾಜ್ಯ ಮಟ್ಟದಲ್ಲಿ 8,600 ಕೋಟಿ ರೂ. ಮೀಸಲಿಟ್ಟಿರುವುದು ಉತ್ತಮ ಬೆಳವಣಿಗೆ. ಈ ಅನುದಾನದಲ್ಲಿ ಜಿಲ್ಲೆಗೆ ಹೆಚ್ಚಿನ ಪಾಲು ಸಿಗಬೇಕು. ಜಿಲ್ಲೆಯ ಮೂಲಸೌಕರ್ಯ ಅಭಿವೃದ್ಧಿಗೆ ಇದು ಸಹಕಾರಿಯಾಗಲಿದೆ. ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ ಕೆರೆಗಳನ್ನು ತುಂಬಿಸುವ ಯೋಜನೆ ಗಳಿಗೆ ಬಜೆಟ್‌ನಲ್ಲಿ ಆದ್ಯತೆ ನೀಡಿರುವುದು ರೈತರಿಗೆ ಬಹಳ ನೆರವಾಗಲಿದೆ. ಬೇಲೂರು, ಹಳೇಬೀಡು ಮತ್ತು ಶ್ರವಣಬೆಳಗೊಳದ ಂತಹ ವಿಶ್ವಪ್ರಸಿದ್ಧ ಐತಿಹಾಸಿಕ ಹಾಗು ಧಾರ್ಮಿಕ ಪ್ರವಾಸಿ ತಾಣಗಳ ಅಭಿವೃದ್ಧಿಗೆ ವಿಶೇಷ ಯೋಜನೆಗಳನ್ನು ಜಾರಿಗೊಳಿಸಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಉತ್ತೇಜನಕ್ಕೆ ಆದ್ಯತೆ ನೀಡಬೇಕಿತ್ತು ಎಂದು ತಿಳಿಸಿದ್ದಾರೆ.

CMYK CMYK CMYK CMYK

## ರುಚಿಯ ರಾಜಕೀಯಕ್ಕೆ ಆರೋಗ್ಯದ ಬೆಲೆ ತೆರಬೇಕಾ?


# ಜೈಸಾ ಅನ್ನ್, ವೈಸಾ ಮನ್...

» ಮಾತು ಮಾತಿಗೆ ಅಜ್ಜಿಯ ಅಡುಗೆಯನ್ನು ಕೊಂಡಾಡುವುದಷ್ಟೇ; ಹೋಗುವುದು ಮಾತ್ರ ದರ್ಶಿನಿ, ಫಾಸ್ಟ್ ಫುಡ್, ಸ್ಟ್ರೀಟ್ ಫುಡ್, ಕಲೋನಿಯಲ್ ಫುಡ್ ಜಾಯಿಂಟ್‌ಗಳಿಗೆ. ಅಜ್ಜಿಯ ಅಡುಗೆಯ ಬಗ್ಗೆ ಮಾತನಾಡಿದ ನಾಲಿಗೆಯು ಸವಿಯುವುದು ಅಲ್ಲಿನ ವ್ಯಂಜನಗಳನ್ನೇ. ನಮ್ಮ ಅಕ್ಷರಮಾಲೆಯಲ್ಲಿ ವ್ಯಂಜನಗಳಿಗೆ ಸ್ವರಗಳು ಮೇಲ್ಪಂಕ್ತಿ ಆಗಿರುವಂತೆ, ಊಟದ ತಟ್ಟೆಯಲ್ಲಿಯೂ, ಸ್ವರವಾಗಿ ಅನ್ನ, ವ್ಯಂಜನವಾಗಿ ಸಾರು-ಸಾಂಬಾರ್ -ಪಲ್ಯಗಳು ಇದ್ದರೇನೇ ಅದು ಸಂಪೂರ್ಣ ಎನಿಸಿಕೊಳ್ಳುವುದು. ಅನ್ನ-ಸಾರು ಎಂದರೆ ಮೂಗು ಮುರಿಯುವ ಇಂದಿನ ತಲೆಮಾರಿಗೆ ಅದರ ಮಹತ್ವ ತಿಳಿಯುವ ಆಸಕ್ತಿ ಸಹ ಇಲ್ಲ.



ನನ್ನ ತಾತನಿಗೊಂದು ಆನೆ ಇತ್ತು-ಇದು ಕೇರಳದ ಸಾಹಿತಿಯೊಬ್ಬರ ಕೃತಿಯೊಂದರ ಹೆಸರು. ಇದು ಇಂದಿನ ದಯನೀಯ ಪರಿಸ್ಥಿತಿಯನ್ನು ಮುಚ್ಚಿಡಲು, ಅಂದಿನ ವೈಭವವನ್ನು ನೆನೆಯುವ ಲಾಜಿಕ್. ಆಹಾರದ ವಿಷಯದಲ್ಲಿ ನಾವೀಗ ಮಾಡುತ್ತಿರುವುದು ಅದನ್ನೇ.

ಮಾತು ಮಾತಿಗೆ ಅಜ್ಜಿಯ ಅಡುಗೆಯನ್ನು ಕೊಂಡಾಡುವುದಷ್ಟೇ; ಹೋಗುವುದು ಮಾತ್ರ ದರ್ಶಿನಿ, ಫಾಸ್ಟ್ ಫುಡ್, ಸ್ಟ್ರೀಟ್ ಫುಡ್, ಕಲೋನಿಯಲ್ ಫುಡ್ ಜಾಯಿಂಟ್‌ಗಳಿಗೆ. ಅಜ್ಜಿಯ ಅಡುಗೆಯ ಬಗ್ಗೆ ಮಾತನಾಡಿದ ನಾಲಿಗೆಯು ಸವಿಯುವುದು ಅಲ್ಲಿನ ವ್ಯಂಜನಗಳನ್ನೇ. ನಮ್ಮ ಅಕ್ಷರಮಾಲೆಯಲ್ಲಿ ವ್ಯಂಜನಗಳಿಗೆ ಸ್ವರಗಳು ಮೇಲ್ಪಂಕ್ತಿ ಆಗಿರುವಂತೆ, ಊಟದ ತಟ್ಟೆಯಲ್ಲಿಯೂ, ಸ್ವರವಾಗಿ ಅನ್ನ, ವ್ಯಂಜನವಾಗಿ ಸಾರು-ಸಾಂಬಾರ್ -ಪಲ್ಯಗಳು ಇದ್ದರೇನೇ ಅದು ಸಂಪೂರ್ಣ ಎನಿಸಿಕೊಳ್ಳುವುದು. ಅನ್ನ-ಸಾರು ಎಂದರೆ ಮೂಗು ಮುರಿಯುವ ಇಂದಿನ ತಲೆಮಾರಿಗೆ ಅದರ ಮಹತ್ವ ತಿಳಿಯುವ ಆಸಕ್ತಿ ಸಹ ಇಲ್ಲ.



**ಪೂರಕ ವರ್ತನೆ ಅಗತ್ಯ:** ಅನ್ನದಿಂದ ಕಾರ್ಬೋಹೈಡ್ರೇಟ್, ಸಾರು ಅಥವಾ ಸಾಂಬಾರಿನಿಂದ ಪ್ರೋಟೀನ್, ಅವಶ್ಯ ಎಣ್ಣೆ ಮತ್ತು ಶರೀರದ ಶೀತೋಷ್ಣದ ಸಮತೋಲನಕ್ಕೆ ಅಗತ್ಯವಾಗಿರುವ ಸಾರವನ್ನು ಸಂಬಾರ ಪದಾರ್ಥಗಳಿಂದ ಪಡೆಯಲು ಸಾಧ್ಯ. ಅನ್ನ-ಬೇಳೆಗಳು ಪೂರಕವಾಗಿ ವರ್ತಿಸುವುದು ನಮ್ಮ ತಟ್ಟೆಯಲ್ಲಿ ಮಾತ್ರವಲ್ಲ, ಅವು ಹೊಲದಲ್ಲಿಯೂ ಒಂದಕ್ಕೊಂದು ಪೂರಕವೇ. ಅಲ್ಲಿಯೂ ಏಕದಳ ಧಾನ್ಯವಾದ ಭತ್ತದ ಸಹ ಬೆಳೆಯಾಗಿ ಬೆಳೆಯುವ ದ್ವಿದಳ ಧಾನ್ಯಗಳಾದ ಬೇಳೆ-ಕಾಳುಗಳು ಪರಿಸರದ ಸಾರಜನಕವನ್ನು ಹೀರಿ, ಭತ್ತಕ್ಕೆ ಒದಗಿಸಬಲ್ಲವು.

ಒಂದರ ಕೊರತೆಯನ್ನು ಇನ್ನೊಂದು ನೀಗಿಸುವ ಕೆಲಸ ಮಾಡಲೂ ಬಲ್ಲವು. ಅಲ್ಲಿಯ ಸಮತೋಲನವು ಊಟದ ತಟ್ಟೆ, ಶರೀರದ ಆರೋಗ್ಯ, ಜನರ ನಡುವಿನ ಬಾಂಧವ್ಯ ಎಲ್ಲದರೊಂದಿಗೂ ಸಂಬಂಧ ಹೊಂದಿದೆ. ಏಕದಳ ಮತ್ತು ದ್ವಿದಳ ಧಾನ್ಯಗಳನ್ನು ಬೇರೆ ಬೇರೆಯಾಗಿಸಿ ಬೆಳೆಯಲು ಆರಂಭಿಸಿ ಬಹಳ ಸಮಯವೇ ಆಗಿಬಿಟ್ಟಿದೆ.

ಆಹಾರದ ಮೂಲದಲ್ಲಿಯೇ ಪೂರಕವಾಗಿದ್ದ ಸಹಬಾಳ್ವೆಯ ತತ್ವವನ್ನು, ಆಧುನಿಕ ಬೇರ್ಪಡಿಸುವ ನೀತಿಗೆ ಒಳಪಡಿಸಿದ್ದಾಗಿದೆ. ಊಟದ ತಟ್ಟೆಯಲ್ಲಿಯೂ, ಶರೀರದ ಆರೋಗ್ಯದಲ್ಲಿಯೂ, ಮನುಷ್ಯರ ಮನಸ್ಸಿನಲ್ಲಿಯೂ, ಸಂಬಂಧಗಳಲ್ಲಿಯೂ ಸಮತೋಲನ ಇಲ್ಲವಾಗಿದೆ.

ಸಮಗ್ರ ಕೃಷಿ ಎನಿಸಿ, ಇಡಿಯಾಗಿಲ್ಲವನ್ನು ಬಿಡಿಯಾಗಿಸಿದ್ದಾಗಿದೆ. ಹೀಗೆ ಬೇರೆ ಬೇರೆಯಾಗಿಸಿ ಬೆಳೆಯತೊಡಗಿದ ನಂತರ ಸಮಸ್ಯೆ ತಲೆದೋರಿದ್ದೇ ಹೆಚ್ಚು. ಕೀಟಬಾಧೆ, ಕಡಿಮೆ ಇಳುವರಿ ಎಲ್ಲವೂ ರೈತರನ್ನು ಹೈರಾಣಾಗಿಸಿವೆ. ಬೆಳೆಗೆ ಕೀಟಗಳ ಕಾಟ ಹೆಚ್ಚಾದರೆ, ಅದು ಕೇವಲ ರೈತರ ತಲೆನೋವು, ನಮಗೇಕೆ ಅದರ ಗೊಡವೆ? ಅಂದುಕೊಳ್ಳುವವರು ಹೆಚ್ಚು. ಹೊಲಕ್ಕೆ ಹುಳುಗಳು ದಾಳಿಯಿಟ್ಟರೆ, ರೈತರು ಕ್ರಿಮಿನಾಶಕ ಸಿಂಪಡಿಸಿಬಿಡುತ್ತಾರೆ. ಆ ವಿಷವು ಸೇರುವುದು ಆ ಹುಳುಗಳನ್ನಷ್ಟೇ ಅಲ್ಲ, ನಮ್ಮ ಹೊಟ್ಟೆಯನ್ನೂ!

ಇದು ಮುಂದಿನ ತಲೆಮಾರಿನ ಮೇಲೆಯೂ ಪರಿಣಾಮ ಬೀರುತ್ತದೆ ಎನ್ನುವ ಸಣ್ಣ ಪರಿವ ನಮ್ಮಲ್ಲಿ ಮೊಳೆತರೆ, ನಮ್ಮ ಆಹಾರದ ಮೂಲದ ಬಗ್ಗೆ ತಿಳಿಯಲು ಆಸಕ್ತಿ ತೋರಬಹುದು.

**ಇಲ್ಲೂ ರಾಜಕಾರಣವೇ?!:** ಬೇಳೆ ಕಾಳುಗಳು, ಎಣ್ಣೆ ಕಾಳುಗಳು ಮೂಲತಃ ಒಣಬೇಸಾಯದ ಬೆಳೆಗಳು. ನಮ್ಮ ದೇಶದ ಬೇಸಾಯ ಪದ್ಧತಿಯು ಹೆಚ್ಚಿನದಾಗಿ ಶುಷ್ಕ ಬೇಸಾಯವೇ. ಹಾಗಿದ್ದರೂ, ಬೇಡಿಕೆಯ ಶೇ.56ರಷ್ಟು ಎಣ್ಣೆ ಕಾಳುಗಳನ್ನು 2023-24ರಲ್ಲಿ ಆಮದು ಮಾಡಿಕೊಳ್ಳಲಾಗಿದೆ. 2024-25ರಲ್ಲಿ ಬೇಳೆಯ ಆಮದು 7.3 ಮಿಲಿಯನ್ ಟನ್. ಆಂತರಿಕ ಉತ್ಪಾದನೆಯೂ ಹೆಚ್ಚುತ್ತಿದ್ದರೂ ಬೇಡಿಕೆಯನ್ನು ಪೂರೈಸುವಲ್ಲಿ, ಆಮದನ್ನು ಆಶ್ರಯಿಸುತ್ತಿರುವುದು ದುರಂತ.

ಇದಕ್ಕೆ ಕಾರಣ, ಅಕ್ಕಿ, ಗೋಧಿ ಮಾತ್ರ ರಾಜಕಾರಣಕ್ಕೆ ಸಾಕು ಎನ್ನುವ ಮನೋಭಾವ ಇರಬಹುದು. ಆಹಾರ ಸ್ವಾವಲಂಬನೆ ಇಲ್ಲದ ದೇಶ ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನ ಧ್ವನಿ ಕಳೆದುಕೊಳ್ಳುತ್ತದೆ.

**ಇದು ಆಹಾರ ಭದ್ರತೆಯೇ?:** ಬೇಳೆ ಕಾಳುಗಳು ಸಸ್ಯಾಹಾರಿಗಳಿಗೆ ಮುಖ್ಯ ಪ್ರೋಟೀನ್ ಆಗರವಾದರೆ, ಮಾಂಸಾಹಾರಿಗಳೂ ಇದನ್ನು ಅವಲಂಬಿಸಿದ್ದಾರೆ. ದೇಶೀಯ ಬೇಳೆ-ಕಾಳುಗಳಿಗೆ ಬ್ರಿಟಿಷರು, ಪಿಜನ್ ಪೀ, ಕೌ ಪೀ, ಚಿಕ್ ಪೀ, ಹಾರ್ಸ್ ಗ್ರಾಮ್ ಅಂತೆ ಕರೆದು, ನಮ್ಮ ಆಹಾರ ಪದ್ಧತಿಯನ್ನು ಪಶು ಆಹಾರಕ್ಕೆ ಹೋಲಿಸಿ, ಕೀಳಾಗಿ ಚಿತ್ರಿಸಿದ್ದಾರೆ. ಇವುಗಳ ಮೌಲ್ಯವನ್ನು ಮರುಸ್ಥಾಪನೆ ಮಾಡಬೇಕಿದೆ. ನಮಗೆ ಪೋಷಣೆ ನೀಡುವ ಬೆಳೆಗಳನ್ನು ಮೊದಲು ಪೋಷಿಸಬೇಕಿದೆ.

ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿದ್ದರೂ, ಭಾರತದಲ್ಲಿ ಮಕ್ಕಳ ಬೆಳವಣಿಗೆ ಕುಂಠಿತವಾಗಲು ಗುಣಾಣುಗಳೇ ಕಾರಣ ಎಂದು ಅರ್ಥಶಾಸ್ತ್ರಜ್ಞ ಪಣಗಾರಿಯ ಹೇಳುತ್ತಾರೆ. ಆಹಾರ ಕ್ರಮ ಹೀಗೇ ಮುಂದುವರಿದರೆ, ಭಾರತೀಯರು ಯುರೋಪಿಯನ್ನರ ದೈಹಿಕ ಎತ್ತರಕ್ಕೆ ಏರಲು, ಇನ್ನೂ 250 ವರ್ಷಗಳು ಬೇಕು ಎನ್ನುವುದು ಡೀಟನ್ ವಿಶ್ಲೇಷಣೆ.

ಜನರಿಗೆ ಬೇಕಿರುವುದು ಪ್ರೋಟೀನ್; ಆದರೆ ಸರಕಾರಗಳು ಸಾರ್ವಜನಿಕರಿಗೆ ವಿತರಿಸುತ್ತಿರುವುದು ಸ್ಟಾರ್ಚ್ ಅನ್ನು ಮಾತ್ರ. ಇದನ್ನು ಆಹಾರ ಭದ್ರತೆ ಎಂದುಕೊಂಡು ನಿರಾಳವಾಗಬಹುದೇ?

**ವಾಣಿಜ್ಯೀಕರಣದ ಬಿಗಿಮುಷ್ಟಿ:** ನಾವೆಷ್ಟು ವಾಣಿಜ್ಯೀಕರಣಕ್ಕೊಳಗಾಗಿದ್ದೇವೆ ಎಂದರೆ, ಮೊದಲು ಸಮಸ್ಯೆಯನ್ನು ಹುಟ್ಟುಹಾಕಬೇಕು, ನಂತರ ಪರಿಹಾರ ಹುಡುಕಿ ಅದನ್ನು ಮಾರುಬೇಕು ಎನ್ನುವುದೇ ವ್ಯಾಪಾರ-ಮಂತ್ರವಾಗಿಬಿಟ್ಟಿದೆ. ಇದು ಆಹಾರದ ವಿಷಯದಲ್ಲಂತೂ ನೂರಕ್ಕೆ ನೂರು ಸತ್ಯ. ಹಸುಗಳಿಗೆ ಹಾರ್ಮೋನ್ ಕೊಟ್ಟು ಹೆಚ್ಚು ಹಾಲು ಕರೆವಂತೆ ಮಾಡುವುದು ಇದಕ್ಕೊಂದು ಉದಾಹರಣೆ. ಅದನ್ನು ಕುಡಿಯುವ ಹೆಚ್ಚಿನ ಹೆಣ್ಣು ಮಕ್ಕಳು ಏಳು ವರ್ಷಗಳ ಒಳಗೆ ಋತುಮತಿ ಆಗುತ್ತಿದ್ದಾರೆ ಎಂದು ಅಧ್ಯಯನಗಳು ಹೇಳುತ್ತವೆ. ಹೀಗಿರುವಾಗ ಏನು ಮಾಡಬೇಕು? ಔಷಧ ಕಂಪನಿಗಳು ಲಸಿಕೆ ಕಂಡುಹಿಡಿಯಲು ಪೈಪೋಟಿಗಿಳಿಯುತ್ತವೆ. ಅದೇ ಪರಿಹಾರ ಮಾರ್ಗವೆಂದು ಸರಕಾರಗಳು ಉತ್ತೇಜಿಸುತ್ತವೆ. ಇದೊಂದು ರೀತಿಯ ದೋಷಪೂರಿತ ಕಾರ್ಯ-ಕಾರಣ ಸಂಬಂಧ. ಬೇರಿಗೆ ಗೆದ್ದಲು ಬಿಡುವುದು, ಮರದ ಎಲೆಗಳನ್ನು ತೊಳೆದು ಕಾಳಜಿ ಮೆರೆಯುವುದು. ಇಲ್ಲಿ ಗೆದ್ದಲು ಬಿಡುವವರಿಗೂ, ಎಲೆ ತೊಳೆಯುವವರಿಗೂ ಉದ್ಯೋಗಾವಕಾಶ ಸೃಷ್ಟಿ, ಮರದ ಪಾಡು ಯಾರಿಗೂ ಬೇಕಿಲ್ಲ!


ಇದರಂತೆಯೇ, ಆಂಟಿಬಯೋಟಿಕ್ ಬಳಸಿ, ಮಾಂಸದ ತೂಕ ಹೆಚ್ಚಿಸುವುದು ಸಹ ನಡೆಯುತ್ತಿದೆ. ಆಂಟಿಬಯೋಟಿಕ್ ಅನ್ನೇ ಆಹಾರವನ್ನಾಗಿಸಿಕೊಂಡ ರೋಗಾಣುಗಳು ಬಲಿಷ್ಠವಾಗುತ್ತಿವೆ. ರೋಗ ನಿರೋಧಕ ಶಕ್ತಿ ಕ್ಷೀಣಿಸುತ್ತಿದೆ. ರೋಗ ಬಂದಾಗ, ವೈದ್ಯರು ಆಂಟಿಬಯೋಟಿಕ್ ನೀಡಿದರೂ ಅವು ಕೆಲಸ ಮಾಡದಂತಾಗಿದೆ. ವೈದ್ಯರನ್ನು ದೂಷಿಸುವುದೇನೋ ಸುಲಭ, ಆದರೆ ರೋಗಕ್ಕೇನು ಮಾಡಬೇಕು?

**ಸೀಡ್‌ಲೆಸ್ ಜಮಾನ!:** ಕಡಿಮೆ ಅವಧಿಯಲ್ಲಿ ಬೆಳೆಯಲಾಗುವ ಬೆಳೆಗಳು ಪೌಷ್ಟಿಕಾಂಶ ಕಳೆದುಕೊಂಡಿರುವುದರ ಬಗ್ಗೆ ನ್ಯೂ ಸೈಂಟಿ ಜರ್ನಲ ವರದಿ ಮಾಡಿತ್ತು. ಇಂದಿನ ಸಂಸ್ಕರಿತ ತಳಿಗಿಂತ, ಮೂಲತಳಿಯ ಟೊಮೇಟೊದಲ್ಲಿ 166 ಪಟ್ಟು ಹೆಚ್ಚು ಟೊಮೇಟಿನ್ ಇದೆ. ಅದು ಪೌಷ್ಟಿಕಾಂಶದ ಮೂಲ. ಮೂಲತಳಿಯ ಈರುಳ್ಳಿಗಿಂತ, ಈಗಿನ ಈರುಳ್ಳಿಯಲ್ಲಿ ರೋಗ ನಿರೋಧಕ ರಾಸಾಯನಿಕವಾದ ಕ್ವರ್ಸಟಿನ್ 500 ಪಟ್ಟು ಕಡಿಮೆಯಾಗಿದೆ. ಕಿತ್ತಳೆ ಮತ್ತು ನಿಂಬೆಯ ಲಿಮೊನಿನ್, ನರಿನ್ಜಿನ್ ಕೂಡ ಆತಂಕ ಮೂಡಿಸುವ ಮಟ್ಟದಲ್ಲಿ ಕಡಿಮೆಯಾಗಿದೆ ಎನ್ನುತ್ತದೆ ವರದಿ.



ಒಗರನ್ನು ಅಗಲಿದ ನೆಲ್ಲಿಕಾಯಿ, ಲೋಳೆಯನ್ನು ಕಳೆದುಕೊಂಡ ಬೆಂಡೆಕಾಯಿ ಎಲ್ಲವೂ ಬಡವಾಗಿಬಿಟ್ಟಿವೆ. ಮುಂದೆ ಹಾಗಲಕಾಯಿ ಸಿಹಿ ಆಗಬಹುದೇನೋ?! ಜತೆಗೆ ಸೀಡ್‌ಲೆಸ್ ನದ್ದು ಬೇರೆ ಹಾವಳಿ. ಸೀಡ್‌ಲೆಸ್ ದಾಳಿಂಬೆ-ದ್ರಾಕ್ಷಿ-ಪಪ್ಪಾಯ ಎಲ್ಲವೂ ಆಯಿತು.

ಸೀಡ್‌ಲೆಸ್ ಕಡಲೆಕಾಯಿಯನ್ನು ಮುಂದೆ ನಿರೀಕ್ಷಿಸಬಹುದೇನೋ! ಹೀಗೆ ಒಂದು ಕಡೆ ಎಲ್ಲದರ ಪೌಷ್ಟಿಕಾಂಶ ಕಳೆದು, ಅದರ ನೈಸರ್ಗಿಕ ಸ್ವಭಾವವನ್ನು ನಾಶಮಾಡಿ, ಇನ್ನೊಂದು ಕಡೆಯಿಂದ ಕುಲಾಂತರಿ ಬೆಳೆಗಳನ್ನು, ಪೌಷ್ಟಿಕಾಂಶ ಹೆಚ್ಚಿಸಲಿಕ್ಕಾಗಿಯೇ ನಡೆಸುತ್ತಿದ್ದಾರೆ. ಇದ್ದದ್ದನ್ನು ಉಳಿಸಿಕೊಳ್ಳಲು ಬಳಕೆಯಾಗದ ಬುದ್ಧಿವಂತಿಕೆ, ಇಲ್ಲದನ್ನು ಕಂಡುಹಿಡಿಯಲು ಬಳಕೆಯಾಗುತ್ತಿದೆ.



**ಮಿಥ್ಯೆಯೇ ಹೆಚ್ಚು:** ಆಹಾರದ ಬಗ್ಗೆ ಸಾರ್ವತ್ರಿಕವಾಗಿ ಇರುವ ನಂಬಿಕೆಗಳಲ್ಲಿ, ಸತ್ಯಕ್ಕಿಂತ ಮಿಥ್ಯೆಯೇ ಹೆಚ್ಚೇನೋ ಎನಿಸಿಬಿಡುತ್ತದೆ. ಒಬ್ಬೊಬ್ಬರಿಗೆ ಒಂದೊಂದು ಮಿಥ್. ಕೆಲವರು ಕಾರ್ಬೋ ಹೈಡ್ರೇಟ್ ವಿರೋಧಿಗಳಾದರೆ, ಇನ್ನು ಕೆಲವರು ಕೊಬ್ಬಿನ ವಿರೋಧಿಗಳು. ಕೆಲವರು ಪ್ರೋಟೀನ್ ಪರವಾದರೆ, ಕೆಲವರು ಎಲ್ಲದರ ಮಿಶ್ರಣದ ಪರ. ಬಜ್ಜಿ, ವಡೆ ಇವುಗಳನ್ನು ಕೊಟ್ಟಾಗ ಕೆಲವರು, ದಿನಪತ್ರಿಕೆಯ ಮಧ್ಯೆ ಇಷ್ಟು, ಒತ್ತಿ ಒತ್ತಿ ಎಣ್ಣೆ ತೆಗೆದು, ಪತ್ರಿಕೆ ಹೀರಿಕೊಂಡಿರುವ ಎಣ್ಣೆಯನ್ನು ನೋಡಿ ನೆಮ್ಮದಿಯ ನಿಟ್ಟುಸಿರು ಬಿಟ್ಟು, ಖುಷಿಯಿಂದ ತಿನ್ನತೊಡಗುತ್ತಾರೆ. ಅವರಿಗೆ ಪತ್ರಿಕೆಯ ಇಂಕಿನಲ್ಲಿರುವ ವಿಷಕಾರಿಯಾದ ಸೀಸ ಹೊಟ್ಟೆ ಸೇರಿದರೂ ಪರವಾಗಿಲ್ಲ, ಎಣ್ಣೆಯನ್ನು ಅವಾಯ್ಡ್ ಮಾಡಿದ ಸಂತೃಪ್ತಿ!

**ಮನಸ್ಸಿನ ರೂಪಕಾರಕ:** ಆಹಾರವು ದೇಹವನ್ನು ಮಾತ್ರ ನಿರ್ಮಿಸುವುದಲ್ಲ, ಮನಸ್ಸಿನ ಗುಣ, ಚಿಂತನೆಯ ದಿಕ್ಕು ಮತ್ತು ಬದುಕಿನ ಗುಣಮಟ್ಟವನ್ನು ರೂಪಿಸುವ ಶಕ್ತಿಯೂ ಹೌದೆನ್ನುತ್ತದೆ ಭಾರತೀಯ ಚಿಂತನೆ. ಉಪನಿಷತ್ತುಗಳು ಮತ್ತು ಭಗವದ್ಗೀತೆ, ಆಹಾರವನ್ನು ದೇಹದ ಅವಶ್ಯಕತೆಯಾಗಿ ಮಾತ್ರವಲ್ಲ, ಚೈತನ್ಯದ ಆಧಾರವಾಗಿಯೂ ವಿವರಿಸುತ್ತವೆ. ಆಹಾರ ಶುದ್ಧಿಯಾದರೆ ಮನಸ್ಸು ಶುದ್ಧವಾಗುತ್ತದೆ ಎಂಬ ಆಲೋಚನೆ ನಮ್ಮ ಸಂಸ್ಕೃತಿಯ ನಾಡಿಯ ಸೇರಿಬಿಟ್ಟಿದೆ.

ಸ್ಥೂಲ ಶರೀರ, ಅಂದರೆ ನಮ್ಮ ಗೋಚರ ದೇಹ, ಇದು ಆಹಾರದಿಂದಲೇ ನಿರ್ಮಿತವಾಗುತ್ತದೆ. ನಾವು ತಿನ್ನುವ ಪ್ರತಿಯೊಂದು ತಿನಿಸೂ ರಕ್ತವಾಗುತ್ತದೆ, ಮಾಂಸವಾಗುತ್ತದೆ, ಎಲುಬಾಗುತ್ತದೆ. ಇದು ವೈದ್ಯಕೀಯವಾಗಿ ಸಾಬೀತಾಗಿರುವ ಸತ್ಯ. ಆದರೆ ಭಾರತೀಯ ದರ್ಶನದ ನಿಜವಾದ ವೈಶಿಷ್ಟ್ಯವು, ಸೂಕ್ಷ್ಮ ಶರೀರದ ಕುರಿತು ನೀಡಿದ ವಿವರಣೆಯಲ್ಲಿ ಗೋಚರಿಸುತ್ತದೆ. ಸೂಕ್ಷ್ಮ ಶರೀರವು ಮನಸ್ಸು, ಬುದ್ಧಿ ಮತ್ತು ಪ್ರಾಣಶಕ್ತಿಯ ಸಂಕಲನ. ಆಹಾರದ ಗುಣವು ಮನಸ್ಸಿನ ಗುಣವನ್ನು ಪ್ರಭಾವಿಸುತ್ತದೆ ಎನ್ನುವುದು ಆಧ್ಯಾತ್ಮಿಕವಾಗಿ ಮತ್ತು ಮನೋವೈಜ್ಞಾನಿಕವಾಗಿ ಗಮನಾರ್ಹ ವಿಚಾರ.

ಹಾಗಾಗಿಯೇ ನಮ್ಮ ಪರಂಪರೆಯಲ್ಲಿ, ರಣರಂಗದಲ್ಲಿ ಕಾದಾಡುವವರಿಗೆ, ತತ್ವಶಾಸ್ತ್ರ ಅಧ್ಯಯನ-ಅಧ್ಯಾಪನ ಮಾಡುವವರಿಗೆ, ಸೇವಾಕ್ಷೇತ್ರದಲ್ಲಿ ನಿರತರಾದವರಿಗೆ ಬೇರೆ ಬೇರೆಯದೇ ಶೈಲಿಯ ಆಹಾರ ಪದ್ಧತಿಯನ್ನು ಒತ್ತಾಯರಹಿತವಾಗಿ ಸೂಚಿಸಲಾಗುತ್ತಿತ್ತು. ಎಲ್ಲರೂ ತಮ್ಮ ಕಾರ್ಯಕ್ಷೇತ್ರಕ್ಕೆ ಅನುಗುಣವಾಗಿ ಆಹಾರವನ್ನು ಸ್ವೀಕರಿಸುವುದು ರೂಢಿಯಲ್ಲಿತ್ತು. ಇದನ್ನು ಧಾರ್ಮಿಕ ವರ್ಗೀಕರಣ ಎಂದು ಭಾವಿಸಬೇಕಿಲ್ಲ. ಇಂದಿನ ಮನೋವಿಜ್ಞಾನವೂ ಆಹಾರ ಮತ್ತು ಮನೋಭಾವಗಳ ನಡುವಿನ ಸಂಬಂಧವನ್ನು ಒಪ್ಪಿಕೊಳ್ಳುತ್ತದೆ. ಕಳ್ಳನ ಮನೆಯಲ್ಲಿ ಊಟ ಮಾಡಿದ ಸನ್ಯಾಸಿ, ಅವನ ಮನೆಯ ಬೆಳ್ಳಿ ಲೋಟವನ್ನು ತನಗರಿವಿಲ್ಲದಂತೆಯೇ ಕದ್ದು ತಂದ ಕಥೆ ಬಹು ಪ್ರಚಲಿತ...!

**ಉತ್ತಮ ಆಹಾರ, ಉನ್ನತ ಚಿಂತನೆ:** ಆಧುನಿಕ ಜೀವನಶೈಲಿಯಲ್ಲಿ, ವೇಗದ ಆಹಾರ ಸಂಸ್ಕೃತಿ ನಮ್ಮ ಆಯ್ಕೆಗಳನ್ನು ನಿರ್ಧರಿಸುತ್ತಿದೆ. ರುಚಿ ಮತ್ತು ತ್ವರಿತತೆಯ ಹಿಂದೆ ಓಡುತ್ತಿರುವ ನಾವು, ಆಹಾರದ ಗುಣದ ಬಗ್ಗೆ ಯೋಚಿಸಲು ಸಮಯ ತೆಗೆದುಕೊಳ್ಳುತ್ತಿಲ್ಲ. ದೇಹದ ಸ್ಥೂಲ ಆರೋಗ್ಯದ ಜತೆಗೆ, ಮನಸ್ಸಿನ ಸೂಕ್ಷ್ಮ ಸಮತೋಲನ ಕೂಡ ಆಹಾರದ ಮೇಲೆ ಅವಲಂಬಿತವಾಗಿರುವುದನ್ನು ಮರೆತಿದ್ದೇವೆ.

ನಮ್ಮ ಚಿಂತನೆ ಉನ್ನತವಾಗಿಗ ಮಾತ್ರವೇ ವ್ಯಕ್ತಿತ್ವವು ಔನ್ನತ್ಯ ಹೊಂದಲು ಸಾಧ್ಯ. ಉನ್ನತ ಚಿಂತನೆಗಾಗಿ ಆರೋಗ್ಯ ಪೂರ್ಣ ಮನ-ಬುದ್ಧಿ ಇರಲೇಬೇಕು. ಮನ-ಬುದ್ಧಿಗಳು ಆಹಾರದಿಂದ ಪ್ರಭಾವಿತವಾಗುವುದನ್ನು ನಾವೆಂದಿಗೂ ಮರೆಯುವಂತಿಲ್ಲ. ಇದರಿಂದಾಗಿ ನಾವು ಆಹಾರವನ್ನು ಕೇವಲ ಜೀರ್ಣಿಸಿಕೊಳ್ಳುತ್ತಿದ್ದೇವೆಯೇ ಅಥವಾ ಅದು ನಮ್ಮ ಚಿಂತನೆ, ಸ್ವಭಾವ ಮತ್ತು ಬದುಕಿನ ದಿಕ್ಕನ್ನೇ ರೂಪಿಸುತ್ತಿದೆಯೇ? ಎಂಬ ಪ್ರಶ್ನೆ ಮೂಡುತ್ತದೆ.

ಆಹಾರವು ಹೊಟ್ಟೆಗೆ ಮಾತ್ರವಲ್ಲ, ಅದು ವ್ಯಕ್ತಿತ್ವಕ್ಕೆ ಸೇರಿದ ವಿಷಯ. ದೇಹವನ್ನು ಕಟ್ಟುವ ಆಹಾರವೇ ಮನಡಿಸ್ಸಿನ ನೆಲೆಯನ್ನೂ ಕಟ್ಟುತ್ತದೆ. ಸಮಾಜದ ಆರೋಗ್ಯವು ವ್ಯಕ್ತಿಯ ಆಹಾರ ಸಂಸ್ಕೃತಿಯಿಂದಲೇ ಆರಂಭವಾಗುತ್ತದೆ ಎಂಬುದನ್ನು ಮರೆಯದಿರೋಣ...

**- ಮಾಯಾ ಬಾಲಚಂದ್ರ,** ಶ್ರೀನಿವಾಸಪುರ

---

# ಅಲ್ಪಸಂಖ್ಯಾತರಿಗೆ ಬೊಕ್ಕಸದ ಪಾಲು ಓಲೈಕೆ ರಾಜಕಾರಣವೇ ಪರಮ ಗುರಿ

• ಪ್ರಜೋದಯ ವರದಿ

**ಬೆಂಗಳೂರು:** ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿರುವ 17 ನೇ ಬಜೆಟ್ ಗೆ ಬಿಜೆಪಿ ಟೀಕೆ ಮಾಡಿದ್ದು, 'ಬ್ರದರ್ಸ್ ಬಜೆಟ್.. ಓಲೈಕೆ ರಾಜಕಾರಣವೇ ಪರಮ ಗುರಿ' ಎಂದು ಸರ್ಕಾರದ ವಿರುದ್ಧ ಕಿಡಿಕಾರಿದೆ.

ಅತ್ತ ಬಜೆಟ್ ಮಂಡನೆ ಮುಕ್ತಾಯವಾಗುತ್ತಲೇ ಇತ್ತ ಟ್ವೀಟ್ ಮಾಡಿರುವ ಬಿಜೆಪಿ, ಅಲ್ಪಸಂಖ್ಯಾತರಿಗೆ ಸಿದ್ದರಾಮಯ್ಯ ಬಜೆಟ್ ಘೋಷಣೆ ಮಾಡಿರುವ ಯೋಜನೆಗಳನ್ನು ಉಲ್ಲೇಖಿಸಿ ಕಿಡಿಕಾರಿದ್ದು, ಓಲೈಕೆ ರಾಜಕಾರಣವನ್ನೇ ಪರಮ ಗುರಿಯಾಗಿಸಿಕೊಂಡಿರುವ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ವೋಟ್ ಬ್ಯಾಂಕ್ ಉಳಿಸಿಕೊಳ್ಳಲು ರಾಜ್ಯದ ಬೊಕ್ಕಸದ ಬಹುಪಾಲನ್ನೇ ಮೀಸಲಿಟ್ಟಿರುವುದು ನಾಡಿನ ದೌರ್ಭಾಗ್ಯ ಎಂದು ಟ್ವೀಟ್ ಮಾಡಿದೆ.

ಮತ್ತೊಂದು ಟ್ವೀಟ್‌ನಲ್ಲಿ, ಮಾನ್ಯ ಸಿದ್ದರಾಮಯ್ಯ ಅವರೇ ಬಜೆಟ್ ಪುಸ್ತಕದ ಪುಟಗಳಲ್ಲಿ ನೀವು ಸೃಷ್ಟಿಸಿದ ಉದ್ಯೋಗಗಳನ್ನು ಬಿಡಿ. ಡಿಗ್ರಿ ಹಿಡಿದು ಕೆಲಸವಿಲ್ಲದೆ ಅಲೆಯುತ್ತಿರುವ ನಿರುದ್ಯೋಗಿಗಳು ಮಾಡಿದ ಹೋರಾಟದ ಬಗ್ಗೆ ಮಾತನಾಡಿ...ಎಂದು ಹೇಳಿದೆ.

ಉಚಿತ ಪ್ರಯಾಣದ ಕ್ರೆಡಿಟ್ ಕಾಂಗ್ರೆಸ್ ಸರ್ಕಾರಕ್ಕೆ, ಆದರೆ ಹೊರೆ ಮಾತ್ರ ಸಾರಿಗೆ ನಿಗಮಕ್ಕೆ! ಶಕ್ತಿ ಯೋಜನೆಗಾಗಿ ಸೇರಿದಂತೆ ಸಾರಿಗೆ ನಿಗಮಗಳಿಗೆ ಸಿದ್ದರಾಮಯ್ಯ ಸರ್ಕಾರ ಬಾಕಿ ಉಳಿಸಿಕೊಂಡಿರುವ ಮೊತ್ತ ಬರೋಬ್ಬರಿ ₹5,313 ಕೋಟಿ! ಅನುದಾನವಿಲ್ಲದೆ ನಿಗಮಗಳು ಉಸಿರುಗಟ್ಟುತ್ತಿವೆ. ಕೊರತೆ ಬೋಗಸ್ ಬಜೆಟ್ ಮಂಡಿಸಿದ ಸಾಲರಾಮಯ್ಯನವರು ಕರ್ನಾಟಕವನ್ನು ಸಾಲದ ಕೂಪಕ್ಕೆ ದೂಡಿದ್ದಾರೆ ಎಂದು ಬಿಜೆಪಿ ಕಿಡಿಕಾರಿದೆ.

**ಅತಿಥಿ ಶಿಕ್ಷಕರ ಗೌರವಧನ ನೀಡದ ಭ್ರಷ್ಟ ಸರ್ಕಾರ**

ಅಂತೆಯೇ ರಾಜ್ಯದ ಅತಿಥಿ ಶಿಕ್ಷಕರಿಗೆ ಕಳೆದ 5 ತಿಂಗಳಿಂದ ಗೌರವ ಧನ ನೀಡದ ಈ ಭ್ರಷ್ಟ ಕಾಂಗ್ರೆಸ್ ಸರ್ಕಾರಕ್ಕೆ ನಾಚಿಕೆಯಾಗಬೇಕು, ಬಡ ಶಿಕ್ಷಕರಿಗೆ ನೀಡುವ ಒಂದು ಸಾವಿರ ನೀಡಲೂ ಸರ್ಕಾರದ ಬಳಿ ಹಣವಿಲ್ಲವೇ? ಕಳೆದ 5 ತಿಂಗಳಿನಿಂದ ಸಂಬಳವಿಲ್ಲದೆ ಶಿಕ್ಷಕರ ಜೀವನ ಬೀದಿಗೆ ಬಂದಿದೆ. ಹಬ್ಬ- ಹರಿದಿನಗಳು ಸಾಲದ ಸುಳಿಯಲ್ಲಿ ಕಳೆದುಹೋಗಿವೆ. ವರ್ಗಾವಣೆ, ಕಮಿಷನ್ ದಂಧೆಯಲ್ಲಿ ಮುಳುಗಿರುವ ಭ್ರಷ್ಟ ಕಾಂಗ್ರೆಸ್ ಸರ್ಕಾರಕ್ಕೆ ಶಿಕ್ಷಣ ವ್ಯವಸ್ಥೆ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲ.

ಸಿಎಂ ಅವರೇ ಕೂಡಲೇ ಬಾಕಿ ಹಣ ಬಿಡುಗಡೆ ಮಾಡಿ ನೊಂದ ಶಿಕ್ಷಕರಿಗೆ ನೆರವಾಗಿ, ಇಲ್ಲದಿದ್ದರೆ ಕುರ್ಚಿ ಖಾಲಿ ಮಾಡಿ ಹೊರಡಿ! ಎಂದು ಟ್ವೀಟ್ ಮಾಡಿದೆ.

**ಸಾಲರಾಮಯ್ಯ:** ಸಾಲ ಮಾಡುವುದರಲ್ಲಿ ಸಿಎಂ ಸಿದ್ದರಾಮಯ್ಯ ನಿಸ್ಸೀಮರು! ಕನ್ನಡಿಗರಿಗೆ 'ಸಾಲದ ಭಾಗ್ಯ' ನೀಡುವುದೇ ನಿಮ್ಮ ಬಜೆಟ್‌ನ ಅಸಲಿ ಸಾಧನೆಯೇ? ಅಭಿವೃದ್ಧಿಯತ್ತ ಹೆಜ್ಜೆ ಹಾಕಬೇಕಿದ್ದ ಕಾಂಗ್ರೆಸ್ ಸರ್ಕಾರ ರಾಜ್ಯವನ್ನು ಸಾಲದ ಕೂಪಕ್ಕೆ ತಳ್ಳಿದೆ. ಕರ್ನಾಟಕದ ಒಟ್ಟು ಸಾಲ 8.24 ಲಕ್ಷ ಕೋಟಿ ರೂಪಾಯಿಗಳಿಗೂ ಮೀರಿದ್ದು, ಪ್ರತಿ ಕನ್ನಡಿಗನ ಮೇಲೆ 1.17 ಲಕ್ಷ ರೂಪಾಯಿ ಸಾಲದ ಹೊರೆ ಹೊರಿಸಲಾಗಿದೆ. ಸಾಲ ಮಾಡುವುದರಲ್ಲಿ ನಂಬರ್ 1, ಅಭಿವೃದ್ಧಿ ಮಾತ್ರ ಶೂನ್ಯ - ಇದುವೇ ಕಾಂಗ್ರೆಸ್ ಸರ್ಕಾರದ ಸಾಧನೆ! ಎಂದು ಬಿಜೆಪಿ ಕಿಡಿಕಾರಿದೆ.

**ನಿರಾಶಾದಾಯಕ ಬಜೆಟ್: ಬೊಮ್ಮಾಯಿ**

ಕರ್ನಾಟಕದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ಇದು ಅತ್ಯಂತ ನಿರಾಶಾದಾಯಕ ಬಜೆಟ್. 1,32,000 ಕೋಟಿ ಸಾಲ ಮತ್ತು 25,000 ಕೋಟಿ ಹೆಚ್ಚುವರಿ ತೆರಿಗೆ ಹೊರೆಯನ್ನು ತೆಗೆದುಕೊಂಡಿದ್ದರೂ, 32,000 ಕೋಟಿ ರೂಪಾಯಿಗಳ ಕೊರತೆಯಿದೆ. ಇದರರ್ಥ ಅಭಿವೃದ್ಧಿಗೆ ಹಣವಿಲ್ಲ, ಮತ್ತು ಬಹಳಷ್ಟು ಪಾವತಿಗಳು ಗುತ್ತಿಗೆದಾರರಿಗೆ ಬಾಕಿ ಇವೆ... ಆದ್ದರಿಂದ, ಹಣಕಾಸು ಮಂದಗತಿಯಲ್ಲಿದೆ. ಅವರು ರಾಜ್ಯವನ್ನು ಹತ್ತು ವರ್ಷಗಳ ಕಾಲ ಹಿಂದಕ್ಕೆ ಕೊಂಡೊಯ್ದಿದ್ದಾರೆ... ಎಂದು ಕಿಡಿಕಾರದ್ದಾರೆ.

**ಬ್ರದರ್ಸ್ ಬಜೆಟ್: ಟೀಕೆ**

**ಬೃಹತ್ ಶೂನ್ಯ ಎಂದ ಸುನೀಲ್ ಕುಮಾರ್**

ಬಿಜೆಪಿ ಶಾಸಕ ಸುನೀಲ್ ಕುಮಾರ್ ಮಾಧ್ಯಮಗಳೊಂದಿಗೆ ಮಾತನಾಡಿ, 'ಇಲಾಖಾವಾರು ಬಜೆಟ್ ವಿಶ್ಲೇಷಣೆ ನಡೆಸಿದಾಗ ಇದು ಹನ್ನೊಂದು ಸುಳ್ಳುಗಳ ಬಜೆಟ್ ಎಂದು ವಿಶ್ಲೇಷಿಸಬಹುದಾಗಿದೆ' ಎಂದು ಅವರು ಟೀಕೆ ಮಾಡಿದರು. 'ಹೊಸ ಹೊಸ ಪದಪುಂಜಗಳನ್ನು ಹೊಸೆಯುವುದಕ್ಕೆ ಸಿದ್ದರಾಮಯ್ಯನವರು ನೀಡಿದ ಆದ್ಯತೆಯನ್ನು ಹೊಸ ಹೊಸ ಯೋಜನೆಗಳ ಸೃಷ್ಟಿಗೆ ನೀಡದೇ ಇರುವುದು ರಾಜ್ಯದ ದೌರ್ಭಾಗ್ಯ. ಈ ಬಾರಿಯ ಬಜೆಟ್ ನ್ನು 11 ಮಾದರಿಯಲ್ಲಿ ರೂಪಿಸಲಾಗಿದೆ ಎಂದು ಸಿದ್ದರಾಮಯ್ಯನವರು ಬಜೆಟ್‌ನ ಪೂರ್ವಪೀಠಿಕೆಯಲ್ಲಿ ಹೆಮ್ಮೆಯಿಂದ ಹೇಳಿದ್ದಾರೆ.

ಆದರೆ ಇಲಾಖಾವಾರು ಬಜೆಟ್ ವಿಶ್ಲೇಷಣೆ ನಡೆಸಿದಾಗ ಇದು 11 ಬಜೆಟ್ ಬದಲಾಗಿದೆ 11 ಲೈ ( ಹನ್ನೊಂದು ಸುಳ್ಳು ) ಗಳ ಬಜೆಟ್ ಎಂದು ವಿಶ್ಲೇಷಿಸಬಹುದಾಗಿದೆ. ರಾಜ್ಯದ ಇತಿಹಾಸದಲ್ಲಿ ಹಿಂದೆಂದೂ ಕಾಣದಂಥ ಸಾಲದ ಹೊರೆಯನ್ನು ಸಿದ್ದರಾಮಯ್ಯ ಈ ಬಜೆಟ್ ಮೂಲಕ ಹೊರಿಸಿದ್ದಾರೆ. ಬರೋಬ್ಬರಿ 1,32,000 ಕೋಟಿ ರೂ.ಸಾಲ ಮಾಡಲಾಗಿದ್ದು, ರಾಜ್ಯದ ಒಟ್ಟು ಹೊಣೆಗಾರಿಕೆ 8,24,389 ಕೋಟಿ ರೂ.ಗೆ ಏರಿಕೆಯಾಗಿರುವುದು ಕಳವಳದ ಸಂಗತಿಯಾಗಿದ್ದು, ಬಂಡವಾಳ ವೆಚ್ಚವನ್ನು 74,682 ಕೋಟಿ ರೂ.ಗೆ ಇಳಿಕೆ ಮಾಡಲಾಗಿದೆ ಎಂದು ಕಿಡಿಕಾರಿದರು.

**ಅಲ್ಪಸಂಖ್ಯಾತರಿಗೆ ಮಾತ್ರ ಬೊಕ್ಕಸದ ಪಾಲು'!: ತೇಜಸ್ವಿ ಸೂರ್ಯ**

ಇನ್ನು ಸಂಸದ ತೇಜಸ್ವಿ ಸೂರ್ಯ ಟ್ವೀಟ್ ಮಾಡಿ ಸಿದ್ದರಾಮಯ್ಯ ಸರ್ಕಾರದ ಬಜೆಟ್ ಕುರಿತು ವ್ಯಂಗ್ಯ ಮಾಡಿದ್ದಾರೆ. 'ಮಾನ್ಯ ಮುಖ್ಯಮಂತ್ರಿಗಳೇ, ಇದು 'ಸರ್ವರಿಗೂ ಸಮಪಾಲು' ಅಲ್ಲ, ಕೇವಲ 'ಅಲ್ಪಸಂಖ್ಯಾತರಿಗೆ ಮಾತ್ರ ಬೊಕ್ಕಸದ ಪಾಲು'! ಅಲ್ಪಸಂಖ್ಯಾತರಿಗೆ ₹1000 ಕೋಟಿ ವೆಚ್ಚದಲ್ಲಿ ಶಾಲಾ ಉನ್ನತೀಕರಣ, ಆದರೆ ಹಿಂದೂಗಳ ದೇವಸ್ಥಾನದ ದುರಸ್ತಿಗೆ ಹಣವಿಲ್ಲವೇ?

ಅಲ್ಪಸಂಖ್ಯಾತ ನಿರುದ್ಯೋಗಿಗಳಿಗೆ 3 ಲಕ್ಷ ರೂ. ಸಹಾಯಧನ, ಆದ್ರೆ ಸಾಮಾನ್ಯ ವರ್ಗದ ನಿರುದ್ಯೋಗಿಗಳಿಗೆ ಬರೀ ಭರವಸೆಯ ಹುತ್ತವೇ? ಹುಬ್ಬಳ್ಳಿ- ಕಲಬುರಗಿಯಲ್ಲಿ ಹಜ್ ಭವನ ಕಟ್ಟುವ ನಿಮಗೆ, ಹಿಂದೂ ಧಾರ್ಮಿಕ ಕೇಂದ್ರಗಳ ಮೂಲಸೌಕರ್ಯ ನೆನಪಾಗುವುದೇ ಇಲ್ಲ! ಅಲ್ಪಸಂಖ್ಯಾತರಿಗೆ ಮೃಷ್ಟಾನ್ನ ಭೋಜನ, ಬಹುಸಂಖ್ಯಾತ ಹಿಂದೂಗಳಿಗೆ ಬಜೆಟ್‌ನಲ್ಲಿ ಶೂನ್ಯ ದರ್ಶನ!

ಮಾನ್ಯ ಸಿದ್ದರಾಮಯ್ಯ ನವರೇ, ನೀವು ಕೇವಲ ಒಂದು ಸಮುದಾಯದ ಮುಖ್ಯಮಂತ್ರಿಯೇ? ಬೊಕ್ಕಸದ ಬಹುಪಾಲನ್ನು ಒಂದು ನಿರ್ದಿಷ್ಟ ಸಮುದಾಯಕ್ಕೆ ಬರೆದುಕೊಡುತ್ತಿರುವ ಅವರೇ, ನಿಮ್ಮ ಈ ಅತಿರೇಕದ ಓಲೈಕೆ ರಾಜಕಾರಣಕ್ಕೆ ರಾಜ್ಯದ ಜನತೆ ತಕ್ಕ ಉತ್ತರ ನೀಡಲಿದ್ದಾರೆ ಎಂದು ಟ್ವೀಟ್ ಮಾಡಿದ್ದಾರೆ.

---

# 4.48 ಲಕ್ಷ ಕೋ.ರೂ. ಗಾತ್ರದ ಬಜೆಟ್ ಮಂಡನೆ

» ಮೊದಲನೇ ಪುಟದಿಂದ

ಮಾಣಿ, ಸಜಿಪನಡುವಿನಲ್ಲಿ ಪೊಲೀಸ್ ಠಾಣೆ, ದೊಡ್ಡಬಳ್ಳಾಪುರದಲ್ಲಿ ಸಂಚಾರ ಠಾಣೆ, ಬೆಳಗಾವಿಯ ಯರಗಟ್ಟಿ, ಯಾದಗಿರಿಯ ಕಕ್ಕೇರಾ, ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ದಾವಣಗೆರೆಯ ಆನಗೋಡು, ಹಾವೇರಿ ಜಿಲ್ಲೆಯ ತಿಳುವಳ್ಳಿ, ಮೈಸೂರಿನ ಉದಯಗಿರಿ, ವಿಜಯ ಪುರದ ಮುದ್ದೇಬಿಹಾಳ, ಕೋಲಾರದ ನರಸಾಪುರ ಕೈಗಾರಿಕಾ ವಲಯ, ಚಾಮರಾಜನಗರ ಗುಂಡ್ಲುಪೇಟೆ ಯಲ್ಲಿ ಸಂಚಾರ ಪೊಲೀಸ್ ಠಾಣೆ ತೆರೆಯುವುದಾಗಿ ತಿಳಿಸಿದ್ದಾರೆ.

**ಮಕ್ಕಳಿಗೆ ಮೊಬೈಲ್ ಬಳಕೆ ನಿಷೇಧ**

ಹೆಚ್ಚುತ್ತಿರುವ ಮೊಬೈಲ್ ಬಳಕೆ ಮಕ್ಕಳ ಮೇಲೆ ಪರಿಣಾಮ ಬೀರುತ್ತಿರುವ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ 16 ವಯಸ್ಸಿನ ಮಕ್ಕಳಿಗೆ ಸಾಮಾಜಿಕ ಜಾಲತಾಣದ ಬಳಕೆಯನ್ನು ನಿಷೇಧ ಮಾಡಿರುವುದಾಗಿ ಮುಖ್ಯಮಂತ್ರಿ ಘೋಷಣೆ ಮಾಡಿದ್ದಾರೆ.

**ಮದ್ಯ ಪ್ರಿಯರಿಗೆ ಸುಂಕದ ಶಾಕ್**

ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಮದ್ಯ ಪ್ರಿಯರಿಗೆ ಸುಂಕದ ಶಾಕ್ ನೀಡಿದ್ದಾರೆ. ಮದ್ಯದ ಮೇಲೆ ವಿಧಿಸುವ ತೆರಿಗೆಯ ಸ್ವರೂಪವನ್ನು ಬದಲಾಯಿಸುವ ಮೂಲಕ ರಾಜ್ಯದ ರಾಜಸ್ವ ಸಂಗ್ರಹವನ್ನು ಗಣನೀಯವಾಗಿ ಏರಿಕೆ ಮಾಡಲು ನಿರ್ಧರಿಸಿದ್ದಾರೆ. ಮದ್ಯದಲ್ಲಿರುವ ಆಲ್ಕೋಹಾಲ್ ಅಂಶ ಆಧರಿಸಿ ತೆರಿಗೆ ವಿಧಿಸಲಾಗುವುದು. ಎಕ್ಸ್-ಫ್ಯಾಕ್ಟರಿ ದರ ಪಟ್ಟಿಯ ಆಧಾರದ ಮೇಲೆ ಮದ್ಯದ ಬೆಲೆಯನ್ನು ಒಂದೇ ಬಾರಿಗೆ ಏರಿಸುವ ಬದಲು ಹಂತ-ಹಂತವಾಗಿ ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ. 2026-27ರ ವೇಳೆಗೆ 45,000 ಕೋ.ರೂ. ರಾಜಸ್ವ ಸಂಗ್ರಹಿಸುವ ಗುರಿ ಹೊಂದಲಾಗಿದೆ.

**6,432 ಹುದ್ದೆಗಳ ಭರ್ತಿ:** ಸರ್ಕಾರಿ ಉದ್ಯೋಗಾಕಾಂಕ್ಷಿಗಳಿಗೆ ರಾಜ್ಯ ಸರ್ಕಾರ ಶುಭ ಸುದ್ದಿ ನೀಡಿದೆ. ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 56,432 ಹುದ್ದೆಗಳ ಭರ್ತಿಗೆ ಕ್ರಮ ಕೈಗೊಂಡಿರುವುದಾಗಿ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ. ಸರ್ಕಾರಿ ಹುದ್ದೆಗಳಿಗೆ ನೇರ ನೇಮಕಾತಿ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯನ್ನು ಒಂದು ಬಾರಿಗೆ ಮಾತ್ರ ಐದು ವರ್ಷ ಸಡಿಲಿಕೆ ಮಾಡಲಾಗಿದೆ ಎಂದು ಘೋಷಿಸಿದರು.

---

# ಜೈನರಗುತ್ತಿಗೆ ಜೈನ ಮುನಿ ಆಗಮನ

• ಪ್ರಜೋದಯ ವರದಿ

**ಹಳೇಬೀಡು:** ಜೈನರಗುತ್ತಿ ಕ್ಷೇತ್ರಕ್ಕೆ ಶುಕ್ರವಾರ ಜೈನ ಮುನಿ ವೀರಸಾಗರ ಮುನಿ ಮಹಾರಾಜರು ಆಗಮಿಸಿದರು.



ಮಹಾರಾಷ್ಟ್ರದಿಂದ 600 ಕಿ.ಮೀ ಪಾದಯಾತ್ರೆಯಲ್ಲಿ ಜೈನರ ಗುತ್ತಿಗೆ ಆಗಮಿಸಿದ ಅವರನ್ನು ವಾದ್ಯಗೋಷ್ಠಿ ಹಾಗೂ ಕಳಸಗಳೊಂದಿಗೆ ಅವರನ್ನು ಭವ್ಯವಾಗಿ ಸ್ವಾಗತಿಸಲಾಯಿತು. ಮೆರವಣಿಗೆಯಲ್ಲಿ ಭಕ್ತರ ಘೋಷಣೆ ಮೊಳಗಿತು. ಸಿಂಗರಿಸಿದ್ದ ಜೋಡಿ ಹೋರಿಗಳು ಮೆರವಣಿಗೆಗೆ ಕಳೆ ನೀಡಿತು. 108 ತಟ್ಟೆಗಳ ಮೇಲೆ ಮುನಿಗಳನ್ನು ನಡೆಸಿಕೊಂಡು ಬರ ಲಾಯಿತು.

ಕಳೆದ ವರ್ಷ ಜೈನರಗುತ್ತಿ ಕ್ಷೇತ್ರದಲ್ಲಿ ಬೃಹತ್ ಪಂಚಕಲ್ಯಾಣ ಹಾಗೂ 24 ಅಡಿ ಎತ್ತರದ ಪದ್ಮಾಸನ ಭಂಗಿಯ ಶೀಥಲನಾಥ ತೀರ್ಥಂಕರ ಮೂರ್ತಿಯ ಪ್ರತಿಷ್ಠಾಪನೆ ನೆರವೇರಿಸಿದ ನಂತರ ವೀರಸಾಗರ ಮುನಿ ಮಹಾರಾಜರು ವಿಹಾರ ಕೈಗೊಂಡಿದ್ದರು. ಮಹಾರಾಷ್ಟ್ರದ ಜೇಸಿಂಗಪುರ ಪೋತಳಿಗೆ 600 ಕಿ.ಮೀ ಕಾಲ್ನಡಿಗೆಯಲ್ಲಿ ತೆರಳಿದ್ದರು. ಪುನಃ ಈಗ 600ಕಿ.ಮಿ ಜೈನರ ಗುತ್ತಿಗೆ ಹಿಂದಿರುಗಿದ್ದಾರೆ. ಬೇರೆ ಕ್ಷೇತ್ರ ವಿಹಾರ ಸೇರಿ 1800ಕಿ.ಮೀ ವಿಹಾರ ಮಾಡಿದ್ದಾರೆ. ಅವರಿಗೆ ದೀಕ್ಷೆಯಾಗಿ 16 ವರ್ಷ ಕಳೆದಿದೆ. ಅಂದಾಜು 20000 ಕಿ.ಮೀ ಪಾದಯಾತ್ರೆ ನಡೆಸಿದ್ದಾರೆ ಎಂದು ಜೈನರಗುತ್ತಿ ಟ್ರಸ್ಟ್ ಅಧ್ಯಕ್ಷ ಅಡಗೂರು ಶಶಿಕುಮಾರ್ ಹೇಳಿದರು.

ಜೈನ ಮುನಿಗಳು ಮಾನವರು ಮಾತ್ರವಲ್ಲ ಸಕಲ ಜೀವಿಗಳ ಶ್ರೇಯಸ್ಸು ಬಯಸುತ್ತಾರೆ. ಎಲ್ಲರನ್ನೂ ಒಗ್ಗೂಡಿಸಿಕೊಂಡು ಕ್ಷೇತ್ರದ ಅಭಿವೃದ್ಧಿ ಮಾಡುತ್ತಿದ್ದೇವೆ ಎಂದು ವೀರಸಾಗರ ಮುನಿ ಮಹಾರಾಜ್ ಹೇಳಿದರು.

ಜೈನರಗುತ್ತಿ ಟ್ರಸ್ಟ್ ಅಧ್ಯಕ್ಷ ಶಶಿಕುಮಾರ್, ಕಾರ್ಯದರ್ಶಿ ಬ್ರಹ್ಮಪಾಲ ಜೈನ್, ನಿರ್ದೇಶಕರಾದ ದೇವೇಂದ್ರ ಹೊಂಗೇರಿ, ಪದ್ಮಿಣಿ, ನಾಗಶ್ರೀ ಮುಪ್ಪಾನೆ, ನಾಗೇಂದ್ರ ಪ್ರಸಾದ್, ಧವನ್ ಜೈನ್, ಜಯೇಂದ್ರ ಕುಮಾರ್, ಜಿನೇಂದ್ರಬಾಬು, ಕೀರ್ತಿಕುಮಾರ್, ನಾಗಚಂದ್ರ, ಜೈನ ಮಂಡಳಿ ಸಹಕಾರ ಸಂಘದ ಅಧ್ಯಕ್ಷ ಸುಕುಮಾರ್, ಮುಖಂಡರಾದ ಹಾಸನದ ಪಾರ್ಶ್ವನಾಥ, ಎಚ್.ವೈ. ರತ್ನರಾಜು, ಅರ್ಚಕ ಶೀತಲ ಪಂಡಿತ್ ಪಾಲ್ಗೊಂಡಿದ್ದರು.

---

# ರೈತರಿಗಾಗಿ ಮುಖ್ಯಮಂತ್ರಿ ಕೃಷಿ ವಿಸ್ತಾರ ಯೋಜನೆ

## 100 ಕೋ.ರೂ.ಮೀಸಲು: ಸಿದ್ದರಾಮಯ್ಯ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ದಾಖಲೆ ಬಜೆಟ್‌ನಲ್ಲಿ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಿತ್ತನೆಯಿಂದ ಮಾರಾಟದವರೆಗೆ ರೈತರಿಗೆ ಸಮಗ್ರ ಬೆಂಬಲ ನೀಡುವ ನಾಲ್ಕು ಆಧಾರ ಸ್ತಂಭಗಳ ಮೇಲೆ ಕೃಷಿ ಅಭಿವೃದ್ಧಿ ತಂತ್ರವನ್ನು ರೂಪಿಸಿದ್ದಾರೆ. ರೈತರಿಗೆ ವೈಜ್ಞಾನಿಕ ಕೃಷಿ ಮಾರ್ಗದರ್ಶನ, ಹಣಕಾಸು ನೆರವು, ಗುಣಮಟ್ಟದ ಕೃಷಿ ಪರಿಕರ ಒದಗಿಸುವುದು, ಕೊಯ್ಲೋತ್ತರ ಸಂಗ್ರಹಣೆ, ಸಂಸ್ಕರಣೆ ಮತ್ತು ಮಾರುಕಟ್ಟೆ ಸಂಪರ್ಕಗಳ ವಿಸ್ತರಣೆ ಮಾಡಲು ಸರ್ಕಾರ ದೃಢಸಂಕಲ್ಪ ತೊಟ್ಟಿದೆ ಎಂದು ತಿಳಿಸಿದ್ದಾರೆ.

ಉತ್ಪಾದನೋತ್ತರ ಕೃಷಿ ಚಟುವಟಿಕೆಗಳಾದ ಸಂಸ್ಕರಣೆ, ಮೌಲ್ಯವರ್ಧನೆ, ಮೌಲ್ಯ ಸರಪಳಿ ಅಭಿವೃದ್ಧಿ, ಕೃಷಿ ತ್ಯಾಜ್ಯಗಳ ಮರುಬಳಕೆ ಹಾಗು ಮಾರುಕಟ್ಟೆ ಸಂಪರ್ಕಗಳನ್ನು ಸಮಗ್ರವಾಗಿ ಬಲಪಡಿಸುವ ಮೂಲಕ ಗ್ರಾಮೀಣ ರೈತರಿಗೆ ಸ್ಥಿರ ಮತ್ತು ಹೆಚ್ಚುವರಿ ಆದಾಯದ ಮೂಲಗಳನ್ನು ಸೃಜಿಸುವ ಉದ್ದೇಶದಿಂದ ಮುಖ್ಯಮಂತ್ರಿ ಕೃಷಿ ವಿಸ್ತಾರ ಯೋಜನೆಯನ್ನು ಮುಂದಿನ 3 ವರ್ಷಗಳಲ್ಲಿ 100 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುವುದೆಂದರು.

ರಾಜ್ಯದಲ್ಲಿ ಸಿರಿಧಾನ್ಯ ಮತ್ತು ಸಾವಯವ ಉತ್ಪನ್ನಗಳನ್ನು ಉತ್ತೇಜಿಸಲು ನಿರ್ಮಿಸಲಾಗುತ್ತಿರುವ ಮಿಲೆಟ್ ಹಬ್‌ನ್ನು ರೈತರು, ಗ್ರಾಮೀಣ ಯುವಕರು ಮತ್ತು ನವ ಉದ್ಯಮಿಗಳಿಗೆ ತಾಂತ್ರಿಕ ಸಹಾಯ, ಸಂಸ್ಕರಣಾ ಸೌಲಭ್ಯ, ಗುಣಮಟ್ಟ ಪ್ರಮಾಣೀಕರಣ ಮತ್ತು ಮಾರುಕಟ್ಟೆ ಸಂಪರ್ಕಗಳನ್ನು ಒಂದೇ ಸೂರಿನಡಿ ಕಲ್ಪಿಸುವ ಏಕಗವಾಕ್ಷಿ ವ್ಯವಸ್ಥೆಯೊಂದಿಗೆ ಸ್ವಾವಲಂಬಿ ಸಂಸ್ಥೆಯನ್ನಾಗಿಸಲಾಗುವುದೆಂದು ಘೋಷಿಸಿದ್ದಾರೆ.

**ಪ್ರಮುಖ ಘೋಷಣೆ**

ನೂತನ ದ್ವಿದಳ ಧಾನ್ಯ ತಳಿಗಳ ಬಿತ್ತನೆ ಬೀಜಗಳ ಬಳಕೆಯನ್ನು ರೈತರಲ್ಲಿ ಪ್ರೇರೇಪಿಸಲು ನೀಡುತ್ತಿರುವ ಸಹಾಯಧನ ಹೆಚ್ಚಿಸುವುದು, ಪರಿಸರ ಸ್ನೇಹಿ ಮತ್ತು ಸುಸ್ಥಿರ ಕೃಷಿ ಪದ್ಧತಿಗಳನ್ನು ಉತ್ತೇಜಿಸಲು ವಸುಧಾಮೃತ ಕಾರ್ಯಕ್ರಮ, ಕೀಟನಾಶಕಗಳ ಜೊತೆ ಇತರೆ ಸುರಕ್ಷಿತ ನಿರ್ವಹಣಾ ಕ್ರಮಗಳ ಶಿಫಾರಸ್ಸುಗಳನ್ನು ರೈತರಿಗೆ ಸಕಾಲದಲ್ಲಿ ಒದಗಿಸಲು ಸಸ್ಯ ಸಂಜೀವಿನಿ ಯೋಜನೆ ಅನುಷ್ಠಾನಗೊಳಿಸುವುದಾಗಿ ಘೋಷಿಸಿದ್ದಾರೆ. ರೈತರಿಗೆ ಒಂದೇ ಸೂರಿನಡಿ ಹವಾಮಾನ, ಮಾರುಕಟ್ಟೆ, ಕೃಷಿ ತಾಂತ್ರಿಕತೆ ಮತ್ತು ಇಲಾಖೆ ಮಾಹಿತಿಯನ್ನು ತ್ವರಿತವಾಗಿ ಒದಗಿಸಲು ಕೃಷಿ ಇಲಾಖೆಯ ರೈತ ಕರೆ ಕೇಂದ್ರವನ್ನು ಎಐ ತಂತ್ರಜ್ಞಾನದಿಂದ ಉನ್ನತೀಕರಿಸಲಾಗುವುದು. ಚಿತ್ರದುರ್ಗ ಜಿಲ್ಲೆಯ ಬಬ್ಬೂರಿನ ಜಿಲ್ಲಾ ಕೃಷಿ ತರಬೇತಿ ಕೇಂದ್ರವನ್ನು ರಾಜ್ಯಮಟ್ಟದ ಕೃಷಿ ಉದ್ದಿಮೆ ತರಬೇತಿ ಕೇಂದ್ರವನ್ನಾಗಿ ಮಾಡಲಾಗುವುದೆಂದು ತಿಳಿಸಿದ್ದಾರೆ.

**ತೆಂಗು-ಅಡಿಕೆ ಬೆಳೆಗೆ ನೆರವು**

ಅಡಿಕೆಗೆ ಎಲೆ ಚುಕ್ಕಿ, ಹಳದಿ ಎಲೆ ಹಾಗು ಕೊಳೆ ರೋಗಗಳ ಮತ್ತು ತೆಂಗು ಬೆಳೆಯ ಕಪ್ಪು ತಲೆ ಹುಳು ಹಾಗು ಬಿಳಿ ನೊಣಗಳ ನಿಯಂತ್ರಣಕ್ಕಾಗಿ ವಿಶ್ವವಿದ್ಯಾಲಯಗಳು ಮತ್ತು ಕೃಷಿ ವಿಜ್ಞಾನ ಕೇಂದ್ರಗಳ ಸಹಯೋಗದೊಂದಿಗೆ ಸಮುದಾಯ ಆಧಾರಿತ ರೋಗ ಕೀಟ ನಿಯಂತ್ರಣ ಕ್ರಮಗಳನ್ನು 10 ಕೋ.ರೂ. ವೆಚ್ಚದಲ್ಲಿ ಕ್ರಮ ಕೈಗೊಳ್ಳಲಾಗುವುದೆಂದರು.

**ಕೃಷಿ ಕ್ಷೇತ್ರಕ್ಕೆ ಹೊಸದಾಗಿ ಸಿಕ್ಕಿದ್ದು**

ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕನ್ನು ಸಂಪೂರ್ಣ ಸಾವಯವ ತಾಲ್ಲೂಕನ್ನಾಗಿ ಪರಿವರ್ತಿಸುವುದು. ಬಿತ್ತನೆ ಬೀಜ, ಕೀಟನಾಶಕಗಳು, ರಸಗೊಬ್ಬರ, ಕೃಷಿ ಯಂತ್ರೋಪಕರಣಗಳು ಒಂದೇ ಸೂರಿನಡಿ ದೊರಕಿಸಲು ಪ್ರಾಯೋಗಿಕವಾಗಿ ಕೋಲಾರ ಜಿಲ್ಲೆಯಲ್ಲಿ ಎಂಎಸ್ಐಎಲ್ ವತಿಯಿಂದ ರೈತ ಮಾಲ್‌ಗಳ ಸ್ಥಾಪನೆ. ರೈತರಿಗೆ ಕಳಪೆ, ಅಸುರಕ್ಷಿತ, ದೋಷಪೂರಿತ ಬೀಜಗಳು ಮತ್ತು ಕೀಟನಾಶಕದಲ್ಲಿ ಅಕ್ರಮ ತಡೆಗೆ ರಾಜ್ಯ ಮಟ್ಟದ ಸಲಹಾ ಸಮಿತಿ ರಚನೆ.


---

**ಮೌಲಾನಾ ಆಜಾದ್ ಸ್ಕೂಲ್ ಗಳ ಉನ್ನತೀಕರಣ: ಬಜೆಟ್‌ನಲ್ಲಿ ಸಿ.ಎಂ. ಸಿದ್ದರಾಮಯ್ಯ ಘೋಷಣೆ**

# ಉರ್ದು ಶಾಲೆಗಳ ಅಭಿವೃದ್ಧಿಗೆ 400 ಕೋ. ರೂ. ಹೆಚ್ಚುವರಿ ಅನುದಾನ

• ಪ್ರಜೋದಯ ವರದಿ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ರಾಜ್ಯದ ಆಯವ್ಯಯದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ.




ಅಲ್ಪಸಂಖ್ಯಾತರ ವಸತಿ ಶಾಲೆಗಳಿಗೆ ಹೆಚ್ಚಿನ ಬೇಡಿಕೆ ಇರುವ ಕಾರಣ ಸಂತ ಶಿಶುನಾಳ ಶರೀಫರ ಹೆಸರಿನಲ್ಲಿ 10 ಹೊಸ ವಸತಿ ಶಾಲೆಗಳನ್ನು ಪತ್ಯ ಕ್ರಮದಡಿಯಲ್ಲಿ ಪ್ರಾರಂಭಿಸಲಾಗುವುದು. ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ 10 ಕೋಟಿ ರೂ. ಅನುದಾನ ಮೀಸಲಿಟ್ಟಿದ್ದಾರೆ.

ಹೆಚ್ಚಿನ ಬೇಡಿಕೆ ಇರುವ ಜಿಲ್ಲೆಗಳಲ್ಲಿ 150 ಸಂಖ್ಯಾಬಲದ 25 ಹೊಸ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗುವುದು. ಹಾಲಿ ಕಾರ್ಯ ನಿರ್ವಹಿಸುತ್ತಿರುವ 25 ವಿದ್ಯಾರ್ಥಿನಿಲಯಗಳಲ್ಲಿ 50 ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಹೆಚ್ಚಿಸಲಾಗುವುದು.

2025-26ನೇ ಸಾಲಿನಲ್ಲಿ 117 ಮೌಲಾನಾ ಆಜಾದ್ ಮಾದರಿ ಶಾಲೆಗಳು ಹಾಗೂ ಉರ್ದು ಶಾಲೆಗಳನ್ನು ಕೆ.ಪಿ.ಎಸ್. ಮಾದರಿಯಲ್ಲಿ ₹600 ಕೋಟಿ ರೂ.ಗಳ ವೆಚ್ಚದಲ್ಲಿ ಉನ್ನತೀಕರಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಇನ್ನೂ 100 ಶಾಲೆಗಳನ್ನು 400 ಕೋಟಿ ರೂ.ಗಳ ವೆಚ್ಚದಲ್ಲಿ ಇದೇ ಮಾದರಿಯಲ್ಲಿ ಉನ್ನತೀಕರಿಸಲಾಗುವುದು.

ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪೈಕಿ 25 ವಸತಿ ಶಾಲೆಗಳಲ್ಲಿ ಪಿ.ಯು.ಸಿ ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳನ್ನು ಪ್ರಾರಂಭಿಸಲಾಗುವುದು. 18 ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳಲ್ಲಿ ವಾಣಿಜ್ಯ ವಿಭಾಗವನ್ನು ಪ್ರಾರಂಭಿಸಲಾಗುವುದು.

ಅಲ್ಪಸಂಖ್ಯಾತರ ವಸತಿ ಶಾಲೆಗಳಲ್ಲಿ ಪಿ.ಯು.ಸಿ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರವೇಶ ಪರೀಕ್ಷೆಯ ಮೂಲಕ ಆಯ್ಕೆ ಮಾಡಿ, ಅವರಿಗೆ ಪರೀಕ್ಷೆಗಳಿಗೆ ಗುಣಮಟ್ಟದ ತರಬೇತಿ ನೀಡಲು ನಾಲ್ಕು ವಸತಿ ಶಾಲೆಗಳನ್ನು ಗಳನ್ನಾಗಿ ಸ್ಥಾಪಿಸಲಾಗುವುದು. ಅಲ್ಲದೇ 20 ವಸತಿ ಶಾಲೆಗಳಲ್ಲಿನ ಮಕ್ಕಳಿಗೆ ವಿಶೇಷ ತರಬೇತಿ ನೀಡಲಾಗುವುದು.

ಎಲ್ಲಾ ಸಮುದಾಯಗಳ ವಿದ್ಯಾರ್ಥಿಗಳಿಗೆ ನಿರಂತರ ಕಲಿಕಾ ಅವಕಾಶಗಳನ್ನು ಒದಗಿಸಲು ಮತ್ತು ಜ್ಞಾನವನ್ನು ವೃದ್ಧಿಸಲು ಆಯ್ದ ವಕ್ಫ್ ಆಸ್ತಿಗಳಲ್ಲಿ ಕಲಿಕಾ ಕೇಂದ್ರ ಹಾಗೂ ನಾಗರಿಕ ಸೇವಾ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು.

ಅಲ್ಪಸಂಖ್ಯಾತರ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ತಾಂತ್ರಿಕ ಹಾಗೂ ಉನ್ನತ ಮಟ್ಟದ ಡಿಜಿಟಲ್ ಶಿಕ್ಷಣವನ್ನು ಪ್ರೋತ್ಸಾಹಿಸಲು 5,000 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಗಾಗಿ ತಲಾ 50,000 ರೂ.ಗಳನ್ನು ನೀಡಲಾಗುವುದು. ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಇತರೆ ಸಮಾಜ ಸುಧಾರಕರ ಪುಸ್ತಕಗಳನ್ನು ಉರ್ದು ಭಾಷೆಯಲ್ಲಿ ಅನುವಾದಿಸಲಾಗುವುದು.

# ಸಿದ್ದು ಬಜೆಟ್: ರಾಜ್ಯದ ಜನರಿಗೆ ಬರೆ

## ಕರ್ನಾಟಕದ ಆರ್ಥಿಕತೆ ಹಿಂಜರಿಕೆಯತ್ತ ಸಾಗಿದೆ । ಕಾಂಗ್ರೆಸ್ ಸರ್ಕಾರವನ್ನು ಜನರು ಕ್ಷಮಿಸುವುದಿಲ್ಲ । ಹೆಚ್.ಡಿ.ಕೆ.

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ 17ನೇ ಬಜೆಟ್ ಮಂಡಿಸಿದ ಖುಷಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗಾದರೆ, ಜನರಿಗೆ ಬರೆ ಎಳೆಸಿಕೊಂಡ ಬಿಸಿ ತಟ್ಟಲಿದೆ. ದಾಖಲೆ ಮಾಡಲು ಹೋಗಿ ರಾಜ್ಯದ ಆರ್ಥಿಕತೆಯನ್ನು ದಿಕ್ಕಾಪಾಲಾಗಿಸಿದ್ದಾರೆ ಎಂದು ಕೇಂದ್ರದ ಭಾರಿ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಟೀಕಿಸಿದ್ದಾರೆ.

ರಾಜ್ಯ ಬಜೆಟ್ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಸ್ಲೋಗನ್ ರಾಮಯ್ಯನವರ ಬಜೆಟ್ಟಿನ ಸುದೀರ್ಘ ಪ್ರಲಾಪ ಆಲಿಸಿದೆ. ಒಂದು ಮಾತು ಸ್ಪಷ್ಟ, ಕರ್ನಾಟಕದ ಆರ್ಥಿಕತೆ ಹಿಂಜರಿಕೆಯತ್ತ ಸಾಗಿದೆ. ಸಿಎಜಿ ವರದಿ, ರಿಸರ್ವ್ ಬ್ಯಾಂಕ್ ಕೊಟ್ಟಿರುವ ಎಚ್ಚರಿಕೆಗಿಂತ ದೊಡ್ಡ ಆರ್ಥಿಕ ಅಪಾಯಕ್ಕೆ ಸಿಲುಕಿದೆ ಕರ್ನಾಟಕ. ಮುಂದಿನ ದಿನಗಳು ಇನ್ನೂ ದುರ್ಬರವಾಗಲಿವೆ. ಕಾಂಗ್ರೆಸ್ ಸರ್ಕಾರವನ್ನು ರಾಜ್ಯದ ಜನರು ಕ್ಷಮಿಸುವುದಿಲ್ಲ ಎಂದು ಅವರು ವಾಗ್ದಾಳಿ ನಡೆಸಿದ್ದಾರೆ.

ಈ ಆಯವ್ಯಯ ಕರ್ಣ ಕಠೋರ ಮತ್ತು ರಾಜ್ಯಕ್ಕೆ ಭಾರ. ಮುಖ್ಯಮಂತ್ರಿಗಳು ಕೇಂದ್ರದ ನಿಂದನೆಯನ್ನು ಈ ಬಾರಿಯೂ ಮುಂದುವರಿಸಿದರೂ ಅದು ಅಗತ್ಯವಿರಲಿಲ್ಲ. ಒಕ್ಕೂಟ ವ್ಯವಸ್ಥೆಯ ಮೂಲತತ್ವವನ್ನೇ ಮರೆತು ತಮ್ಮ ಸರ್ಕಾರದ ಕೆಟ್ಟ ಮಾದರಿಯನ್ನು ಪ್ರಚಾರ ಮಾಡಿಕೊಂಡು ಆತ್ಮರತಿ ಮೆರೆದಿದ್ದಾರೆ. 16ನೇ ಹಣಕಾಸು ಆಯೋಗದಲ್ಲಿ ರಾಜ್ಯದ ತೆರಿಗೆ ಪಾಲನ್ನು ಶೇ.3.61 ರಿಂದ ಶೇ.4.7ಗೆ ಏರಿಸಲಾಗಿದೆ. ಇದರಿಂದ ಅನಾಮತ್ತಾಗಿ 11,000 ಕೋಟಿ ರೂ.ಗೂ ಹೆಚ್ಚು ಹಣ ರಾಜ್ಯಕ್ಕೆ ಹರಿದುಬರುತ್ತದೆ. ಕೇಂದ್ರದಿಂದ ಹಣ



ಬರುವುದು ಕಡಿಮೆ ಆಗಿಲ್ಲ ಎಂಬುದನ್ನು ಅವರ ಬಜೆಟ್ ಪುಸ್ತಕವೇ ಹೇಳುತ್ತದೆ ಎಂದು ಅವರು ವ್ಯಂಗ್ಯವಾಡಿದ್ದಾರೆ.

ಆದಾಯದ ಕೊರತೆ, ಸತತವಾಗಿ ಹೆಚ್ಚುತ್ತಿರುವ ಸಾಲದ ಪ್ರಮಾಣ ಕಳವಳಕಾರಿ. ಅನುದಾನ ಹಂಚಿಕೆಯಲ್ಲಿ ತಾಳಮೇಳವಿಲ್ಲ, ಲೆಕ್ಕಾಚಾರ ಹಳಿತಪ್ಪಿದೆ ಎಂಬುದಕ್ಕೆ ಬಜೆಟ್ ಪುಸ್ತಕವೇ ಸ್ಪಷ್ಟ ಸಾಕ್ಷಿ. ನಿರೀಕ್ಷೆಗಳನ್ನು ಸೃಷ್ಟಿಸಿ, ಅತೀವ ನಿರಾಸೆ ಉಂಟು ಮಾಡಿದ್ದಾರೆ ಮುಖ್ಯಮಂತ್ರಿಗಳು. ಹಾಗಾಗಿ ಮುಂದಿನ ಚುನಾವಣೆಯಲ್ಲಿ ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ರಾಜ್ಯದ್ದು ಈಗ 4.48 ಲಕ್ಷ ಕೋಟಿ ರೂ. ಗಾತ್ರದ ಬಜೆಟ್. ರಾಜ್ಯದ ಈಗಿನ ಒಟ್ಟು ಸಾಲ 8.24 ಲಕ್ಷ ಕೋಟಿ ರೂ., ಈ ಸಾಲ 1.16 ಲಕ್ಷ ಕೋಟಿ ರೂ.ನಿಂದ 1.32 ಲಕ್ಷ ಕೋಟಿ ರೂ.ಗೆ ಏರಿದೆ. ಮುಂದಿನ ವರ್ಷಕ್ಕೆ 9 ಲಕ್ಷ ಕೋಟಿ ರೂ. ಮೀರುವುದು ಗ್ಯಾರಂಟಿ. ಈ ಸಾಲದ ಗ್ಯಾರಂಟಿ ಭೀತಿ ಹುಟ್ಟಿಸುತ್ತದೆ ಎಂದಿದ್ದಾರೆ.

ಸಾಲ ಮಾಡುತ್ತಿದ್ದೀರಿ, ಸರಿ. ಅದನ್ನು ಯಾವುದಕ್ಕೆ ಬಳಕೆ ಮಾಡುತ್ತಿದ್ದೀರಿ? ಸಾಲಕ್ಕೆ ತಕ್ಕಂತೆ ಬಂಡವಾಳ ವೆಚ್ಚವೂ ಆಗಬೇಕಲ್ಲವೇ? ದುರಂತವೆಂದರೆ, ಬಂಡವಾಳ ವೆಚ್ಚ ಎಲ್ಲಿದೆಯೋ ಕಳೆದ ಮೂರು ವರ್ಷಗಳಿಂದ ಅಲ್ಲೇ ಇದೆ. ಇವರು ಸಾಲ ಮಾಡಿ ಮೋಜು ಮಾಡುತ್ತಿದ್ದಾರೆ. ಸಾಲದ ಮೇಲೆ ಸಾಲ ಮಾಡಿ 140ಕ್ಕೂ ಹೆಚ್ಚು ಕಾಂಗ್ರೆಸ್ ನಾಯಕರಿಗೆ ಕ್ಯಾಬಿನೆಟ್ ದರ್ಜೆ, ಸ್ಟೇಟ್ ಮಿನಿಸ್ಟರ್ ದರ್ಜೆ ದಯಪಾಲಿಸಿ ಪೊಗದಸ್ತಾಗಿ ಸಾಕುತ್ತಿದ್ದಾರೆ. ಅನುತ್ಪಾದಕ ವೆಚ್ಚಕ್ಕೆ ಹಣ ಪೋಲಾಗುತ್ತಿದ್ದು, ಈ ಸರ್ಕಾರ ಕಾಂಗ್ರೆಸ್ ಕಾರ್ಯಕರ್ತರಿಗೆ ಗಂಜಿ ಕೇಂದ್ರವಾಗಿದೆ. ಸಾಲದ ದುಡ್ಡು ಅವರ ಕಿಸೆಗೆ ಹೋಗಿ ಸೇರುತ್ತಿದೆ. ವೋಟು ಕೊಟ್ಟ ಮಹಾಪಾಪಕ್ಕೆ ಜನತೆಯನ್ನು ಶಾಶ್ವತವಾಗಿ ಸಾಲದ ಕೂಪಕ್ಕೆ ನೂಕುವ ಧಾರುಣ ಬಜೆಟ್ ಇದಾಗಿದೆ ಎಂದು ಕುಮಾರಸ್ವಾಮಿ ಅವರು ಟೀಕಿಸಿದ್ದಾರೆ.

ಮುಂಬರುವ ಸರ್ಕಾರಗಳಿಗೆ ಕಾಂಗ್ರೆಸ್ ಸರ್ಕಾರ ಸೃಷ್ಟಿಸುವ ಸಾಲದ ಗುಂಡಿಯನ್ನು ಮುಚ್ಚುವುದೇ ಕೆಲಸ ಆಗಲಿದೆ ಎಂದು ಹೆಚ್.ಡಿ.ಕೆ. ಅವರು ಆರೋಪಿಸಿದ್ದಾರೆ.

---

### ಒಂದು ಕೋಟಿ ರೂ. ವೆಚ್ಚದಲ್ಲಿ ಮೂಲಭೂತ ಸೌಕರ್ಯ

# ರಸ್ತೆ- ಒಳಚರಂಡಿ ಕಾಮಗಾರಿಗೆ ಭೂಮಿ ಪೂಜೆ

• ಪ್ರಜೋದಯ ವರದಿ

**ಆಲೂರು:** ದೊಡ್ಡಕಣಗಾಲು ಗ್ರಾಮ ಪಂಚಾಯಿತಿ ಸೋಂಪುರ ಗ್ರಾಮದ ಪರಿಮಿತಿಯಲ್ಲಿ 1 ಕೋಟಿ ರೂ. ವೆಚ್ಚದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ಅವರು ತಿಳಿಸಿದರು.

ಸೋಂಪುರ ಗ್ರಾಮದಲ್ಲಿ ಗುರುವಾರ ಗ್ರಾಮದ ಪರಿಮಿತಿಯೊಳಗೆ ನೂತನ ರಸ್ತೆ ಮತ್ತು ಒಳಚರಂಡಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ದೇಶಕ್ಕೆ ಸ್ವಾತಂತ್ರ ಸಿಕ್ಕಿದ್ದರೂ ತಾಲೂಕಿನ ದೊಡ್ಡಕಣಗಾಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೋಂಪುರ ಗ್ರಾಮದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ನಿವಾರಣೆಯಾಗಿರಲಿಲ್ಲ.

ಗ್ರಾಮದಲ್ಲಿ ಸುಮಾರು 80 ಕ್ಕೂ ಹೆಚ್ಚು ಕುಟುಂಬಗಳಿದ್ದು ಮೂಲಭೂತ ಸೌಕರ್ಯಗಳಿಂದ ನಲುಗಿ ಹೋಗಿದೆ. ಈಗ ಚರಂಡಿ, 500 ಮೀ. ಡಾಂಬರು ರಸ್ತೆ, 200 ಮೀ.



ಕಾಂಕ್ರೀಟ್ ರಸ್ತೆ, 167 ಮೀ. ಜಲ್ಲಿ ರಸ್ತೆ ಮಾಡಲಾಗುವುದು ಎಂದು ಅವರು ತಿಳಿಸಿದರು.

ಜನಸಾಮಾನ್ಯರಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು ಜನಪ್ರತಿನಿಧಿಗಳ ಕರ್ತವ್ಯ. ಗ್ರಾಮಸ್ಥರು ಹಾಗೂ ಸಾರ್ವಜನಿಕರ ಬಹು ದಿನಗಳ ಬೇಡಿಕೆಯಾಗಿದ್ದ ಗ್ರಾಮದ ಪರಿಮಿತಿ ರಸ್ತೆ ನಿರ್ಮಾಣದಿಂದ ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಗ್ರಾಮದ ಕುಂದು- ಕೊರತೆಗಳು ಮತ್ತು ಆಗಬೇಕಿರುವ ಅಭಿವೃದ್ಧಿ ಕಾರ್ಯಗಳ ಕುರಿತು ಸ್ಥಳೀಯರಿಂದ ಮಾಹಿತಿ ಪಡೆಯಲಾಯಿತು.

ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರು, ಪಕ್ಷದ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

---

# ಮೀನು ಪಾಲನಾ ಕೇಂದ್ರ ನಿರ್ಮಾಣಕ್ಕೆ ಕ್ರಮ

## ಅಗತ್ಯವಿರುವ ಜಾಗ ಗುರುತಿಸಲು ಶಾಸಕ ಸಿಮೆಂಟ್ ಮಂಜು ಸೂಚನೆ

• ಪ್ರಜೋದಯ ವರದಿ

**ಆಲೂರು:** ತಾಲೂಕು ಕೇಂದ್ರ ಸನಿಹದಲ್ಲಿ ಮೀನುಮರಿ ಪಾಲನ ಕೇಂದ್ರ ತೆರೆಯಲು ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ಅವರು ತಿಳಿಸಿದರು.

ಪಟ್ಟಣದಲ್ಲಿರುವ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಇಲಾಖೆ ವತಿಯಿಂದ ರಾಜ್ಯ ವಲಯ ಮತ್ತು ಜಿಲ್ಲಾ ವಲಯ (ಎಸ್.ಸಿ.ಪಿ/ಟಿ.ಎಸ್.ಪಿ) ಯೋಜನೆಯಡಿ ಮೀನುಗಾರಿಕೆಯನ್ನು ಪ್ರೋತ್ಸಾಹಿಸುವ ಸಲುವಾಗಿ, 22 ವೃತ್ತಿನಿರತ ಮೀನುಗಾರರಿಗೆ ಉಚಿತವಾಗಿ ಮೀನುಗಾರಿಕೆ ಸಲಕರಣೆ ಕಿಟ್ ಮತ್ತು ಹರಿಗೋಲು ವಿತರಿಸಿ ಅವರು ಮಾತನಾಡಿ, ಇಂತಹ ಯೋಜನೆಗಳಿಂದ ಮೀನುಗಾರರಿಗೆ ಅನುಕೂಲವೆಂದರು.



ತಾಲ್ಲೂಕಿನ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸುಮಾರು 800 ಕೆರೆಗಳಿವೆ. ಕೆರೆಗಳಲ್ಲಿ ಮೀನು ಸಾಕಲು ಹಾಸನ, ಸಕಲೇಶಪುರ ಇತರೆಡೆಯಲ್ಲಿ ಮೀನುಮರಿಗಳನ್ನು ತಂದು ಕೆರೆಗಳಿಗೆ ಬಿಡಬೇಕಾಗಿದೆ. ಸ್ಥಳೀಯವಾಗಿ ಘಟಕವನ್ನು ಸ್ಥಾಪಿಸಿದರೆ ವೆಚ್ಚ ಕಡಿಮೆಯಾಗುತ್ತದೆ. ಆದ್ದರಿಂದ ಮೀನು ಮರಿ ಪಾಲನಾ ಕೇಂದ್ರಕ್ಕೆ ಅಗತ್ಯವಿರುವ ಜಾಗವನ್ನು ಗುರುತಿಸಬೇಕೆಂದು ಸೂಚಿಸಿದರು.

ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಶಾಂತರಾಜು ಮಾತನಾಡಿ, ತಾಲ್ಲೂಕಿನಲ್ಲಿ ಇಲಾಖೆಗೆ ಸೇರಿದ ದೊಡ್ಡ ಕೆರೆಗಳಿವೆ. ಈ ಕೆರೆಗಳಲ್ಲಿ ಮೀನು ಸಾಕಲಾಗಿದೆ. ಪ್ರತಿ ವರ್ಷ ಹರಾಜು ಮೂಲಕ ಮಾರಾಟ ಮಾಡಲಾಗುವುದು. ತಾಲ್ಲೂಕು ಕೇಂದ್ರದಲ್ಲಿ ಮೀನು ಪಾಲನ ಕೇಂದ್ರವಾದರೆ ಹೆಚ್ಚು ಮೀನುಗಾರಿಕೆ ನಡೆಸಲು ಅನುಕೂಲವಾಗುತ್ತದೆ ಎಂದು ಶಾಸಕ ಮಂಜು ತಿಳಿಸಿದರು.

ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕ ಶಾಂತರಾಜು, ಫಲಾನುಭವಿಗಳು, ಮೀನುಗಾರಿಕೆ ಇಲಾಖೆ ಅಧಿಕಾರಿಗಳು, ಫಲಾನುಭವಿಗಳು ಹಾಗೂ ಸಾರ್ವಜನಿಕರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

---

# ಶಿಕ್ಷಕಿಯರು ಮಾತೃಹೃದಯವಂತರು: ಸಂಸದ ಶ್ರೇಯಸ್

• ಪ್ರಜೋದಯ ವರದಿ

**ಹೊಳೆನರಸೀಪುರ:** ಶಿಕ್ಷಕರ ವೃತ್ತಿ ಗೌರವಯುತವಾದದ್ದು, ಅದರಲ್ಲೂ ಶಿಕ್ಷಕಿಯರು ಮಾತೃಹೃದಯವಂತರು ಎಂದು ಸಂಸದ ಶ್ರೇಯಸ್ ಎಂ. ಪಟೇಲ್ ಅವರು ಪ್ರಶಂಸಿದರು.

ಪಟ್ಟಣದಲ್ಲಿ ಶೈಕ್ಷಣಿಕ ಕಾರ್ಯಾಗಾರ ಮತ್ತು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮತನಾಡಿದ ಅವರು, ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳೆಂದೇ ಪರಿಗಣಿಸಿ ಕಲಿಸಿ, ನಲಿಸುವ ಶಿಕ್ಷಕಿಯರು ಮಾತೃಸಮಾನರು. ಶಿಕ್ಷಕ ವೃತ್ತಿಯನ್ನು ಅತ್ಯಂತ ಸಂತೃಪ್ತಿದಾಯಕ ವೃತ್ತಿಯಾದ್ದರಿಂದ ಎಲ್ಲರೂ ಗೌರವಿಸುತ್ತಾರೆ. ಆಡಿ ಕಲಿತು ದೊಡ್ಡವರಾದ ಮೇಲೂ ಅವರನ್ನು ಕಂಡರೆ ಅದೇನೋ ಒಂದು ರೀತಿಯ ಗೌರವ ಮೂಡುತ್ತದೆ. ಶಿಕ್ಷಕರಲ್ಲಿ ಶಿಷ್ಯರ ಉನ್ನತಿ ಕಂಡು



ಹೆಮ್ಮೆ ಅನಿಸುತ್ತದೆ ಇದು ಬೇರೆ ವೃತ್ತಿಗಿಂತ ವಿಭಿನ್ನವಾಗಿದೆ. ಎಲ್ಲ ಮಾತೃಸಮಾನ ಶಿಕ್ಷಕಿಯರಿಗೆ ಮಹಿಳಾ ದಿನದ ಶುಭಾಷಯಗಳು ಎಂದರು.

ಬಿ.ಇ.ಒ. ಸೋಮಲಿಂಗೇಗೌಡ ಅವರು ಮಾತನಾಡಿ, ಎಲ್ಲರಲ್ಲೂ ದೇವರನ್ನು ಕಾಣುವ ಮನೋಭಾವ ಶಿಕ್ಷಕರದ್ದಾಗಬೇಕು. ನಮ್ಮ ವೃತ್ತಿಯಲ್ಲಿ ತಾರತಮ್ಯ ಇರಬಾರದು. ಈ ನಿಟ್ಟಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ತಯಾರಿಗೆ ಶೈಕ್ಷಣಿಕ ಕಾರ್ಯಾಗಾರ ನಡೆಸಲಾಗುತ್ತಿದೆ. ಎಲ್ಲ ಲೋಪ ಇಲ್ಲದಂತೆ ಅಚ್ಚುಕಟ್ಟಾಗಿ ನಿಯಮ ಅನುಸರಿಸಿ ಪರೀಕ್ಷೆ ನಡೆಸಬೇಕಿದೆ. ಪರ್ಯಾಯ ಬೋಧನೆ. ಪ್ರೇರಣೆ ಮುಂತಾದ ಕಾರ್ಯಕ್ರಮಗಳ ಮೂಲಕ ಈ ಬಾರಿ ಉತ್ತಮ ಫಲಿತಾಂಶ ನಿರೀಕ್ಷೆ ಇದೆ ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಕಟ್ಟಡ ಶಿಥಿಲವಾಗಿದೆ. ಹೊಸ ಕಟ್ಟಡ ನಿರ್ಮಿಸಲು ಕೋರಿ ಪರಿಶಿಷ್ಟ ಜಾತಿ ಮತ್ತು ವರ್ಗದ ಶಿಕ್ಷಕರ ಸಂಘದ ಸದಸ್ಯರು ಸಂಸದರಿಗೆ ಅಹವಾಲು ನೀಡಿದರು. ನಿವೃತ್ತಿ ಅಂಚಿನ ಶಿಕ್ಷಕರು, ಬಾಣಂತಿಯರು ಹಾಗೂ ಅನಾರೋಗ್ಯ ಪೀಡಿತರನ್ನು ಸದ್ಯದಲ್ಲೇ ನಿರ್ವಹಿಸಬೇಕಿರುವ ಜನಗಣತಿ ಕಾರ್ಯದಿಂದ ವಿಮುಕ್ತಿ ನೀಡುವಂತೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮನವಿ ಮಾಡಿತು.

ತಹಸೀಲ್ದಾರ್ ವೈ.ಎಂ.ರೇಣುಕುಮಾರ್, ಡಯಟ್‌ನ ಉಪನ್ಯಾಸಕಿ ಗೀತಾ, ಉಪನ್ಯಾಸಕಿ ಉಷಾ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಹಲಿಂಗ, ಸಾವಿತ್ರಿಬಾಯಿ ಪುಲೆ ಸಂಘದ ಅಧ್ಯಕ್ಷೆ ಶಿಕ್ಷಕಿ ಮಮತ, ಬ್ರಮರಾಂಭ ಇನ್ನಿತರರು ಇದ್ದರು.

---

## ದಾಖಲೆಗಳನ್ನು ಸಲ್ಲಸಲು ಸೂಚನೆ

• ಪ್ರಜೋದಯ ಎಂದ



**ಹಾಸನ:** ಜಿಲ್ಲೆಯ ಎಲ್ಲಾ ಪಡಿತರ ಚೀಟಿದಾರರು ವಿವಿಧ ಕಾರಣಗಳಿಂದ ಆದ್ಯತಾ ಪಡಿತರ ಚೀಟಿಯು (ಬಿ.ಪಿ.ಎಲ್) ಆದ್ಯತೇತರ ಪಡಿತರ ಚೀಟಿಯಾಗಿ (ಎ.ಪಿ.ಎಲ್) ಪರಿ ವರ್ತಿತವಾಗಿದ್ದಲ್ಲಿ ಹಾಗೂ ಪಡಿತರ ಚೀಟಿದಾರರು ಆದ್ಯತಾ ಪಡಿತರ ಚೀಟಿ ಹೊಂದಲು ಅರ್ಹರಿದ್ದಲ್ಲಿ, ಸೂಕ್ತ ದಾಖಲೆಗಳೊಂದಿಗೆ ಆಯಾ ತಾಲ್ಲೂಕಿನ ತಹಶೀಲ್ದಾರ್ ಕಚೇರಿಯ ಆಹಾರ ಶಾಖೆ ಆಹಾರ ಶಿರಸ್ತೇದಾರ್ ಮತ್ತು ಆಹಾರ ನಿರೀಕ್ಷಕರುಗಳಿಗೆ ದಾಖಲೆಗಳನ್ನು ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

# ಸಮಾಜದಲ್ಲಿ ಹೆಚ್ಚುತ್ತಿರುವ ಅನ್ಯಾಯ, ಅಕ್ರಮಗಳು

## ಪೋಷಕರು ತಮ್ಮ ಮಕ್ಕಳ ಮೇಲೆ ಗಮನಹರಿಸಬೇಕು: ಪ್ರೊ.ತಮ್ಮಣಗೌಡ ಸಲಹೆ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಶಿಕ್ಷಣದಿಂದ ಸಮಾಜದಲ್ಲಿನ ಶೋಷಣೆ, ಅನಿಷ್ಠ ಪದ್ಧತಿ, ಸಮಸ್ಯೆಗಳು ನಿವಾರಣೆಯಾಗುತ್ತವೆ ಎಂಬುದಾಗಿ ಹೊಂದಿದ್ದ ಆಶಯ ಇಂದಿನ ಶಿಕ್ಷಣವಂತ ಸಮಾಜದಿಂದ ದೂರವಾಗಿ ಎಲ್ಲೆಡೆ ಅನ್ಯಾಯ, ಅಕ್ರಮಗಳೇ ಹೆಚ್ಚಾಗಿವೆ ಎಂದು ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೋ.ತಮ್ಮಣಗೌಡ ಹೇಳಿದರು.

ತಾಲ್ಲೂಕಿನ ಶ್ರವಣಬೆಳಗೊಳ ಹೋಬಳಿಯಲ್ಲಿನ ಜಿನ್ನೇನಹಳ್ಳಿಯಲ್ಲಿರುವ ರಚನಾ ಪಬ್ಲಿಕ್ ಸ್ಕೂಲ್‌ನ 2025-26ನೇ ಸಾಲಿನ ವಾರ್ಷಿಕೋತ್ಸವ ರಚನಾ ಕಲರವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಅಸತ್ಯದಿಂದ ಸತ್ಯದೆಡೆಗೆ, ಕೆಟ್ಟದರಿಂದ ಒಳ್ಳೆದರ ಕಡೆಗೆ ಸಾಗಲು ಸಾಧ್ಯವೆಂಬ ಉದ್ದೇಶ ಹೊಂದಿದ್ದ ಶಿಕ್ಷಣವೀಗ ತನ್ನ ಮಹತ್ವವನ್ನು ಕಳೆದುಕೊಂಡಿದೆ. ಶಿಕ್ಷಣದಿಂದ ಸಮಾಜದಲ್ಲಿನ ರೋಗರುಜನಗಳು ನಶಿಸಿ, ಎಲ್ಲರಿಗೂ ಸಮಬಾಳು, ಸಮಪಾಲು ಸಿಗುತ್ತದೆ ಎಂಬ ಆಶಯವೀಗ ಹುಸಿಯಾಗಿದೆ. ಇಂದು ಕಲಿತರವರಿಂದ ಸಮಾಜ ಸುಧಾರಣೆ ಎಂಬುದು ಮರೀಚಿಕೆಯಾಗಿದೆ. ಅವರಿಂದಲೇ ಶೋಷಣೆಗಳು ಸಮಸ್ಯೆಗಳು ಸೃಷ್ಠಿಯಾಗುತ್ತಿವೆ. ಬಡವರ, ದೀನ -ದಲಿತರ ಕೆಲಸ ಮಾಡಬೇಕಾದ ಅಧಿಕಾರಿಗಳು ಲಂಚಬಾಕತನ ಹೊಂದಿದ್ದಾರೆ, ಇವರನ್ನು ಹದ್ದುಬಸ್ತಿನಲ್ಲಿಡಬೇಕಾದ ರಾಜಕಾರಣಿಗಳು ಇದರಿಂದ ಹೊರತಾಗಿಲ್ಲವೆಂದು ಬೇಸರ ವ್ಯಕ್ತಪಡಿಸಿದರು.

ಸಂವಿಧಾನದ ಆಶಯದಂತೆ ಪ್ರಜಾ



ಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳು, ಪ್ರಭುಗಳೀಗ ತಮ್ಮ ಪ್ರಭುತ್ವವನ್ನು ಹಣ ಹೆಂಡಕ್ಕೆ ಮಾರಿಕೊಳ್ಳುತ್ತಿರುವಾಗ ಅವರು ಕತ್ತಲೆಯಿಂದ ಬೆಳಕಿನೆಡೆಗೆ ಬರಲು ಹೇಗೆ ಸಾಧ್ಯವೆಂದ ಅವರು, ಶಿಕ್ಷಣವನ್ನು ಪ್ರತಿ ಹೆಜ್ಜೆಗೂ ದುರಪಯೋಗಪಡಿಸಿಕೊಳ್ಳುವ ಕೆಲಸವಾಗುತ್ತಿದೆ. ಪ್ರತಿ ಪೋಷಕರು ತಮ್ಮ ಮಕ್ಕಳಿಗೆ ಸರಿಯಾದ ಶಿಕ್ಷಣ ಕೊಡಿಸುವ ನಿಟ್ಟಿನಲ್ಲಿ ಹಾಕುವ ಶ್ರಮದ ಜೊತೆಗೆ ಸರಿಯಾದ ನಡವಳಿಕೆ, ಸಂಸ್ಕೃತಿಯನ್ನು ಕಲಿಸದಿದ್ದರೇ ಎಂತಹುದೇ ಶಿಕ್ಷಣ ಸಿಕ್ಕರೂ ವ್ಯರ್ಥವೆಂದರು.

ಜುಟ್ಟನಹಳ್ಳಿ ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಪ್ರಕಾಶ್ ಅವರು ಮಾತನಾಡಿ, ವಿದ್ಯಾರ್ಥಿಗಳು ಪ್ರಸಕ್ತ ಶೈಕ್ಷಣೀಕ ವರ್ಷದ ಕೊನೆಘಟ್ಟದಲ್ಲಿದ್ದು, ಇಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಮುಗಿದು, ನಂತರ ಆರಂಭವಾಗುವ ಪರೀಕ್ಷೆಗಳಿಗೆ ತಯಾರಿಯಾಗಬೇಕು, ವರ್ಷವಿಡಿ ಓದಿದನ್ನು ಪರೀಕ್ಷಿಸುವ ಸಮಯ, ಚೆನ್ನಾಗಿ ಕಲಿತ ಪಠ್ಯವನ್ನು ಗಮನವಿಟ್ಟು ಬರೆದಾಗ ಉತ್ತಮ ಅಂಕ ಬರಲು ಸಾಧ್ಯವೆಂದರು.

ಎಂ.ಎಸ್.ರಾಮಯ್ಯ ಕಿಂಡರ್ ಕೇರ್ ವಿಭಾಗದ ಜನರಲ್ ಮ್ಯಾನೇಜರ್ ಅಮಿತ್, ಪ್ರಾಂಶುಪಾಲೆ ಸುನೀತಾ ಪ್ರಕಾಶ್, ಎಸ್‌ಜಿವೈ ವಿದ್ಯಾಸಂಸ್ಥೆ ಸಂಸ್ಥಾಪಕ, ಕಾರ್ಯದರ್ಶಿ ಪ್ರಕಾಶ್, ಸ್ಕೂಲ್‌ನ ಆಡಳಿತಾಧಿಕಾರಿ ಮಂಜುನಾಥ್, ಭೋಧಕ ಸಿಬ್ಬಂದಿ ಇದ್ದರು.

---

ಕರ್ನಾಟಕ ಸರ್ಕಾರ

**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ**

**ಲೋಕೋಪಯೋಗಿ ಇಲಾಖೆ ಹಾಸನ ವಿಭಾಗ, ಹಾಸನ.**

ಸಂಖ್ಯೆ: 43:ಕಾಇಂ:ಲೋಇ:ಹಾವಿಹಾ:ಕಿ.ಇಂ-4:2025-26

ದಿನಾಂಕ: 03.03.2026

**ಸರ್ವಿಸ್ ಟೆಂಡರ್ ಪ್ರಕಟಣೆ**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಸಿ-8 ನಿಯಮದನ್ವಯ ಹಾಸನ ವಿಭಾಗ ವ್ಯಾಪ್ತಿಯ ಸೇವೆಗೆಗಳನ್ನು ಪಡೆಯಲು ಅರ್ಹ ಗುತ್ತಿಗೆದಾರರು/ಸಂಸ್ಥೆಗಳಿಂದ ಹಾಸನ ವಿಭಾಗ ವ್ಯಾಪ್ತಿಯ 01 ಸಂಖ್ಯೆ ಸೇವೆಗಾಗಿ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನಲ್ಲಿನ ಸೇವೆಗಳನ್ನು ಪಡೆಯಲು ಪರಿಗಣಿಸಿರುವ ಮೊತ್ತ.ರೂ.37.50 ಲಕ್ಷಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ: 12.03.2026 16.00 ಗಂಟೆ. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172-268437ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಲೋಇ ಹಾಸನ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/1151/ಕೆಎಸ್‌ಎಂಸಿಎ/2025-26

---

# ಯಡೇಹಳ್ಳಿಯಲ್ಲಿ ನಾಳೆ ಭೀಮೋತ್ಸವ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ಮದಘಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜ್ಯೋತಿಬಾಪುಲೆ ನಗರದ ಯಡೇಹಳ್ಳಿಯಲ್ಲಿ ಮಾ.8 ರಂದು ಸಂಜೆ 6 ಗಂಟೆಗೆ ಭೀಮೋತ್ಸವ ಕಾರ್ಯಕ್ರಮವನ್ನು ಆಚರಿಸಲಾಗುವುದು ಎಂದು ಭೀಮೋತ್ಸವ ಸಮಿತಿ ಅಧ್ಯಕ್ಷ ಚಂದ್ರು ಮತ್ತು ಸದಸ್ಯ ಶಶಿಧರ್ ಮೌರ್ಯ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಗಳನ್ನು ಸಮಾಜದ ಎಲ್ಲ ವರ್ಗಗಳಿಗೂ ತಲುಪಿಸುವ ಉದ್ದೇಶದಿಂದ ಈ ಉತ್ಸವ ಆಯೋಜಿಸಲಾಗಿದೆ. ಕಾರ್ಯಕ್ರಮದ ಅಂಗವಾಗಿ ಗಾಂಧಾರ ಬುದ್ಧ ವಿಹಾರದ ಅಧ್ಯಕ್ಷರಾದ ಭೋಧಿ ದತ್ತ ಮಹಥೇರ ಅವರ ದಿವ್ಯ ಸಾನ್ನಿಧ್ಯದಲ್ಲಿ ಧಾರ್ಮಿಕ



ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಜೊತೆಗೆ ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಶಿವಾಚಾರ್ಯ ಮಹಾಸ್ವಾಮೀಜಿಗಳು ಹಾಗೂ ವಿವಿಧ ಸಂಘಟನೆಗಳ ನಾಯಕರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಶಾಸಕ ಹೆಚ್.ಕೆ.ಸುರೇಶ್ ಉದ್ಘಾಟಿಸಲಿದ್ದು, ಈ ಬಾರಿ ಕಾರ್ಯ ಕ್ರಮಕ್ಕಾಗಿ ವಿಶೇಷವಾಗಿ ''ಅನುಭವ ಮಂಟಪ ವೇದಿಕೆ'' ನಿರ್ಮಿಸಲಾಗುತ್ತಿದೆ. ಈ ವೇದಿಕೆಯ ಮೂಲಕ ಬುದ್ಧ, ಬಸವಣ್ಣ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಸೇರಿದಂತೆ ಸಮಾಜ ಪರಿವರ್ತನೆಗೆ ಕಾರಣರಾದ ಮಹಾನ್ ನಾಯಕರ ವಿಚಾರಧಾರೆಗಳನ್ನು ಜನರಿಗೆ ಪರಿಚಯಿಸುವ ಕಾರ್ಯಕ್ರಮಗಳು ನಡೆಯಲಿವೆ. ಯುವಕರಿಗಾಗಿ ಕ್ರಿಕೆಟ್ ಪಂದ್ಯಾವಳಿ ಮತ್ತು ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ಭೀಮೋತ್ಸವ ಸಮಿತಿಯ ಗೌರವಾಧ್ಯಕ್ಷ ಹೊಳೆಯಯ್ಯ, ಖಜಾಂಚಿ ರಘು ಉಪಸ್ಥಿತರಿದ್ದರು.

---

# ಕೋಡಿಮಠದ ಶ್ರೀಗಳ ಬೆಳ್ಳಿ ಪಲ್ಲಕ್ಕಿ ಉತ್ಸವ

• ಪ್ರಜೋದಯ ವರದಿ

**ಹಾರನಹಳ್ಳಿ:** ಕೋಡಿಮಠ ಮಹದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಕೋಡಿಮಠದ ಪೀಠಾಧ್ಯಕ್ಷ ಡಾ. ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳ ಬೆಳ್ಳಿ ಪಲ್ಲಕ್ಕಿ ಉತ್ಸವವು ಹಾರನಹಳ್ಳಿಯಲ್ಲಿ ವಿಜೃಂಭಣೆಯಿಂದ ನಡೆಯಿತು.

ಶ್ರೀ ಮಠದ ಸಂಪ್ರದಾಯದಂತೆ ಶ್ರೀ ಶಿವಲಿಂಗೇಶ್ವರ ಸ್ವಾಮಿ ಗದ್ದುಗೆಗೆ ಪೂಜ್ಯ ಗುರುಗಳು ಪೂಜೆ ಸಲ್ಲಿಸಿದ ನಂತರ ಸಂಪ್ರದಾಯದಂತೆ ಶ್ರೀಗಳನ್ನು ಬೆಳ್ಳಿ ಪಲ್ಲಕ್ಕಿಯ ವಿರಾಜಮಾನ ರಾಗಿ ಮಹಾರಾಜರು ಹಾಗೂ ಹೈದರಾಲಿ ನೀಡಿದ್ದ ಬಿರುದು ಬಾವಲಿಗಳಿಂದ ಬಣ್ಣ ಬಣ್ಣ ಹೂವುಗಳಿಂದ ಅಲಂಕೃತವಾದ ಬೆಳ್ಳಿ ಪಲ್ಲಕ್ಕಿ ಗ್ರಾಮದಲ್ಲಿ ವೈಭವದಿಂದ ನಡೆಯಿತು. ಪಲ್ಲಕಿ ಉತ್ಸವದ ಮುಂದೆ ಶ್ರೀ ಮಠದ ಉತ್ತರಾಧಿಕಾರಿ ಶ್ರೀ ಚೇತನ್ ಮರಿದೇವರು ಭಕ್ತಿಯಿಂದ ಭಕ್ತರುಗಳು ನಮಿಸಿದರು.



ಉತ್ಸವದಲ್ಲಿ ಜಾನಪದ ಕಲಾ ಪ್ರಕಾರಗಳಾದ ವೀರಗಾಸೆ, ಬಜನೆ, ಕರಡೆ ಮಜಲು, ಕಹಳೆ ಬೆಳ್ಳಿ ನಂದಿ ಧ್ವಜ ಕುಣಿತ ವಿವಿಧ ಪ್ರಕಾರ ವಾದ್ಯಗಳು ಈ ಉತ್ಸವಕ್ಕೆ ಮೆರಗು ನೀಡಿತು. ಗ್ರಾಮದಲ್ಲಿ ತಳಿರು ತೋರಣಗಳಿಂದ ಅಲಂಕೃತಗೊಂಡಿದ್ದು ಮನೆ ಮುಂಭಾಗದಲ್ಲಿ ರಂಗೋಲಿ ಚಿತ್ರಗಳು ಆಕರ್ಷಕವಾಗಿತ್ತು. ಹಾಗೆಯೇ ಸ್ವಾಮೀಜಿಯವರಿಗೆ ಗ್ರಾಮದ ಎಲ್ಲಾ ಸಮುದಾಯದವರು ಹಾಗೂ ಮನೆ ಮನೆ ಮುಂದೆ ಭಕ್ತರುಗಳು ಶ್ರೀಸ್ವಾಮಿಜೀಯವರಿಗೆ ಹಾರ ಫಲ ಸಮರ್ಪಿಸಿ ಭಕ್ತಾಧಿಗಳು ಗುರುಗಳಿಂದ ಆಶೀರ್ವಾದ ಪಡೆದರು.

---

## ಸ್ವಚ್ಛತಾ ಜಾಗೃತಿ ಕಾರ್ಯಕ್ರಮ: ಕಸದ ವಿಂಗಡಣೆಗೆ ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಮನವಿ

# ಮನೆಗಳಲ್ಲಿಯೇ ಹಸಿ ಕಸ, ಒಣ ಕಸ ಪ್ರತ್ಯೇಕಿಸಿ

• ಪ್ರಜೋದಯ ವರದಿ

**ಬೇಲೂರು:** ಪಟ್ಟಣವನ್ನು ಸ್ವಚ್ಛವಾಗಿಡಲು ಪುರಸಭೆಯೊಂದಿಗೆ ಪ್ರತಿಯೊಬ್ಬ ನಾಗರಿಕರೂ ಕೈಜೋಡಿಸಬೇಕು ಮತ್ತು ತಮ್ಮ ಮನೆಗಳಲ್ಲಿಯೇ ಹಸಿ ಕಸ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ವಿಂಗಡಿಸಿ ನೀಡಬೇಕೆಂದು ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಅವರು ಜನರಲ್ಲಿ ಮನವಿ ಮಾಡಿದರು.

ಪಟ್ಟಣವನ್ನು ಸ್ವಚ್ಛ ಹಾಗೂ ಆರೋಗ್ಯಕರವಾಗಿಡುವ ಉದ್ದೇಶದಿಂದ ಪುರಸಭೆಯ ವತಿಯಿಂದ ಸ್ವಚ್ಛ ಭಾರತ್ ಮಿಷನ್ 2.0 ಯೋಜನೆಯಡಿ ಸ್ವಚ್ಛತಾ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಸ್ವಚ್ಛ ಭಾರತ್ ಮಿಷನ್ 2.0 ಯೋಜನೆಯಡಿ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವ ಮತ್ತು ಬಟ್ಟೆ ಚೀಲಗಳ ಬಳಕೆಯನ್ನು ಉತ್ತೇಜಿಸುವ ಕಾರ್ಯಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ. ಪುರಸಭೆಯಿಂದ ಪ್ರತಿದಿನವೂ ಕಸ ಸಂಗ್ರಹಿಸಲು ವಾಹನಗಳು ಮನೆಮನೆಗೆ ಬರುತ್ತಿದ್ದು, ರಸ್ತೆಗಳಲ್ಲಿ ಎಲ್ಲೆಂದರಲ್ಲಿ ಕಸ ಎಸೆಯುವುದನ್ನು ಮೊದಲು ಬಿಡಬೇಕು ಎಂದು ಮನವಿ ಮಾಡಿದರು.

ಮೂಡಿಗೆರೆ ರಸ್ತೆಯಂತಹ ಕೆಲವು ಪ್ರದೇಶಗಳಲ್ಲಿ ಕಸದ ರಾಶಿಗಳು ಕಾಣಿಸುತ್ತಿರುವುದು ಆತಂಕಕಾರಿ ವಿಷಯವಾಗಿದೆ. ವಿಶೇಷವಾಗಿ ಅಂಗಡಿ ಮುಂಗಟ್ಟುಗಳವರು ಪ್ಲಾಸ್ಟಿಕ್ ಬಳಕೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ, ಬಟ್ಟೆ ಚೀಲಗಳ ಬಳಕೆಗೆ ಪ್ರಾಮುಖ್ಯತೆ ನೀಡಬೇಕು ಎಂದು ಅವರು ತಿಳಿಸಿದರು. ನಗರವನ್ನು ಸ್ವಚ್ಛ, ಸುಂದರ ಹಾಗೂ ಆರೋಗ್ಯಕರವಾಗಿಡಲು ಪುರಸಭೆ ಮಾತ್ರವಲ್ಲದೆ ಎಲ್ಲಾ ನಾಗರಿಕರೂ ಸಹಕರಿಸಬೇಕು. ಇದಲ್ಲದೆ ಸಾರ್ವಜನಿಕರಲ್ಲಿ ಶೌಚಾಲಯಗಳ ಬಳಕೆಯ ಕುರಿತು ಸಹ ಜಾಗೃತಿ ಮೂಡಿಸುವ ಕೆಲಸ ನಡೆಯುತ್ತಿದೆ. ಅದರಂತೆ ಮೂಡಿಗೆರೆ



ರಸ್ತೆ ಹರ್ಡಿಕರ್ ವೃತ್ತ, ಕೆಂಪೇಗೌಡ ಸರ್ಕಲ್ ಹಾಗೂ ಶ್ರೀ ಚನ್ನಕೇಶವ ದೇವಸ್ಥಾನ ಮುಂಭಾಗದಲ್ಲಿ ಸಾರ್ವಜನಿಕರಿಗೆ ಇದರ ಬಗ್ಗೆ ಜಾಗೃತಿ ಹಾಗೂ ಅರಿವು ಮೂಡಿಸಲಾಗುತ್ತದೆ ಎಂದು ತಿಳಿಸಿದರು.

ಪುರಸಭೆ ಮುಖ್ಯಾಧಿಕಾರಿ ಬಸವರಾಜ್ ಟಾಕಪ್ಪ ಶಿಗ್ಗಾವಿ ಮಾತನಾಡಿ, ಸ್ವಚ್ಛ ಭಾರತ್ ಮಿಷನ್ 2.0 ಯೋಜನೆಯಡಿ ಸ್ವಚ್ಛತಾ ಚಟುವಟಿಕೆಗಳ ಭಾಗವಾಗಿ ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮವನ್ನು ಬೇಲೂರು ಪಟ್ಟಣದ ಶಾಲಾ ವಿದ್ಯಾರ್ಥಿಗಳ ಸಹಭಾಗಿತ್ವದಲ್ಲಿ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮಗಳ ಉದ್ದೇಶ ಮತ್ತು ಸಂದೇಶವು ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯಬೇಕು ಮತ್ತು ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಹಸಿ ಕಸ ಮತ್ತು ಒಣ ಕಸವನ್ನು ಬೇರ್ಪಡಿಸಿ ನೀಡುವ ಪದ್ಧತಿ ಸಾರ್ವಜನಿಕರಲ್ಲಿ ಸಂಪೂರ್ಣವಾಗಿ ರೂಢಿಯಾಗುವವರೆಗೆ ಸ್ವಚ್ಛತಾ ಕಾರ್ಯಗಳು ಪರಿಣಾಮಕಾರಿಯಾಗುವುದಿಲ್ಲ ಎಂದು ಹೇಳಿದರು.

ಸಾರ್ವಜನಿಕರು ದಿನನಿತ್ಯದ ಕೆಲಸಗಳ ಜೊತೆಗೆ ಪರಿಸರ ಸಂರಕ್ಷಣೆಯ ಜವಾಬ್ದಾರಿಯನ್ನೂ ಹೊತ್ತುಕೊಳ್ಳಬೇಕು. ಮನೆಗಳಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯ ವಸ್ತುಗಳನ್ನು ಹಸಿ ಕಸ ಮತ್ತು ಒಣ ಕಸವಾಗಿ ವಿಂಗಡಿಸಿ ನೀಡುವುದರಿಂದ ಪುರಸಭೆಗೆ ಕಸ ನಿರ್ವಹಣೆ ಸುಲಭವಾಗುವುದರ ಜೊತೆಗೆ ಸಾರ್ವಜನಿಕರಿಗೂ ಸಹ ಆರೋಗ್ಯಕರ ವಾತಾವರಣ ನಿರ್ಮಾಣವಾಗುತ್ತದೆ.

ಪುರಸಭೆ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗು ಪುರಸಭೆ ಅಧಿಕಾರಿಗಳು ಸಿಬ್ಬಂದಿಗಳ ಜೊತೆಗೂಡಿ ಸಾರ್ವಜನಿಕರಿಗೆ ಕಸ ವಿಂಗಡಣೆ, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವುದು ಮತ್ತು ಸ್ವಚ್ಛತೆಯ ಮಹತ್ವದ ಕುರಿತು ಅರಿವು ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಆರೋಗ್ಯಾಧಿಕಾರಿ ಲೋಹಿತ್, ವೈಡಿಡಿ ಕಾಲೇಜಿನ ಉಪನ್ಯಾಸಕರಾದ ಬಾಬು ಪ್ರಸಾದ್, ವೀರಭದ್ರಪ್ಪ, ಸುಂಮತ್‌ಕುಮಾರ್, ಇನ್ನಿತರರು ಹಾಜರಿದ್ದರು.

---

ಕರ್ನಾಟಕ ಸರ್ಕಾರ

**ಜಿಲ್ಲಾ ನಗರಾಭಿವೃದ್ಧಿಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ.**

ದೂ.ಸಂಖ್ಯೆ:08172-234839 E-mail: pdhassandudc@gmail.com

ನಂ:ಮುನಿಸಿ(1)/ಸಿಬ್ಬಂದಿ/ಸಿ.ಆರ್/228/2025-26 ದಿನಾಂಕ:28-02-2026

**: ಅಧಿಸೂಚನೆ :**

ಹಾಸನ ಜಿಲ್ಲೆಯ ಅರಸೀಕೆರೆ ನಗರಸಭೆಯಲ್ಲಿ ಖಾಲಿಯಿರುವ ಪೌರ ಕಾರ್ಮಿಕರ ಹುದ್ದೆಯನ್ನು ನೇರ ಪಾವತಿಯಡಿಯಲ್ಲಿ ಭರ್ತಿ ಮಾಡಲು ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:513641/ಡಿಎಂಎ/ ಇ.ಎಸ್.ಟಿ.2/ ಓ.ಟಿ.ಹೆಚ್/ 8/ 2021 ದಿನಾಂಕ18-11-2025ರ ಪ್ರಕಾರ ಅರ್ಹ ಅಭ್ಯರ್ಥಿಗಳಿಂದ ನಿಗಧಿತ ನಮೂನೆಯಲ್ಲಿ ಅರ್ಜಿ ಅಹ್ವಾನಿಸಲಾಗಿದೆ. ಅರ್ಜಿ ನಮೂನೆಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಚೇರಿ, ಹಾಸನ ಹಾಗೂ ನಗರಸಬೆ, ಅರಸೀಕೆರೆ ಈ ಕಚೇರಿಗಳಲ್ಲಿ ನೇರವಾಗಿ ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿಯನ್ನು ಪೌರಾಯುಕ್ತರು, ನಗರಸಭೆ, ಅರಸೀಕೆರೆ / ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿಕೋಶ, ಜಿಲ್ಲಾಧಿಕಾರಿಗಳ ಕಚೇರಿ, ಹಾಸನ ಇಲ್ಲಿಗೆ ದಿನಾಂಕ 23-03-2026ರ ಸಂಜೆ: 5-00 ಗಂಟೆಯೊಳಗೆ ನಿಗಧಿತ ಅರ್ಜಿ ನಮೂನೆಯಲ್ಲಿ ಧೃಢೀಕೃತ ಅವಶ್ಯ ದಾಖಲಾತಿಗಳೊಂದಿಗೆ ಸಲ್ಲಿಸಬಹುದಾಗಿದೆ. ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಖಾಲಿ ಇರುವ ಹುದ್ದೆಗಳ ಹಾಗೂ ವಿದ್ಯಾರ್ಹತೆಯ ವಿವರ ಕ್ರ.ಸಂ.1.ಸಂಸ್ಥೆಯ ಹೆಸರು ನಗರಸಭೆ, ಅರಸೀಕೆರೆ ಹುದ್ದೆಯ ಹೆಸರು ಪೌರ ಕಾರ್ಮಿಕ ಒಟ್ಟು ಹುದ್ದೆ ಗಳು 49 ವಿದ್ಯಾರ್ಹತೆ ಕನ್ನಡ ಮಾತನಾಡಲು ಗೊತ್ತಿರಬೇಕು ವಯೋಮಿತಿ ಕನಿಷ್ಟ-18ವರ್ಷ, ಗರಿಷ್ಠ- 50 ವರ್ಷ : ಷರತ್ತುಗಳು : 1)ಹಾಸನ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ, ಗುತ್ತಿಗೆ, ದಿನಗೂಲಿ, ಆಧಾರದ ಮೇಲೆ ಕನಿಷ್ಠ ಒಂದು ವರ್ಷ, ಪೌರ ಕಾರ್ಮಿಕ, ಲೋಡರ್ಸ್, ಯುಜಿಡಿ ಹೆಲ್ಪರ್ಸ್, ಕ್ಲೀನರ್ಸ್, ಹಾಗೂ ಹೆಲ್ಪರ್ಸ್,ಗಳಾಗಿ ಕಾರ್ಯನಿರ್ವಹಿಸುತ್ತಿರುವ/ ಕಾರ್ಯನಿರ್ವಹಿಸಿದ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆ ನೀಡುವುದು. (ಕಾರ್ಯ ನಿರ್ವಹಿಸಿದ ಅವಧಿಗೆ ಇ.ಎಸ್.ಐ/ ಪಿ.ಎಫ್ ವೇತನ ಪಾವತಿಸಿರುವ ಬ್ಯಾಂಕ್ ಪಾಸ್ ಬುಕ್ ಅಥವಾ ಹಾಜರಾತಿ ದಾಖಲೆಗಳನ್ನು ಸಲ್ಲಿಸುವುದು ) 2)ಹಾಸನ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ, ಗುತ್ತಿಗೆ, ದಿನಗೂಲಿ, ಗುತ್ತಿಗೆ ಆಧಾರದ ಮೇಲೆ ಪೌರ ಕಾರ್ಮಿರಾಗಿ ಕಾರ್ಯನಿರ್ವಹಿಸುವಾಗ ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಅಥವಾ ಇತರೆ ಕಾರಣಗಳಿಂದ ಮರಣ ಹೊಂದಿದ ಪೌರ ಕಾರ್ಮಿಕರ ಕುಟುಂಬದ ಒಬ್ಬ ಸದಸ್ಯರನ್ನು ನೇರ ಪಾವತಿಯಡಿ ನೇಮಕ ಮಾಡಿಕೊಳ್ಳಲು ಪರಿಗಣಿಸಲಾಗುವುದು. 3)ಹಾಸನ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕನಿಷ್ಠ ಒಂದು ವರ್ಷ ಲೋಡರ್ಸ್ / ಯು.ಜಿ.ಡಿ ಹೆಲ್ಪರ್ಸ್, ಕ್ಲೀನರ್ಸ್, ಹೆಲ್ಪರ್ಸ್ ಮತ್ತು ತ್ಯಾಜ್ಯ ಸಂಸ್ಕರಣಾ ಘಟಕ, ಸಾರ್ವಜನಿಕ ಶೌಚಾಲಯ, ಶೂನ್ಯ ತ್ಯಾಜ್ಯ ನಿರ್ವಹಣೆ ಘಟಕದಲ್ಲಿ ಕಾರ್ಯ ನಿರ್ವಹಿಸಿ ಅನುಭವವುಳ್ಳ ಸ್ಥಳೀಯ ಸ್ವಚ್ಛತಾ ಕೆಲಸಗಾರರನ್ನು ಪರಿಗಣಿಸ ಲಾಗುವುದು. (ಕಾರ್ಯ ನಿರ್ವಹಿಸಿದ ಅವಧಿಗೆ ಇ.ಎಸ್.ಐ. /ಪಿ.ಎಫ್/ ವೇತನ ಪಾವತಿಸಿರುವ ಬ್ಯಾಂಕ್ ಪಾಸ್ ಬುಕ್ ಅಥವಾ ಹಾಜರಾತಿ ದಾಖಲೆಗಳನ್ನು ಸಲ್ಲಿಸುವುದು.) 4)ಮ್ಯಾನ್ಯುಯಲ್ ಸ್ಕಾವೆಂಜರ್ ಅಧಿನಿಯಮದಡಿ ಗುರುತಿಸಲ್ಪಟ್ಟ ಸಂತ್ರಸ್ಥರುಗಳಿಗೆ ಅಥವಾ ಅವರ ಕುಟುಂಬದ ಸದಸ್ಯರಿಗೆ (ಗಂಡ, ಹೆಂಡತಿ, ಮಗ/ ಮಗಳು) ಒಟ್ಟು ಖಾಲಿ ಇರುವ ಹುದ್ದೆಗಳ ಪೈಕಿ, ಶೇ.10 ರಷ್ಟು ಹುದ್ದೆಗಳನ್ನು ಮೀಸಲಿಡುವುದು. ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದೆ ಇದ್ದಲ್ಲಿ ಸದರಿ ಹುದ್ದೆಗಳನ್ನು ಇತರೆ ವರ್ಗಗಳಿಂದ ಭರ್ತಿ ಮಾಡಲು ಕ್ರಮವಹಿಸಲಾಗುವುದು. 5)ಮೇಲ್ಕಾಣಿಸಿದ ಕ್ರಮ ಸಂಖ್ಯೆ;1 ರಿಂದ 4 ರಲ್ಲಿ ತಿಳಿಸಿರುವ ವರ್ಗದವರಿಗೆ ಆದ್ಯತೆ ನೀಡಿದ ನಂತರ ಬಾಕಿ ಉಳಿಯುವ ಖಾಲಿ ಹುದ್ದೆಗಳನ್ನು ಇತರೆ ವರ್ಗಗಳಿಂದ ಭರ್ತಿ ಮಾಡಲಾಗುವುದು. 6)ನೇರ ಪಾವತಿಯಡಿ ನೇಮಕಾತಿ ಮಾಡಿಕೊಳ್ಳುವ ಪದ್ದತಿ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳು ಮೀಸಲಾತಿ) ಅಧಿನಿಯಮದಲ್ಲಿ ಉಲ್ಲೇಖಿಸಿರುವುದಿಲ್ಲ. ಆದಕಾರಣ ನೇರ ಪಾವತಿಯಡಿ ನೇಮಕಾತಿ ಪ್ರಕ್ರಿಯೆಯು ಸದರಿ ಅಧಿನಿಯಮಕ್ಕೆ ಒಳಪಟ್ಟಿರುವುದಿಲ್ಲ ಮತ್ತು ಮೀಸಲಾತಿ ಅನ್ವಯಿಸುವುದಿಲ್ಲ. (ಸಮಾಜ ಕಲ್ಯಾಣ ಇಲಾಖೆಯವರು ನೀಡಿರುವ ಅಭಿಪ್ರಾಯ ಅನುಸರಿಸಿ) 7)ಕ್ರ.ಸಂ. 01 ರಿಂದ 04 ರಲ್ಲಿ ತಿಳಿಸಿರುವಂತಹ ಅಭ್ಯರ್ಥಿಗಳು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದ ಧೃಢೀಕರಣ ಪಡೆದು ಸಲ್ಲಿಸುವುದು. 8)ಅನ್ವಯಿಸುವ ಕಾರ್ಮಿಕ ಇಲಾಖೆಯ ಕನಿಷ್ಟ ಮಾಹೆಯಾನ ವೇತನ ಮತ್ತು ಅನ್ವಯಿಸುವ ಇ.ಪಿ.ಎಫ್, ಮತ್ತು ಇ.ಎಸ್.ಐ ಗಳನ್ನು ಪಾವತಿಸಲಾಗುವುದು. ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು : 1)ಜನನ ಪ್ರಮಾಣ ಪತ್ರ / ಶಾಲಾ ವರ್ಗಾವಣೆ ಪ್ರಮಾಣ ಪತ್ರ 2)ಇ.ಎಸ್. ಐ. / ಪಿ.ಎಫ್. ಪಾವತಿಸಿರುವ ಬಗ್ಗೆ ಧೃಢೀಕೃತ ಧೃಢೀಕರಣ ಪತ್ರ 3)ಅನುಭವ ಪ್ರಮಾಣ ಪತ್ರ 4)ಜಾತಿ ಧೃಢೀಕರಣ ಪತ್ರ 5)ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರ ಪಾವತಿ/ ಹೊರಗುತ್ತಿಗೆ/ ಗುತ್ತಿಗೆ / ದಿನಗೂಲಿ ಆಧಾರದಡಿ ನೇಮಕಗೊಂಡು ಕೋವಿಡ್-19ರಲ್ಲಿ ಸಂತ್ರಸ್ಥರಾಗಿದ್ದರೆ ಧೃಢೀಕರಣ ಪತ್ರ. 6)ಮ್ಯಾನ್ಯುಯಲ್ ಸ್ಕಾವೆಂಜಿಂಗ್ ಅಧಿನಿಯಮದಡಿ ಗುರುತಿಸಲ್ಪಟ್ಟ ಸಂತ್ರಸ್ಥರಾಗಿದ್ದರೆ ಧೃಢೀಕೃತ ಧೃಢೀಕರಣ ಪತ್ರ 7)ಆಧಾರ್ ಕಾರ್ಡ್

ಸಹಿ/-ಕೆ.ಎಸ್.ಲತಾಕುಮಾರಿ ಭಾ.ಆ.ಸೇ,
ಜಿಲ್ಲಾಧಿಕಾರಿ, ಹಾಸನ ಜಿಲ್ಲೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/1139/ಕೆಎಸ್‌ಎಂಸಿಎ/2025-26

# ಮಕ್ಕಳಿಗೆ ಜಾಲತಾಣ ಬಳಕೆ ನಿಷೇಧ



• ಪ್ರಜೋದಯ ವರದಿ

**ಬೆಂಗಳೂರು:** ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಮಕ್ಕಳ ಕಾಳಜಿಗೆ ಆದ್ಯತೆ ನೀಡಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು, 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲ ತಾಣ ಬಳಕೆಯನ್ನು ನಿಷೇಧಿಸುವ ಘೋಷಣೆ ಮಾಡಿದ್ದಾರೆ.

ಹೆಚ್ಚುತ್ತಿರುವ ಮೊಬೈಲ್ ಬಳಕೆಯಿಂದ ಮಕ್ಕಳ ಮೇಲೆ ಬೀರುತ್ತಿರುವ ಅಡ್ಡ ಪರಿಣಾಮಗಳನ್ನು ತಡೆಗಟ್ಟುವ ಉದ್ದೇಶದಿಂದ ಮಕ್ಕಳಿಗೆ ಸಾಮಾಜಿಕ ಜಾಲಣತಾಣದ ಬಳಕೆಯನ್ನು ನಿಷೇಧಿಸಲಾಗಿದೆಂದು ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣ ಬಳಕೆ ಮಕ್ಕಳ ಮೇಲೆ ಗಂಭೀರ ಪರಿಣಾಮ ಬೀರುತ್ತಿದ್ದು, ಅದರಿಂದ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೂ ಅಡ್ಡಿಯಾಗಿದ್ದು, ಮಕ್ಕಳಿಗೆ ಶಾಲೆಯಲ್ಲಿ ಆನ್‌ಲೈನ್ ಕ್ಲಾಸ್‌ಗಳಲ್ಲೂ ಮೊಬೈಲ್ ಕೊಡಿಸಿದರೆ ಅದನ್ನು ಸೋಷಿಯಲ್ ಮೀಡಿಯಾಗೆ ಬಳಕೆ ಮಾಡು ತ್ತಿದ್ದು, ಸೋಷಿಯಲ್ ಮಿಡಿಯಾಗೆ ತಮ್ಮದೇ ಲಾಗ್‌ಇನ್ ಮಾಡಿಕೊಳ್ಳುತ್ತಿದ್ದರು. ಆದರೆ ಇದೀಗ ಮಕ್ಕಳು ಸಾಮಾಜಿಕ ಜಾಲತಾಣದಲ್ಲಿ ಲಾಗ್‌ಇನ್ ಮಾಡುವುದಕ್ಕೂ ಮುನ್ನ ವಯಸ್ಸಿನ ದೃಢೀಕರಣ ಮಾಡುವುದನ್ನು ಕಡ್ಡಾಯ ಮಾಡಲಾಗಿದೆ.

ಆನ್‌ಲೈನ್ ಗೇಮ್‌ಗಳು ಮತ್ತು ರೀಲ್ಸ್‌ಗಳು ಕಿರು ವಿಡಿಯೋಗಳ ಗೀಳಿನಿಂದ ಮಕ್ಕಳು ಓದಿನಲ್ಲಿ ಹಿಂದುಳಿಯುತ್ತಿದ್ದು, ಅದನ್ನು ತಪ್ಪಿಸಿ ಮಕ್ಕಳು ಓದಿನತ್ತಾ ಹೆಚ್ಚಿನ ಚಿತ್ತ ಹರಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಸಾಮಾಜಿಕ ಜಾಲತಾಣ ಬಳಕೆಯನ್ನು ಮಕ್ಕಳಿಗೆ ನಿಷೇಧಿಸುವ ತೀರ್ಮಾನವನ್ನು ಕೈಗೊಂಡಿದೆ.

16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣವನ್ನು ನಿಷೇಧಿಸುವ ರಾಜ್ಯ ಸರ್ಕಾರದ ತೀರ್ಮಾನಕ್ಕೆ ಪೋಷಕರಿಂದಲೂ ವ್ಯಾಪಕ ಬೆಂಬಲ ವ್ಯಕ್ತವಾಗಿದ್ದು, ಶಿಕ್ಷಣ ತಜ್ಞರು, ಮನೋ ವೈದ್ಯರು ಸಹ ಸರ್ಕಾರದ ಈ ತೀರ್ಮಾನವನ್ನು ಶ್ಲಾಘಿಸಿದ್ದು, ಇದು ಮಕ್ಕಳ ಸೃಜನಶೀಲತೆ ಹೆಚ್ಚಿಸಲು ಸಹಕಾರಿಯಾಗಲಿದೆ ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ.

ರಾಜ್ಯದಲ್ಲಿ 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲಣವನ್ನು ನಿಷೇಧಿಸಬೇಕು ಎಂಬ ಕೂಗು ವ್ಯಾಪಕವಾಗಿತ್ತು. ಬಜೆಟ್ ಮುನ್ನವೆ ರಾಜ್ಯ ಸರ್ಕಾರದ ಮಟ್ಟದಲ್ಲಿ ಮಕ್ಕಳಿಗೆ ಸಾಮಾಜಿಕ ಜಾಲತಾಣವನ್ನು ನಿಷೇಧಿಸಬೇಕೆಂಬ ಚರ್ಚೆಗಳು ನಡೆದಿದ್ದವು. ವಿದ್ಯಾರ್ಥಿಗಳ ಆರೋಗ್ಯ, ಭವಿಷ್ಯ ಮತ್ತು ವ್ಯಕ್ತಿತ್ವ ರೂಪಿಸುವ ಸ್ಥಳವಾಗಿರುವ ಶಾಲಾ- ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಮಾದಕ ವಸ್ತುಗಳ ಬಳಕೆಯನ್ನು ತಡೆಯಲು ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ಜಾಗೃತಿ ಕಾರ್ಯಕ್ರಮ, ಕಠಿಣ ನಿಯಮ ಹಾಗೂ ಸಹಾಯ ಕೇಂದ್ರಗಳ ಮೂಲಕ ಮಾದಕ ವಸ್ತುಗಳ ಮೇಲೆ ಕಟ್ಟುನಿಟ್ಟಿನ ನಿರ್ಬಂಧ ಹೇರಲಾಗುವುದೆಂದು ಬಜೆಟ್‌ನಲ್ಲಿ ತಿಳಿಸಿದ್ದಾರೆ.

# ಖಾಲಿ ಚೊಂಬು ಹಿಡಿದು ಬಿಜೆಪಿ ಪ್ರತಿಭಟನೆ




• ಪ್ರಜೋದಯ ವರದಿ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ 2026-27ನೇ ಸಾಲಿನ ಬಜೆಟ್ ಮಂಡಿಸಿದರು. ಆದರೆ, ಪ್ರತಿಪಕ್ಷ ಬಿಜೆಪಿ ಬಜೆಟ್ ವಿರೋಧಿಸಿ, ಖಾಲಿ ಚೊಂಬು ಹಿಡಿದು ಪ್ರತಿಭಟನೆ ನಡೆಸಿದೆ.

ರಾಜ್ಯದ ಜನತೆಗೆ ಖಾಲಿ ಚೊಂಬು ಕೊಟ್ಟ ಕಾಂಗ್ರೆಸ್ ಸರ್ಕಾರ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸೇರಿ ಹಲವು ನಾಯಕರು ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ರಾಜ್ಯದ ಜನತೆಯನ್ನು ಸಾಲದ ಸುಳಿಯಲ್ಲಿ ಸಿಲುಕಿ ಸುವಂತಹ ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಶಾಸಕರು ವಿಧಾನಸೌಧದ ಮುಂಭಾಗದಲ್ಲಿ ಖಾಲಿ ಚೊಂಬು ಪ್ರದರ್ಶಿಸುವ ಮೂಲಕ ಅಸಮಾಧಾನ ವ್ಯಕ್ತಪಡಿಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಆರ್.ಅಶೋಕ್ ಅವರು, ರಾಜ್ಯದ ಕಾಂಗ್ರೆಸ್ ಸರ್ಕಾರ ಸಾಲ ಪಡೆದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದೆ. ಸಾಲ ಮಾಡಿ ತುಪ್ಪ ತಿನ್ನುತ್ತಿದೆ. ಈ ಬಜೆಟ್ ನೀರಸವಾಗಿದೆ. ಅದರಲ್ಲಿ ಯಾವುದೇ ಹೊಸ ಯೋಜನೆಗಳಿಲ್ಲ. ಹೊಸ ಯೋಜನೆ ಎಂದರೆ ಹೆಚ್ಚು ಹೆಚ್ಚು ಸಾಲ ಪಡೆಯುವುದು ಮಾತ್ರ. ಕಳೆದ ಮೂರು ವರ್ಷಗಳಲ್ಲಿ, ರಾಜ್ಯ ಸರ್ಕಾರವು 4.39 ಲಕ್ಷ ಕೋಟಿ ರೂ. ಸಾಲ ಮಾಡಿದೆ ಎಂದು ಆರೋಪಿಸಿದರು.

ನೀರಾವರಿ ಕ್ಷೇತ್ರಕ್ಕೆ ಯಾವುದೇ ಕೊಡುಗೆ ನೀಡಿಲ್ಲ. ಕೃಷ್ಣೆಗೆ ಪ್ರತಿ ವರ್ಷ 10,000 ಕೋಟಿ ರೂ. ನೀಡುತ್ತೇನೆಂದು ಹೇಳಿ ಕೇವಲ ಕಣ್ಣೀರು ನೀಡಿದ್ದಾರೆ. ಎಲ್ಲಾ ನೀರಾವರಿ ಯೋಜನೆಗಳು ಸೇರಿ 8,045 ಕೋಟಿ ರೂ. ಕೊಟ್ಟಿದ್ದಾರೆ. ಬೆಂಗಳೂರು ಕಸ ನಿರ್ವಹಣೆ, ರಸ್ತೆ ಗುಂಡಿ ಬಗ್ಗೆ ಚಕಾರ ಎತ್ತಿಲ್ಲ. ಗೋವಿಂದ ರಾವ್ ವರದಿಯಂತೆ ಉತ್ತರ ಕರ್ನಾಟಕಕ್ಕೆ 43,000 ಕೋಟಿ ರೂ. ನೀಡಿಲ್ಲ. ಪ್ರತಿ ವರ್ಷ 15,000 ಕೋಟಿ ರೂ. ಕೊಡಬೇಕಿತ್ತು. ಈ ಬಗ್ಗೆ ನಾನು ಕೂಡ ಪತ್ರ ಬರೆದಿದ್ದೆ. ಆ ವರದಿಯ ಬಗ್ಗೆ ಎಲ್ಲೂ ಉಲ್ಲೇಖ ಮಾಡದೇ ಉತ್ತರ ಕರ್ನಾಟಕವನ್ನು ಕಡೆಗಣಿಸಿದ್ದಾರೆಂದು ತಿಳಿಸಿದರು.

ಮಂಗಳೂರು, ಉಡುಪಿ, ಉತ್ತರ ಕನ್ನಡ ಮೊದಲಾದ ಭಾಗಗಳಿಗೆ ಏನೂ ನೀಡಿಲ್ಲ. ಕರಾವಳಿಗೆ ಒಣಗಿದ ಮೀನು ಕೂಡ ನೀಡಿಲ್ಲ. ಇಲ್ಲಿಗೆ ಸಂಪೂರ್ಣ ಚೊಂಬು ನೀಡಿದ್ದಾರೆ. ಅತಿ ಹೆಚ್ಚು ತೆರಿಗೆ ನೀಡುವ ಕರಾವಳಿಗೆ ಇದು ಕರಾಳ ದಿನವಾಗಿದೆ. ದ್ವೇಷ ಭಾಷಣ ಕಾನೂನಿನಡಿ ಜೈಲಿಗೆ ಹಾಕುತ್ತೇನೆ ಎಂದು ಹೆದರಿಸಿದ್ದಾರೆ. ಎಸ್‌ಸಿಎಸ್‌ಪಿ, ಟಿಎಸ್‌ಪಿ ಹಣ ದುರುಪಯೋಗ ಮಾಡುವುದಿಲ್ಲ ಎಂದು ಎಲ್ಲೂ ಹೇಳಿಲ್ಲ. ಈ ಮೂಲಕ ಪರಿಶಿಷ್ಟರ ಹಣವನ್ನು ಮತ್ತೆ ಲೂಟಿ ಮಾಡಿದ್ದಾರೆ. ಈ ಹಿಂದೆ ನೋಂದಣಿಗೆ ಬಡವರಿಗೆ ಶೇ.5 ರಷ್ಟು ರಿಯಾಯಿತಿ ನೀಡಲಾಗು ತ್ತಿತ್ತು. ಈಗ ಅದು ಕೂಡ ಇಲ್ಲ ಎಂದರು.

ಪ್ರತಿಪಕ್ಷ ಉಪನಾಯಕ ಅರವಿಂದ್ ಬೆಲ್ಲದ್, ವಿಧಾನ ಪರಿಷತ್ ಮುಖ್ಯ ಸಚೇತಕ ಎನ್.ರವಿಕುಮಾರ್, ಶಾಸಕರು ಉಪಸ್ಥಿತರಿದ್ದರು.

# ರಾಷ್ಟ್ರೀಯ ಹೆದ್ದಾರಿಯಲ್ಲಿ ಸುರಕ್ಷತೆ ಕೊರತೆ: ಪ್ರತಿಭಟನೆ ಎಚ್ಚರಿಕೆ

• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಜೆ.ಪಿ.ನಗರದಿಂದ ಅಂಬೇಡ್ಕರ್ ವೃತ್ತದ ವರೆಗಿನ (ರಾಷ್ಟ್ರೀಯ ಹೆದ್ದಾರಿ) ರಸ್ತೆಯಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದ ಹಿನ್ನಲೆಯಲ್ಲಿ ನಿತ್ಯ ಅಪಘಾತ ಸಂಭವಿಸುತ್ತಿದ್ದು, ಸರ್ಕಾರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಪ್ರತಿಭಟನೆ ನಡೆಸಲಾಗುವುದೆಂದು ಕರ್ನಾಟಕ ರಕ್ಷಣಾ ವೇದಿಕೆ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಖಾದರ್ ಅವರು ಎಚ್ಚರಿಕೆ ನೀಡಿದರು.

ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದ ಅವರು, ನಿತ್ಯ ಅಪಘಾತಗಳು ಸಂಭವಿಸುತ್ತಿದ್ದು ಅದಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ನಿರ್ಲಕ್ಷ್ಯವೇ ಕಾರಣ. ಜೆ.ಪಿ.ನಗರ ದಿಂದ ಅಂಬೇಡ್ಕರ್ ವೃತ್ತದವರೆಗೆ ನಗರ ಪ್ರದೇಶದೊಳಗೆ ಸಾಗುವ ಹೆದ್ದಾರಿ ಯಲ್ಲಿ ವಿದ್ಯಾರ್ಥಿಗಳು ಹಾಗು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಓಡಾಡುತ್ತಾರೆ. ಬೆಳಿಗ್ಗೆ 8.30 ರಿಂದ 9.30ರವರೆಗೆ ಜನರ ಸಂಚಾರ ಹೆಚ್ಚಿರುತ್ತದೆ. ಈ ಅವಧಿಯಲ್ಲೇ ಟಿಪ್ಪರ್, ಲಾರಿ, ಬಸ್ ಸೇರಿ ಭಾರೀ ಗಾತ್ರದ ವಾಹನಗಳು ಓಡಾಡುವುದರಿಂದ ಸಮಸ್ಯೆಯಾಗುತ್ತಿದೆ ಎಂದರು.

ಸಮರ್ಪಕ ಬೆಳಕಿನ ವ್ಯವಸ್ಥೆ, ಎಚ್ಚರಿಕೆ ಫಲಕ, ರಿಫ್ಲೆಕ್ಟರ್, ವೇಗ ನಿಯಂತ್ರಣ ವ್ಯವಸ್ಥೆ ಸೇರಿ ಅಗತ್ಯ ಸುರಕ್ಷತಾ ಕ್ರಮಗಳನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೈಗೊಳ್ಳಬೇಕು. ಸಮಸ್ಯೆ ಇಷ್ಟೆಲ್ಲಾ ಬಿಗಡಾಯಿಸಿದರೂ ಅಧಿಕಾರಿಗಳು ಗಮನ ಹರಿಸುತ್ತಿಲ್ಲವೆಂದು ಆಕ್ರೋಶ ವ್ಯಕ್ತ ಪಡಿಸಿದರು.

ರಸ್ತೆಯಲ್ಲಿ ಹಾಕಿರುವ ಸೂಚನಾ ಫಲಕಗಳು ಸಣ್ಣದಾಗಿದ್ದು, ಶಾಲಾ ವಲಯ ಎಂದು ಸೂಚಿಸುವ ಯಾವುದೇ ಫಲಕಗಳಿಲ್ಲ. ರಾತ್ರಿ ವೇಳೆ ಸಮರ್ಪಕ ಬೆಳಕು ಇಲ್ಲದ ಕಾರಣ ಅಪಘಾತ ಸಂಭವ ಹೆಚ್ಚಾಗಿದೆ. ಈ ಬಗ್ಗೆ ಈಗಾಗಲೇ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲವೆಂದರು.

ಸ್ಥಳೀಯ ಆಡಳಿತ ಹಾಗು ಶಾಸಕರು ಪರಿಹಾರ ಕ್ರಮ ಕೈಗೊಳ್ಳಬೇಕು. 15 ದಿನಗಳೊಳಗೆ ಕ್ರಮ ಕೈಗೊಳ್ಳದಿದ್ದರೆ ಹೆದ್ದಾರಿಯಲ್ಲೇ ಶಾಮಿಯಾನ ಹಾಕಿ ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದರು.

ವರ್ತಕರ ಸಂಘದ ಅಧ್ಯಕ್ಷ ಗಿರಿಯಪ್ಪ ಶೆಟ್ಟಿ ಅವರು ಮಾತನಾಡಿ, ರಸ್ತೆಯಲ್ಲಿ ಮೂರು ಹಂಪ್ಸ್ ಹಾಕಿದ್ದರೂ ಅನುಕೂಲವಾಗಿಲ್ಲ. ಇನ್ನೂ ಎರಡು ಹಂಪ್ಸ್ ಹಾಕಬೇಕು. ಮರಳು ಹಾಗು ಇತರೆ ಸಾಮಾಗ್ರಿ ಸಾಗಿಸುವ ವಾಹನಗಳು ಹೆಚ್ಚಿನ ವೇಗದಲ್ಲಿ ಸಂಚರಿಸುತ್ತಿದ್ದು, ಪಾದಚಾರಿಗಳು ನಡೆದಾಡುವುದು ಕಷ್ಟವಾಗಿದೆಯೆಂದರು. ಸ್ಥಳೀಯರಾದ ಗಂಗಾಧರ್, ಲೋಕೇಶ್, ಕೌಶಿಕ್ ಮತ್ತಿತರರಿದ್ದರು.



# ಸಂಸದರಿಂದ ಹೆದ್ದಾರಿ ಕಾಮಗಾರಿ ಪರಿಶೀಲನೆ



• ಪ್ರಜೋದಯ ವರದಿ

**ಹಾಸನ:** ಬೆಂಗಳೂರು-ಮಂಗಳೂರು ನಡುವಿನ ಚತುಷ್ಪಥ ರಾಷ್ಟ್ರೀಯ ಹೆದ್ದಾರಿ-75ರ ಕಾಮಗಾರಿಯನ್ನು ಸಂಸದ ಶ್ರೇಯಸ್ ಪಟೇಲ್ ಅವರು ಶುಕ್ರವಾರ ವೀಕ್ಷಣೆ ಮಾಡಿದರು.

ಹಾಸನದ ಬೂವನಹಳ್ಳಿಯಿಂದ ಪ್ರಾರಂಭಿಸಿ, ಸಕಲೇಶಪುರ ತಾಲ್ಲೂಕಿನ ಮಾರನಹಳ್ಳಿ, ದೊಡ್ಡತಪ್ಪಲುವರೆಗೆ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಸಂಚರಿಸಿ ಕಾಮಗಾರಿ ಪ್ರಗತಿಯನ್ನು ಪರಿಶೀಲಿಸಿದರು.

ಸಕಲೇಶಪುರ ಪಟ್ಟಣದ ಬೈಪಾಸ್ ಬಳಿ ನಿರ್ಮಾಣಗೊಳ್ಳುತ್ತಿರುವ ತಡೆಗೋಡೆ, ರಸ್ತೆ ವಿಭಜಕ ಹಾಗು ದೋಣಿಗಲ್ ಬಳಿ ರಸ್ತೆ, ಚರಂಡಿ, ಮಾರನಹಳ್ಳಿ, ದೊಡ್ಡತಪ್ಪಲು ಬಳಿ ನಿರ್ಮಾಣಗೊಂಡಿರುವ ತಡೆ ಗೋಡೆಯನ್ನು ಪರಿಶೀಲಿಸಿದರು. ಮಳೆಗಾಲದ ಸಮಯದಲ್ಲಿ ಭೂಕುಸಿತವಾಗಿದ್ದ ಸ್ಥಳಗಳಿಗೆ ಭೇಟಿ ನೀಡಿ, ನಿರ್ಮಾಣವಾಗಿರುವ ಸುರಕ್ಷತಾ ಕಾಮಗಾರಿ ವೀಕ್ಷಿಸಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಚನೆ ನೀಡಿದರು.

ರಸ್ತೆ ನಿರ್ಮಾಣ ಕಾಮಗಾರಿಗಾಗಿ ಕಡಿದಾಗಿ ಗುಡ್ಡಗಳನ್ನು ಕತ್ತರಿಸಿರುವುದರಿಂದ ಮಳೆಗಾಲದಲ್ಲಿ ಗುಡ್ಡ ಕುಸಿತ ಉಂಟಾಗುತ್ತಿದ್ದರಿಂದ ಹೆಚ್ಚುವರಿ ಅನುದಾನ ಮಂಜೂರು ಮಾಡಿಸಿ, ತಡೆಗೋಡೆ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿತ್ತು. ಈ ರಸ್ತೆಯಲ್ಲಿ ನಾಲ್ಕೈದು ಕಡೆಗಳಲ್ಲಿ ಹೊರತುಪಡಿಸಿ, ಬಹುತೇಕ ಕೆಲಸ ಮುಕ್ತಾಯಗೊಂಡಿರುವುದರಿಂದ ಶ್ರೇಯಸ್ ಪಟೇಲ್ ಅವರು ಪರಿಶೀಲನೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು, ಹಲವು ವರ್ಷಗಳಿಂದ ಕುಂಟುತ್ತಾ ಸಾಗುತ್ತಿದ್ದ ಕಾಮಗಾರಿ ಈಗ ವೇಗ ಪಡೆದಿದೆ. ಸಾರ್ವಜನಿಕರಿಗೆ ಸುಗಮ ಹಾಗು ಸುರಕ್ಷಿತ ಸಂಚಾರಕ್ಕೆ ಅನುಕೂಲವಾಗುವಂತೆ ಉಳಿದಿರುವ ಕೆಲಸಗಳನ್ನು ಶೀಘ್ರ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಈ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಯಿಂದ ಬೆಂಗಳೂರು ಮತ್ತು ಮಂಗಳೂರು ನಡುವಿನ ಸಂಪರ್ಕ ಮತ್ತಷ್ಟು ಸುಧಾರಿಸಿ ಜನರಿಗೆ ಹೆಚ್ಚಿನ ಪ್ರಯೋಜನವಾಗಲಿದೆ ಎಂದು ಹೇಳಿದರು. ಕಾಂಗ್ರೆಸ್ ಮುಖಂಡ ಮುರುಳಿ ಮೋಹನ್, ಎನ್‌ಹೆಚ್‌ಎ ಇಂಜಿನೀಯರ್ ಹಾಜರಿದ್ದರು.



ಹಾಸನ: ಗುತ್ತಿಗೆದಾರರ ಬಾಕಿ ಬಿಲ್ ಪಾವತಿಗೆ ಆಗ್ರಹಿಸಿ ಬೆಂಗಳೂರಿನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಪ್ರತಿಭಟನೆಗೆ ಜಿಲ್ಲಾ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಪ್ರಯಾಣ ಬೆಳೆಸಿದರು. ರಾಜ್ಯ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ಕಾರ್ಲೆ ಇಂದ್ರೇಶ್, ಜಿಲ್ಲಾ ಗುತ್ತಿಗೆ ದಾರರ ಸಂಘದ ಅಧ್ಯಕ್ಷ ಜ್ಞಾನೇಶ್, ಗೋವಿಂದರಾಜು, ಮೊಗಣ್ಣಗೌಡ, ತುಳಸಿರಾಮ್ ಮತ್ತಿತರರಿದ್ದರು.



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು, ನೌಕರರ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಪದಾಧಿಕಾರಿಗಳು ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರಿಗೆ ಮನವಿ ಸಲ್ಲಿಸಿದರು.

## ಜಾಗದ ವಿಚಾರಕ್ಕೆ ವ್ಯಕ್ತಿ ಮೇಲೆ ಹಲ್ಲೆ

• ಪ್ರಜೋದಯ ವರದಿ

**ಅರಸೀಕೆರೆ:** ಮನೆ ಪಕ್ಕದ ಜಾಗದ ವಿಚಾರವಾಗಿ ಐವರು ಒಟ್ಟಾಗಿ ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ನಗರದ ಹಳೆಕಲ್ಲ ನಾಯಕನಹಳ್ಳಿಯಲ್ಲಿ ನಡೆದಿದೆ.

ಗ್ರಾಮದ ಲೋಕೇಶ್ ಎಂಬುವವರ ಮೇಲೆ ಅಣ್ಣಪ್ಪ ನಾಯ್ಕ, ಗಣೇಶ ನಾಯ್ಕ, ಕುಮಾರನಾಯ್ಕ, ಗಂಗೂಬಾಯಿ, ಕಾವ್ಯ ಎಂಬುವವರು ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಲೋಕೇಶ್ ಅವರು ಮನೆ ಪಕ್ಕದಲ್ಲಿ ರಾಸುಗಳನ್ನು ಕಟ್ಟಲು ಶೆಡ್ ನಿರ್ಮಿಸಿಕೊಂಡಿದ್ದಾರೆ. ಆದರೆ ಓಡಾಡಲು ಜಾಗ ಬಿಟ್ಟಿಲ್ಲವೆಂದು ಗಲಾಟೆ ನಡೆಸಿದ್ದಾರೆ. ಗುರುವಾರ ಸ್ಥಳಕ್ಕೆ ಆಗಮಿಸಿದ ಐವರು ಲೋಕೇಶ್ ಜೊತೆಗೆ ಜಗಳ ಮಾಡಿಕೊಂಡು ಕಬ್ಬಿಣದ ರಾಡ್‌ನಿಂದ ತಲೆಗೆ ಹೊಡೆದಿದ್ದಾರೆ. ಕಲ್ಲಿನಿಂದ ತಲೆ ಮತ್ತು ಎದೆಗೆ ಬಲವಾಗಿ ಹೊಡೆದಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಟ್ರ್ಯಾಕ್ಟರ್‌ನಿಂದ ಬಿದ್ದು ವ್ಯಕ್ತಿ ಸಾವು

• ಪ್ರಜೋದಯ ವರದಿ

**ಬೇಲೂರು:** ವೇಗದ ಚಾಲನೆಯಿಂದಾಗಿ ಟ್ರ್ಯಾಕ್ಟರ್‌ನಲ್ಲಿ ಕುಳಿತಿದ್ದ ವ್ಯಕ್ತಿ ಕೆಳಗೆ ಬಿದ್ದು ಮೃತಪಟ್ಟಿರುವ ಘಟನೆ ತಾಲ್ಲೂಕಿನ ನಿಟ್ಟೂರು ಕ್ರಾಸ್ ಸಮೀಪ ನಡೆದಿದೆ.

ಬೀದರ್ ತಾಲ್ಲೂಕು ಬಗ್ದಾಲು ಗ್ರಾಮದ ದಶರಥ (33) ಮೃತರು. ಸೆಂಟ್ರಿಂಗ್ ಕೆಲಸ ಮಾಡಿಕೊಂಡು ಕೋಗಿಲೆ ಮನೆ ಗ್ರಾಮದಲ್ಲಿದ್ದರು. ಗುರುವಾರ ನೀರಿನ ಟ್ಯಾಂಕ್‌ಗೆ ಅಳವಡಿಸಿದ್ದ ಕಬ್ಬಿಣದ ಸೆಂಟ್ರಿಂಗ್ ಪ್ಲೇಟ್‌ಗಳನ್ನು ಬಿಚ್ಚಿ ಟ್ರ್ಯಾಕ್ಟರ್‌ನಲ್ಲಿ ತುಂಬಿಕೊಂಡು ಚನ್ನಾಪುರದ ಕಡೆಗೆ ಹೋಗುತ್ತಿದ್ದಾಗ ಚಾಲಕ ನೆಲ್ಸನ್ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದ ದಶರಥ ರಸ್ತೆ ಮೇಲೆ ಬಿದ್ದಿದ್ದಾರೆ. ತಲೆ ಹಾಗು ಎದೆಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬೇಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಆಟೋ ಡಿಕ್ಕಿ: ವ್ಯಕ್ತಿ ಸಾವು

• ಪ್ರಜೋದಯ ವರದಿ

**ಹಾಸನ:** ಆಟೋ ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಅರೆಕಲ್ ಹೊಸಳ್ಳಿ ಸಮೀಪ ನಡೆದಿದೆ. ಉದ್ದೂರು ಕೊಪ್ಪಲು ಗ್ರಾಮದ ನಾಗರಾಜು (40) ಮೃತರು.

ಮನೆಗೆ ಸಾಮಾಗ್ರಿ ತರಲು ಅಂಗಡಿಗೆ ತೆರಳಿದ್ದ ಅವರು ವಾಪಾಸ್ ಬರುವಾಗ ಹಿಂದಿನಿಂದ ವೇಗವಾಗಿ ಬಂದ ಆಟೋ ಡಿಕ್ಕಿಯಾಗಿದೆ. ಗಂಭೀರ ಪೆಟ್ಟಾಗಿದ್ದ ರಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬಾಕಿ ಬಿಲ್ ಬಿಡುಗಡೆಗೆ ಗುತ್ತಿಗೆದಾರರ ಒತ್ತಾಯ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ರಾಜ್ಯ ಸರ್ಕಾರ ಗುತ್ತಿಗೆದಾರರ ಬಿಲ್ ಹಣವನ್ನು 2 ವರ್ಷದಿಂದ ಬಾಕಿ ಉಳಿಸಿಕೊಂಡಿರುವುದರಿಂದ ಗುತ್ತಿಗೆದಾರರು ಬೀದಿಗೆ ಬರುವಂತ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ನಿರ್ದೇಶಕ ಎಸ್.ಬಿ. ಜಗದೀಶ್ ಅವರು ಅಸಮಾಧಾನ ಹೊರ ಹಾಕಿದರು.

ಪಟ್ಟಣದಿಂದ ಬೆಂಗಳೂರಿಗೆ ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ನೂರಾರು ಮಂದಿ ಗುತ್ತಿಗೆದಾರರು ತೆರಳುವಾಗ ಗುತ್ತಿಗೆದಾರರು ಹಾಗೂ ಮಾಧ್ಯಮದವರನ್ನು ಉದ್ದೇಶಿಸಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕವೂ ಹಿಂದಿನ ಅವಧಿಯ ಬಾಕಿ ಬಿಲ್‌ಗಳನ್ನು ಬಿಡುಗಡೆ ಮಾಡಿಲ್ಲ. ರಾಜ್ಯದಾದ್ಯಂತ ಗುತ್ತಿಗೆದಾರರಿಗೆ 37 ಸಾವಿರ ಕೋಟಿ ರೂ. ಬಿಲ್ ಬಾಕಿ ಇದೆ ಎಂದರು.

ಹಾಸನ ಜಿಲ್ಲೆಯಲ್ಲಿಯೂ ಬಾಕಿ ಮೊತ್ತ ಮಹತ್ತರವಾಗಿದ್ದು, ಲೋಕೋಪಯೋಗಿ ಇಲಾಖೆ ಯಿಂದ 293 ಕೋಟಿ ಹಣ, ಕಾವೇರಿ ನೀರಾವರಿ ನಿಗಮದಿಂದ 400 ಕೋಟಿ ರೂ., ಸಣ್ಣ ನೀರಾವರಿ ಇಲಾಖೆಯಿಂದ 131 ಕೋಟಿ ರೂ. ಹಾಗೂ ಜಲ್ ಜೀವನ್ ಮಿಷನ್ ಯೋಜನೆ ಯಡಿ 160 ಕೋಟಿ ರೂ. ಸೇರಿ ಒಟ್ಟು 1,200 ಕೋಟಿ ರೂ. ಸರ್ಕಾರ ಗುತ್ತಿಗೆದಾರರಿಗೆ ನೀಡ ಬೇಕಿದೆ ಎಂದರು.




ಮೂರು ವರ್ಷಗಳಿಂದ ಬಿಲ್ ಹಣ ಬಿಡುಗಡೆಯಾಗದೇ ಗುತ್ತಿಗೆದಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಕೈಸಾಲ ಹಾಗೂ ಆಸ್ತಿಗಳ ಅಡಮಾನವರೆಗೆ ತಲುಪಿದ್ದಾರೆ, ಅನೇಕ ಮಂದಿ ಬಡ್ಡಿ ಹಣ ಕಟ್ಟಲಾಗದ ಪರಿಸ್ಥಿತಿಯಿಂದ ಆತ್ಮಹತ್ಯೆಗೂ ಶರಣಾಗಿದ್ದಾರೆ ಇದು ಸರ್ಕಾರದ ಗಮನಕ್ಕೆ ಬಂದರೂ ಸಹ ಹಣ ಬಿಡುಗಡೆ ಮಾಡಿಲ್ಲ ಎಂದು ಆಕ್ರೋಶ ಹೊರಹಾಕಿದರು.

ತಾಲ್ಲೂಕು ಅಧ್ಯಕ್ಷ ಕೆ.ಎನ್. ತೋಪೇಗೌಡ ಅವರು ಮಾತನಾಡಿ, ರಾಜ್ಯ ಸರ್ಕಾರ ಪ್ಯಾಕೇಜ್ ಗುತ್ತಿಗೆ ನೀಡುತ್ತಿದೆ. ಅದರಿಂದ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಸಾಕಷ್ಟು ಮಂದಿ ಗುತ್ತಿಗೆ ದಾರರು ಕೆಲಸ ಇಲ್ಲದೆ ಜೀವನ ನಡೆಸಲು ತೊಂದರೆ ಅನುಭವಿಸುತ್ತಿದ್ದಾರೆ, ಪ್ಯಾಕೇಜ್ ಗುತ್ತಿಗೆ ರದ್ದು ಮಾಡಿ ತುಂಡುಗುತ್ತಿಗೆ ನೀಡ ಬೇಕೆಂದು ಆಗ್ರಹಿಸಿದರು.

ಲೋಕೋಪಯೋಗಿ ಇಲಾಖೆಯಿಂದ ತಾಲ್ಲೂಕಿನಲ್ಲಿ ಕೆಲಸ ಮಾಡಿರುವ 65 ಕೋಟಿ ರೂ. ಬಾಕಿ ಇದೆ, ಜಿಲ್ಲಾ ಪಂಚಾಯಿತಿ ಇಂಜಿನೀಯರಿಂಗ್ ಕಚೇರಿ ಹಾಗೂ ಜಲ್ ಜೀವನ್ ಮಿಷನ್ ಕಾಮಗಾರಿ ಮಾಡಿರುವ 40 ಕೋಟಿಗೂ ಅಧಿಕ ರೂ. ಬಾಕಿ ಇದೆ. ಅದನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದ್ದಾರೆ.

ಸಾಕಷ್ಟು ಮಂದಿ ತಾಲ್ಲೂಕಿನ ಗುತ್ತಿಗೆದಾರರು ನಗರದಲ್ಲಿ ಇದ್ದಂತಹ ಮನೆಗಳನ್ನು ಮಾರಿ ಗ್ರಾಮೀಣ ಭಾಗಕ್ಕೆ ವಲಸೆ ಹೋಗುತ್ತಿದ್ದಾರೆ. ಬಾಕಿ ಹಣ ಬಿಡುಗಡೆ ಮಾಡದೇ ಹೋದರೆ ಇನ್ನೂ ಸಾಕಷ್ಟು ಮಂದಿ ಅಪ್ಪ ಮಾಡಿದ ಆಸ್ತಿಯನ್ನು ಮಾರಿ ಬ್ಯಾಂಕಿಗೆ ಬಡ್ಡಿ ಕಟ್ಟುವಂತಹ ಪರಿಸ್ಥಿತಿ ಬರಲಿದೆ. ದಯಮಾಡಿ ರಾಜ್ಯ ಸರ್ಕಾರ ಕೂಡಲೇ ಗುತ್ತಿಗೆದಾರರ ಬಾಕಿ ಹಣವನ್ನು ನೀಡಬೇಕೆಂದು ಒತ್ತಾಯಿಸಿದರು.

ಜೇಷ್ಠತೆಯ ಆಧಾರದ ಮೇಲೆ ಬಿಲ್ ಪಾವತಿ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದರೂ, ಹಣ ಬಿಡುಗಡೆ ಆಗಿಲ್ಲ. ತಾಲ್ಲೂಕಿನಲ್ಲಿ 500 ಗುತ್ತಿಗೆದಾರರು ಬೆಂಗಳೂರಿನ ಪ್ರತಿಭಟನೆಯಲ್ಲಿ ಪಾಲ್ಗೊಂಡು ಸರ್ಕಾರದ ಮೇಲೆ ಒತ್ತಡ ಹೇರಲಾಗುವುದೆಂದರು.

ಕಂಟ್ರಾಕ್ಟರ್ ಅಸೋಸಿಯೇಷನ್ ಅಂಡ್ ಕ್ಲಬ್‌ನಗೌರವಾಧ್ಯಕ್ಷ ಪ್ರವೀಣ್, ಉಪಾಧ್ಯಕ್ಷರಾದ ರಂಗಸ್ವಾಮಿ, ಯೋಗಣ್ಣ, ಕಾರ್ಯದರ್ಶಿ ರಮೇಶ್, ಸಹ ಕಾರ್ಯದರ್ಶಿ ರಾಮಕೃಷ್ಣೇಗೌಡ, ಖಜಾಂಚಿ ಪಾಂಡು, ನಿರ್ದೇಶಕರಾದ ಧರಣೇಶ್, ಗಂಗಾಧರ್, ನಂಜಪ್ಪ, ರಾಜು, ಶಂಕರ, ವೆಂಕಟೇಶ್, ಆಡಳಿತ ಮಂಡಳಿ ಮಾಜಿ ಪದಾಧಿಕಾರಿಗಳು, ಸದಸ್ಯರು ಹಾಗೂ ಗುತ್ತಿಗೆದಾರರು ಉಪಸ್ಥಿತರಿದ್ದರು.

# ಇಂದಿನಿಂದ ಎರಡು ದಿನ ಮಹಿಳಾ ಸಮಾವೇಶ

• ಪ್ರಜೋದಯ ವರದಿ

**ಹಾಸನ:** ಮಹಿಳೆಯರ ಮೇಲೆ ನಡೆಯುತ್ತಿರುವ ನಿರಂತರ ದೌರ್ಜನ್ಯ ಖಂಡಿಸಿ ಪ್ರಬಲ ಹೋರಾಟ ರೂಪಿಸುವ ಉದ್ದೇಶದಿಂದ ಮಾ.7 ಹಾಗು 8 ರಂದು ನಗರದಲ್ಲಿ ಹಕ್ಕೊತ್ತಾಯ ಜಾಥಾ ಹಾಗು ಮಹಿಳಾ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಲೇಖಕಿ ಹೆಚ್.ಎಸ್. ಅನುಪಮಾ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ರಾಷ್ಟ್ರ ಸ್ವಾತಂತ್ರ್ಯ ಸಾಧಿಸಿ ದಶಕ ಗಳೇ ಕಳೆದರೂ ಮಹಿಳಾ ಸ್ವಾತಂತ್ರ್ಯ ಇಲ್ಲವಾಗಿದೆ. ಅತ್ಯಾಚಾರ, ದೌರ್ಜನ್ಯ, ಬಾಲ ಕಾರ್ಮಿಕ, ಜೀತ ಪದ್ಧತಿ, ನಿರುದ್ಯೋಗ, ಅನಕ್ಷರತೆ ಎಂಬುದು ಸ್ತ್ರೀಯರನ್ನು ಹೆಚ್ಚಾಗಿ ಕಾಡುತ್ತಿದೆ. ಈ ಸಂಬಂಧ ಜಾಗೃತಿ ಮೂಡಿಸಲು ರಾಜ್ಯಾದ್ಯಂತ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದರು.

ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದಿಂದ ನಡೆಯುತ್ತಿರುವ 14ನೇ ಕಾರ್ಯಕ್ರಮ ಇದಾಗಿದೆ. ಸಾಮಾಜಿಕ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಹಾಗು ಸಾಮಾಜಿಕ, ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಸಮಾರಂಭಉದ್ಘಾಟಿಸಲಿದ್ದಾರೆಂದರು.




ಎರಡೂ ದಿನ ಮಹತ್ವದ ವಿಚಾರಗಳ ಕುರಿತು ಗೋಷ್ಠಿಗಳು ನಡೆಯಲಿದ್ದು, ರಾಜ್ಯ ಹಾಗು ಹೊರ ರಾಜ್ಯದ ಸಂಪನ್ಮೂಲ ವ್ಯಕ್ತಿಗಳು ವಿಷಯ ಮಂಡಿಸಲಿದ್ದಾರೆ. ಮಾ.7ರ ಶನಿವಾರ ಬೆಳಿಗ್ಗೆ 9.30ಕ್ಕೆ ಮಹಾರಾಜ ಪಾರ್ಕ್‌ನಿಂದ ಮೆರವಣಿಗೆ ನಡೆಯಲಿದೆ. ಹಾಸನಾಂಬ ಕಲಾಕ್ಷೇತ್ರದಲ್ಲಿ ವೇದಿಕೆ ಕಾರ್ಯಕ್ರಮ ಏರ್ಪಡಿಸಿದ್ದು, ಮಹಿಳಾ ಚೈತನ್ಯ ದಿನದ ಕುರಿತು ಮೈಸೂರಿನ ಡಾ. ಸುಕನ್ಯಾ ಕನಾರಳ್ಳಿ ಮಾತನಾಡುವರು. ತೀಸ್ತಾ ಸೆಟಲ್ವಾಡ್ ದಿಕ್ಸೂಚಿ ಮಾತುಗಳನ್ನಾಡಲಿದ್ದಾರೆ. ವಿಬಿ-ಜಿ-ರಾಮ್-ಜಿ ರದ್ದಾಗಲಿ, ಮನರೇಗಾ ಮತ್ತೆ ಜಾರಿಯಾಗಲಿ ಎಂಬ ವಿಷಯ ಕುರಿತು ಮನರೇಗಾ ರಕ್ಷಣಾ ಒಕ್ಕೂಟದ ದೇವಿ ಅವರು ವಿಷಯ ಮಂಡಿಸಲಿದ್ದಾರೆ. ಈ ವೇಳೆ ಮಹಿಳಾ ಸಮಾವೇಶದ ಸಾಂದರ್ಭಿಕ ಗ್ರಂಥ ಹಾಸನ ಮಣ್ಣಿನ ಹೆಣ್ಣು ದನಿಗಳು ಬಿಡುಗಡೆಯಾಗಲಿದೆ ಎಂದರು.

ಸಂಜೆ 6 ಗಂಟೆಗೆ ಮಹಾವೀರ ವೃತ್ತದಲ್ಲಿ ಮೌನ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಸ್ತ್ರೀ ರೋಗ ತಜ್ಞೆ ಡಾ॥ ಎ.ಸಾವಿತ್ರಿ ಅವರು ಉದ್ಘಾಟಿಸುವರು. ಮಾ.8ರಂದು ಮಹಿಳಾ ದೌರ್ಜನ್ಯ: ಸವಾಲುಗಳು, ಬಿಡುಗಡೆಯ ಸಾಧ್ಯತೆಗಳು ಎಂಬ ವಿಚಾರ ಕುರಿತು ಗೋಷ್ಠಿ ನಡೆಲಿದೆ. ಬೆಳಗಾವಿ ವಿಭಾಗ ಪ್ರಾದೇಶಿಕ ಆಯುಕ್ತೆ ಕೆ.ಎಂ.ಜಾನಕಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಅರಿವಿನ ಪಯಣ ಎಂಬ ಕಿರು ಹೊತ್ತಿಗೆಯನ್ನು ಬಿಡುಗಡೆ ಮಾಡಲಾಗುತ್ತದೆಂದರು. ಕಾರ್ಯಕ್ರಮದ ಪೋಸ್ಟರ್ ಸಹ ಬಿಡುಗಡೆ ಮಾಡಲಾಯಿತು.

ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಪದಾಧಿಕಾರಿಗಳಾದ ಡಾ. ಸಬಿತಾ ಬನ್ನಾಡಿ, ಭಾನುಮತಿ, ಲೀಲಾವತಿ, ಶೈಲಜಾ, ಕಲಾವತಿ ಮಧುಸೂದನ್ ಹಾಜರಿದ್ದರು.

# ಚ.ರಾ.ಪಟ್ಟಣದಲ್ಲಿ ಸತ್ಯಸಾಯಿ ಪ್ರೇಮ ಪ್ರವಾಹಿನಿ ರಥಕ್ಕೆ ಸ್ವಾಗತ



**ಚನ್ನರಾಯಪಟ್ಟಣ:** ಶ್ರೀ ಸತ್ಯಸಾಯಿ ಬಾಬಾ ಅವರ 100ನೇ ಜನ್ಮ ವಾರ್ಷಿಕೋತ್ಸವದ ಪ್ರಯುಕ್ತ ದೇಶಾದ್ಯಂತ ಸಂಚರಿಸುತ್ತಿರುವ ಶ್ರೀ ಸತ್ಯಸಾಯಿ ಪ್ರೇಮ ಪ್ರವಾಹಿನಿ ರಥಯಾತ್ರೆಗೆ ಪಟ್ಟಣದಲ್ಲಿ ಅದ್ದೂರಿ ಸ್ವಾಗತ ಕೋರಲಾಯಿತು.

ಆಂಧ್ರಪ್ರದೇಶದ ಪುಟ್ಟಪರ್ತಿಯಿಂದ ಆರಂಭಗೊಂಡ ಈ ರಥಯಾತ್ರೆ, ಶಿವಮೊಗ್ಗಾ, ಚಿಕ್ಕಮಗಳೂರು ಮಾರ್ಗವಾಗಿ ಜಿಲ್ಲೆ ಪ್ರವೇಶಿಸಿದೆ. ದೇಶದಾದ್ಯಂತ 50,000 ಗ್ರಾಮಗಳನ್ನು ಸಂಚರಿಸಿ 3,50,000 ಕಿ.ಮೀ. ಯಾತ್ರೆ ಪೂರ್ಣಗೊಳಿಸಿದೆ.

ಶ್ರವಣಬೆಳಗೊಳ ಹೋಬಳಿಯ ಕೊತ್ತನಘಟ್ಟದಲ್ಲಿ ಅರ್ಥಪೂರ್ಣವಾಗಿ ಸ್ವಾಗತಿಸಲಾಯಿತು. ಕೆಂಪೇಗೌಡ ವೃತ್ತದ ಬಳಿಯಿಂದ ಪೂರ್ಣಕುಂಭ, ಕಳಸ, ವೇದಘೋಷ, ಮಂಗಳವಾದ್ಯ, ಕಲಾಮೇಳ, ಚಿಣ್ಣರ ವಿವಿಧ ವೇಷ ಭೂಷಣ, ಭಜನೆಯೊಂದಿಗೆ ಪಟ್ಟಣದ ಪ್ರಮುಖ ಬೀದಿ ಯಲ್ಲಿ ರಥದ ಮೆರವಣಿಗೆ ನಡೆಯಿತು. ಪಟ್ಟಣದ ಕೆಂಪೇಗೌಡ ವೃತ್ತದಿಂದ ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ಮೆರವಣಿಗೆ ಸಾಗಿತು. ಪಟ್ಟಣದ ಸಿಜಿಎಂಆರ್ ಕಲ್ಯಾಣ ಮಂಟಪದಲ್ಲಿ ಸಭಾ ಕಾರ್ಯಕ್ರಮ ನಡೆಯಿತು.

ಶ್ರೀ ಸತ್ಯಸಾಯಿ ಸೇವಾ ಸಂಸ್ಥೆಗಳ ಜಿಲ್ಲಾಧ್ಯಕ್ಷ ಡಾ.ಕೆ.ಆರ್.ನಾಗರಾಜ್ ಅವರು ಮಾತನಾಡಿ, ದೇಶಾದ್ಯಂತ ಐದು ರಥಗಳು ಸಂಚರಿಸುತ್ತಿದ್ದು, ಅವುಗಳಲ್ಲಿ ಒಂದು ರಥ ಪಟ್ಟಣಕ್ಕೆ ಆಗಮಿಸಿದೆ. ಭಕ್ತರ ಉತ್ಸಾಹ ಹಾಗು ಭಾವನಾತ್ಮಕ ಸ್ವಾಗತ ಸಂತೋಷ ತಂದಿದೆ. ಸಾರ್ವಜನಿಕರು, ಮಾಧ್ಯಮಗಳು ಹಾಗು ಪೊಲೀಸ್ ಇಲಾಖೆ ಸಹಕಾರ ನೀಡಿದ್ದಾರೆಂದರು.

ವೇದ ಘೋಷ, ಬಾಲ ವಿಕಾಸ ಮಕ್ಕಳಿಂದ ಭರತ ನಾಟ್ಯ, ವಿಷ್ಣು, ಲಲಿತಾ ಸಹಸ್ರನಾಮ, ಸ್ವಾಮಿ ಸಂದೇಶ, ಶ್ರೀ ಸತ್ಯಸಾಯಿ ಸೇವಾ ಸಂಸ್ಥೆಯ ಯುವಕ 'ರಿಂದ ಗೀತಾ ಕಾರ್ಯಕ್ರಮ, ದಿವ್ಯ ದರ್ಶನ, ಪಾದ ನಮಸ್ಕಾರ, ಮಹಾ ಮಂಗಳಾರತಿ ಬಳಿಕ ಪ್ರಸಾದ ವಿನಿಯೋಗ ನಡೆಯಿತು. ಓಂಕಾರ, ಸುಪ್ರಭಾತ, ನಗರ ಸಂಕೀರ್ತನೆ ನಂತರ ಮಹಾ ಮಂಗಳಾರತಿ ಬಳಿಕ ರಥ ಹೊಳೆನರಸೀಪುರದತ್ತ ಪ್ರಯಾಣ ಬೆಳೆಸಿತು.

## ಪ್ರತಿ ಕುಟುಂಬದಲ್ಲೂ ಇದ್ದಾರೆ ಕಲಾವಿದರು | ಪ್ರಾಚೀನ ಸಂಸ್ಕೃತಿ ಉಳಿವು

# ಪೌರಾಣಿಕ ನಾಟಕಗಳಿಗೆ ಹೆಸರುವಾಸಿ ಹಗರೆ ಗ್ರಾಮ

• ಪ್ರಜೋದಯ ವರದಿ

**ಹಾಸನ:** ಆಧುನಿಕ ತಂತ್ರಜ್ಞಾನ ಯುಗದಲ್ಲಿ ಪೌರಾಣಿಕ ನಾಟಕ ಪ್ರದರ್ಶನಗಳು ಕಣ್ಮರೆಗೆ ಸರಿಯುತ್ತಿವೆಯೆಂಬ ಆತಂಕದ ನಡುವೆಯೂ ಬೇಲೂರು ತಾಲ್ಲೂಕಿನ ಹಗರೆ ಗ್ರಾಮದಲ್ಲಿ ಕಲಾವಿದರು ಪ್ರಾಚೀನ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಭವಿಷ್ಯದ ಪೀಳಿಗೆಗೆ ಕೊಡುಗೆಯಾಗಿ ಕಾಪಿಟ್ಟುಕೊಂಡಿದ್ದಾರೆ.

ಟಿವಿಗಳಲ್ಲಿ ಪ್ರಸಾರವಾಗುವ ಸಿನಿಮಾ, ಧಾರಾವಾಹಿ, ಮೊಬೈಲ್‌ಗಳ ರೀಲ್ಸ್‌ಗೆ ಜನರು ಹೆಚ್ಚಿನ ಒಲವು ತೋರುತ್ತಿದ್ದಾರೆ. ಎರಡು ನಿಮಿಷದ ವಿಡಿಯೋ ನೋಡಲು ಜನರಿಗೆ ವ್ಯವಧಾನ ಇಲ್ಲವೆಂಬ ಪರಿಸ್ಥಿತಿ ಇರುವಾಗ ನಾಲ್ಕೈದು ಗಂಟೆಯ ನಾಟಕ ನೋಡುವುದು ಅಸಾಧ್ಯವೆಂಬ ಮಾತುಗಳಿವೆ. ಆದರೆ ಪ್ರಾಚೀನ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಗ್ರಾಮಸ್ಥರು ಪಣತೊಟ್ಟು ನಿಂತಿದ್ದಾರೆ. ಗ್ರಾಮದ ಶ್ರೀ ದೇವಿರಮ್ಮ ಕೃಪಾಪೋಷಿತ ನಾಟಕ ಮಂಡಳಿಯು ಇಂದಿಗೂ ಸಹ ಸುತ್ತಮುತ್ತಲ ಹಳ್ಳಿಗಳಿಗೆ ಪೌರಾಣಿಕ ನಾಟಕಗಳ ತವರೂರು ಎನಿಸಿಕೊಂಡಿದೆ.

ಮಾದೀಹಳ್ಳಿ ಹೋಬಳಿ ಹಗರೆ ಗ್ರಾಮದ ಕಲಾವಿದರ ತಂಡ ನಾಟಕಗಳ ಪ್ರದರ್ಶನದಲ್ಲಿ ಪ್ರಸಿದ್ಧಿ ಪಡೆದಿದ್ದು ಪೂರ್ವಿಕರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗುತ್ತಿದೆ. ಪ್ರತಿ ಮನೆಗೆ ಕನಿಷ್ಟ ಒಬ್ಬರಾದರೂ ಕಲಾ ಸೇವೆಯಲ್ಲಿ ತೊಡಗಿಸಿಕೊಂಡಿರುವುದು ಇಲ್ಲಿನ ವಿಶೇಷ. ಒಂದು ವರ್ಷವೂ ಸಹ ನಾಟಕ ಪ್ರದರ್ಶನ ನಿಲ್ಲಿಸದೆ ಕಳೆದ 100 ವರ್ಷಗಳಿಂದ ಪ್ರತೀತಿ ಮುಂದುವರಿಸಿ ಕೊಂಡು ಬರಲಾಗಿದೆ. ಗ್ರಾಮದ ರಾಜಯ್ಯ, ಲಕ್ಕೇಗೌಡ, ಮಂಜೇಗೌಡ, ರಾಜೇಗೌಡ, ಬೀರೇಗೌಡ ಸೇರಿ ಹಿರಿಯರ ಮಾರ್ಗದರ್ಶನದಲ್ಲಿ 25ಕ್ಕೂ ಹೆಚ್ಚು ಯುವಕರ ತಂಡ ಇಂದಿಗೂ ಸಹ ಬಣ್ಣ ಹಚ್ಚಿಕೊಳ್ಳಲು ನಾ ಮುಂದು ತಾ ಮುಂದು ಎಂದು ಬರುತ್ತಾರೆ.



**ದಶಕಗಳಿಂದ ಕಲಾ ಸೇವೆಯಲ್ಲಿ ತಲ್ಲೀಣ**

ಸುಮಾರು 40 ವರ್ಷಗಳಿಂದ ಸತತವಾಗಿ ಒಂದು ವರ್ಷವು ಸಹ ತಪ್ಪಿಸದೆ ಕಲಾ ಪ್ರದರ್ಶನ ಮಾಡುತ್ತಿರುವ ಸಣ್ಣೇಗೌಡ, ಶೇಖರಯ್ಯ, ಪುಟ್ಟರಾಜು ಅವರು ಯುವ ಕಲಾವಿದರಿಗೆ ಮಾದರಿಯಾಗಿದ್ದಾರೆ. ಗ್ರಾಮದ ಆರಾಧ್ಯ ದೈವ ದೇವಿರಮ್ಮನವರ ದೇವರ ಜಾತ್ರೆ ಬಂತೆಂದರೆ ಗ್ರಾಮವೇ ರಂಗ ಮಂದಿರವಾಗುತ್ತದೆ. ರೈತರು, ಯುವಕರು, ಕಾರ್ಮಿಕರು, ವ್ಯಾಪಾರಿಗಳು, ಆಟೋ ಚಾಲಕರು, ವಿದ್ಯಾರ್ಥಿಗಳು, ಸರ್ಕಾರಿ ನೌಕರರೂ ಸಹ ಬಣ್ಣ ಹಚ್ಚಿ ಕಲಾ ಪ್ರದರ್ಶನ ಮಾಡು ತ್ತಾರೆ. ಅವರೆಲ್ಲಾ ಕಲಾವಿದರಾಗಿ ಮಾರ್ಪಟ್ಟ ನಂತರ ಸಂಭಾಷಣೆ, ವೇಷಭೂಷಣ, ಸಂಗೀತ, ಭಾವಾಭಿನಯ ಕಲಿತ ಬಳಿಕ ಪೂರ್ಣಕಾಲಿಕ ಕಲಾವಿದರಾಗಿ ಪ್ರವೃತ್ತಿ ಪ್ರಾರಂಭಿಸುತ್ತಾರೆ.

ದೇವಿರಮ್ಮ ನಾಟಕ ಮಂಡಳಿಯ ಕಲಾವಿದರ ತಂಡ ಪ್ರತಿವರ್ಷ ಸತ್ಯ ಮಹಾಂದಾತ ಅಥವಾ ಶನಿ ಲಕ್ಷ್ಮಿಯರ ವಾಗ್ವಾದ ನಾಟಕ ಪ್ರದರ್ಶನ ಮಾಡುತ್ತಿದೆ. ದಿ॥ ಪಾಲಾಕ್ಷಮೂರ್ತಿ ಅವರು ಹಾರ್ಮೋನಿಯಂ ವಿದ್ಯೆಯನ್ನು ದಾನವಾಗಿ ನೀಡಿದರೆ ಲಕ್ಕೇಗೌಡರ ತಬಲಾ ನಾದ ಕರುಣೆಯನ್ನು ಎಲ್ಲರೂ ಸ್ಮರಿಸುತ್ತಾರೆ. ಇಂದಿಗೂ ಸಹ ಗ್ರಾಮದಲ್ಲಿ ಒಂದು ಭಜನಾ ತಂಡವಿದ್ದು ಶನಿ ಮಹಾತ್ಮೆ ಕಥೆಹೇಳುತ್ತಾರೆ.ಮಹಾಭಾರತ, ರಾಮಾಯಣ, ಶಿವಪುರಾಣಗಳನ್ನು ಗ್ರಾಮ ಗ್ರಾಮಗಳಿಗೆ ತೆರಳಿ ಹೇಳುತ್ತಿದ್ದ ಪರಿಪಾಠ ಇತ್ತಾದರೂ ಇತ್ತೀಚೆಗೆ ಆ ಸಂಸ್ಕೃತಿ ತೆರೆಮರೆಗೆ ಸರಿದಿದೆ.

ಹಗರೆ ಸುತ್ತಲಿನ ಹತ್ತಕ್ಕೂ ಹೆಚ್ಚು ಗ್ರಾಮಗಳಲ್ಲಿ ನಾಟಕ ಪ್ರದರ್ಶನಗೊಳ್ಳುತ್ತವೆ.

ಪ್ರತಿ ವರ್ಷ ಮಾರ್ಚ್, ಏಪ್ರಿಲ್‌ನಲ್ಲಿ ಹಗರೆ, ಹಳೆಹಗರೆ, ಮಾದೀಹಳ್ಳಿ, ಶಿವಯೋಗಿಪುರ, ಕಲ್ಯಾಣಪುರ, ಅಡವಿ ಬಂಟೇನಹಳ್ಳಿ, ಅಂಗಡಿಹಳ್ಳಿ, ಹನಿಕೆ, ಆಂದಲೆ ಸೇರಿ ಇತರೆ ಗ್ರಾಮಗಳಲ್ಲಿ ಗ್ರಾಮ ದೇವರುಗಳ ಜಾತ್ರಾ ಮಹೋತ್ಸವ ನಡೆಯುತ್ತವೆ. ಸತ್ಯವ್ರತ ಶನಿಪ್ರಭಾವ, ಕುರುಕ್ಷೇತ್ರ, ದೇವಿ ಮಹಾತ್ಮೆ ಸೇರಿ ವಿವಿಧ ಪೌರಾಣಿಕ ನಾಟಕಗಳು ಪ್ರದರ್ಶನಗೊಳ್ಳುತ್ತವೆ. ಆಧುನಿಕ ದಿನಗಳಲ್ಲೂ ಪ್ರೇಕ್ಷಕರ ಸಂಖ್ಯೆ ಹೆಚ್ಚುತ್ತಿರುವುದು ಆಶಾ ದಾಯಕ ಬೆಳವಣಿಗೆಯಾಗಿದೆ.

**ಇಂದು ಶನಿ ಲಕ್ಷ್ಮಿಯರ ವಾಗ್ವಾದ ನಾಟಕ**

ಹಗರೆ ಗ್ರಾಮ ದೇವತೆ ಶ್ರೀ ದೇವೀರಮ್ಮ ಜಾತ್ರಾ ಮಹೋತ್ಸವ ಪ್ರಯುಕ್ತ ಮಾ.7ರ ಶನಿವಾರ ರಾತ್ರಿ ದೇವಿರಮ್ಮ ಕೃಪಾಪೋಷಿತ ನಾಟಕ ಮಂಡಳಿಯ ಕಲಾವಿದರಿಂದ ಶನಿ ಲಕ್ಷ್ಮಿಯರ ವಾಗ್ವಾದ ಪೌರಾಣಿಕ ನಾಟಕ ಪ್ರದರ್ಶನಗೊಳ್ಳಲಿದೆ.

ಮಲ್ಲೇಶ್ವರ ಸ್ವಾಮಿ ದೇವಸ್ಥಾನದ ಮುಂಭಾಗ ಕೊಂಡೋತ್ಸವ, ಅರಣ್ಯದೊಳಗಿರುವ ದೇವಿರಮ್ಮ ದೇವಾಲಯದಲ್ಲಿ ಉತ್ಸವ ಅಭಿಷೇಕ, ಸಿಡಿ ಮಹೋತ್ಸವ ನೆರವೇರಲಿದ್ದು, ಸಕಲ ತಯಾರಿ ಮಾಡಿಕೊಳ್ಳಲಾಗಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019